1051 1052 Rare

Rare

[illegible] ಬಂದ ಸಂಪತ್ತು

(ಕಥಾ ಸಂಗ್ರಹ)

ಲೇ:- ಹಿ. ಮ. ನಾಗಯ್ಯ

ಕೋಸಂ:- 021884

ಪರಾಮರ್ಶೆಗೆ ಮಾತ್ರ

'ಸಿರಿಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ

'ಸಿರಿಗನ್ನಡ' ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ ೫೮೩ ೨೭೬

'ಸಿರಿಗನ್ನಡ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ. ಹಂಪಿ

ಒಲಿದು ಬಂದ ಸರಸ್ವತಿ

ಹಿ. ಮ. ನಾಗಯ್ಯ



ಹಾರ ಪ್ರಕಟಣಾಲಯ

ಓಂಕಾರ ಸಾಹಿತ್ಯಮಾಲೆ — ೧.

ಒಲಿದು ಬಂದ ಸರಸ್ವತಿ

(ಕಥಾಸಂಗ್ರಹ)

ಹಿ. ಮ. ನಾಗಯ್ಯ

AKSHARA GRANTHALAYA
ACC.NO. S021884

ಓಂಕಾರ ಪ್ರಕಟಣಾಲಯ
ಬೆಂಗಳೂರು – ೨.

ಮೊದಲನೆಯ ಮುದ್ರಣ:
೧, ಜನವರಿ, ೧೯೫೨.

[ಎಲ್ಲ ಹಕ್ಕುಗಳನ್ನೂ ಕಾದಿಡಲಾಗಿದೆ.]

S 021884

ಬೆಲೆ:
ಒಂದೂಕಾಲು ರೂಪಾಯಿ

8K3.6
NAG

ಮುದ್ರಣಕಾರರು, ಪ್ರಕಾಶಕರು:
ಬಿ. ಎಸ್. ನಾರಾಯಣರಾವ್,
"ಓಂಕಾರ್ ಪವರ್ ಪ್ರೆಸ್", ಅರಳೇಪೇಟೆ, ಬೆಂಗಳೂರು ನಗರ.

ಗಣಕೀಕರಣ ಆಗಿದೆ.

ಪ್ರಕಾಶಕರ ಮಾತು

ಕನ್ನಡ ಸಾಹಿತ್ಯದ ಸೇವೆಯನ್ನೇ ಮೂಲಗುರಿಯನ್ನಾಗಿಟ್ಟುಕೊಂಡು, ನಾವು ನಮ್ಮ ಈ "ಓಂಕಾರ ಸಾಹಿತ್ಯಮಾಲೆ"ಯನ್ನು ಪ್ರಾರಂಭಿಸಿದ್ದೇವೆ. ಅನೇಕ ತೊಂದರೆಗಳಿರುವ ಈ ಕಾಲದಲ್ಲಿ ಸಾಹಿತ್ಯಮಾಲೆಯನ್ನು ನಡೆಸಿಕೊಂಡುಬರುವುದು ಕಷ್ಟಸಾಧ್ಯವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಆದರೆ, ಸಾಹಿತ್ಯ ಸಂಸ್ಕೃತಿಗಳನ್ನು ಸಹೃದಯತೆಯಿಂದ ಬೆಳಸಿಕೊಂಡು ಬಂದ ಕನ್ನಡಿಗರು ಅಪಾರ ಬೆಂಬಲವನ್ನೀಯುತ್ತಾರೆಂಬ ಒಂದೇ ಒಂದು ಆಶಾಭಾವನೆಯಿಂದ ನಾವು ಈ ಮಾಲೆಯನ್ನು ಪ್ರಾರಂಭಿಸಲು ಧೈರ್ಯ ಮಾಡಿದ್ದೇವೆ.

ಕನ್ನಡ ಬಂಧುಗಳಿಗೆ, ಸುಲಭ ಬೆಲೆಯಲ್ಲಿ, ಒಳ್ಳೆಯ ಸಾಹಿತ್ಯವನ್ನು, ಸುಂದರವಾದ ಪುಸ್ತಕಗಳ ರೂಪದಲ್ಲಿ ಒದಗಿಸಬೇಕೆಂಬುದೇ ನಮ್ಮ ಘನೋದ್ದೇಶ. ನಮ್ಮ ಈ ಉದ್ದೇಶದ ಸಾಧನೆ ಸಹೃದಯರಾದ ಕನ್ನಡ ಬಂಧುಗಳ ಪವಿತ್ರ ಪ್ರೋತ್ಸಾಹವನ್ನೇ ಅವಲಂಬಿಸಿಕೊಂಡಿದೆಯೆಂದು ಎಷ್ಟು ಸಲ ಹೇಳಿದರೂ ಸಾಲದಾಗಿದೆ.

"ಓಂಕಾರ ಸಾಹಿತ್ಯಮಾಲೆ"ಯ ಮೊದಲನೆ ಕುಸುಮವನ್ನಾಗಿ ಅರಳಿಸಲು, ತರುಣ ಸಾಹಿತಿಗಳಾದ ಶ್ರೀ ಹಿ. ಮ. ನಾಗಯ್ಯನವರು, ತಮ್ಮ ಈ ಕಥಾಸಂಗ್ರಹವನ್ನು ಕೊಟ್ಟದ್ದಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿದ್ದೇವೆ. ನಮ್ಮ ಪ್ರಕಾಶನ ಕಾರ್ಯಕ್ಕೆ, ಕನ್ನಡದ ಹಿರಿಯ ಕಿರಿಯ ಸಾಹಿತಿಗಳೆಲ್ಲಾ ಪ್ರೋತ್ಸಾಹವೀಯುತ್ತಾರೆಂಬ ಅಚಲ ವಿಶ್ವಾಸ ನಮಗಿದೆ. ಒಟ್ಟಿನಲ್ಲಿ ಕನ್ನಡಿಗರ, ಕನ್ನಡ ಸಾಹಿತಿಗಳ ಪ್ರೋತ್ಸಾಹ-ಸಹಕಾರಗಳು ನಮ್ಮ ಬೆಂಬಲಕ್ಕಿದೆಯೆಂಬ ಒಂದೇ ಒಂದು ಧೈರ್ಯ ನಮಗಿದೆ.

—ಬಿ. ಎಸ್. ನಾರಾಯಣರಾವ್.

ಮುನ್ನುಡಿ

ಸಾಹಿತ್ಯವು ಜನಜೀವನದ ಕೈಗನ್ನಡಿಯಾಗಬೇಕು. ಸತ್ಯಚಿತ್ರಗಳನ್ನು ಸಜೀವವಾಗಿ ಚಿತ್ರಿಸಿ, ಜನತೆಯ ಮುಂದಿಡುವುದು ಸಾಹಿತಿಯ ಕರ್ತವ್ಯ. ಸತ್ಯ ಕಠೋರವಾದದ್ದು; ಅಪ್ರಿಯವಾದ ಸತ್ಯವನ್ನು ಹೇಳಿದರೆ, ಸಮಾಜ ಸಹಿಸಿಕೊಳ್ಳುವುದಿಲ್ಲ! ಸಾಹಿತಿಯಾದವನು – ಸಾಹಿತಿಯಾಗುವವನು – ಈ ಎಲ್ಲ ಮುಖಗಳಲ್ಲಿ ದೃಷ್ಟಿಯನ್ನು ಹರಿಸಬೇಕು. ಅಂತೆಯೇ ಈವೊಂದು ದೃಷ್ಟಿಯನ್ನು ನಾನು ಇಲ್ಲಿ – ಆದಷ್ಟು ಮಟ್ಟಿಗೆ – ಅನುಸರಿಸಿದ್ದೇನೆ.

"ಒಲಿದು ಬಂದ ಸರಸ್ವತಿ" — ನನ್ನ ಮೂರನೆಯ ಪುಸ್ತಕ; ಮೊದಲನೆಯ ಕಥಾಸಂಗ್ರಹ. ಈ ಸಂಗ್ರಹದಲ್ಲಿ "ಒಲಿದು ಬಂದ ಸರಸ್ವತಿ" ಎಂಬ ಹೆಸರಿನ ಕಥೆಯೊಂದಿದೆ. ಈ ಪುಸ್ತಕಕ್ಕೆ, ಈ ಹೆಸರನ್ನೇ ಇಟ್ಟಿದ್ದಕ್ಕೆ – ಎರಡು ಮಾತು ಹೇಳಬೇಕಾಗಿದೆ. ನಾವು ಸರಸ್ವತಿಯನ್ನು ವಿದ್ಯಾಧಿದೇವತೆಯೆಂದು ನಂಬಿದ್ದೇವೆ; ಪೂಜಿಸುತ್ತೇವೆ. ಈ ಸಂಗ್ರಹದ ಕಥೆಗಳೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ವಿದ್ಯಾರ್ಥಿ ಜೀವನವನ್ನೇ ಚಿತ್ರಿಸುತ್ತವೆ. ಸರಸ್ವತಿಯ ಉಪಾಸಕರಾದ ವಿದ್ಯಾರ್ಥಿಗಳ ಬಹುಮುಖ ಜೀವನವನ್ನು ಚಿತ್ರಿಸಿರುವುದರಿಂದ ಈ ಸಂಗ್ರಹಕ್ಕೆ "ಒಲಿದು ಬಂದ ಸರಸ್ವತಿ" ಎಂದು ಹೆಸರಿಡಲಾಗಿದೆ.

ನನ್ನ ಈ ಸಣ್ಣ ಕೃತಿಯನ್ನು – ನನ್ನ ವಿದ್ಯಾರ್ಥಿ ಜೀವನದಲ್ಲಿ ಬೆಳಕು ಕಾಣಿಸಿದ – ಪೂಜ್ಯ ವಿದ್ಯಾಗುರು ಶ್ರೀ ಆಲೂರು ಹನುಮಂತರಾಯರಿಗೆ ಅರ್ಪಿಸಿರುವುದರಿಂದ ನನಗುಂಟಾಗಿರುವ ಸಂತೋಷವನ್ನು ಇಷ್ಟೇ – ಎಂದು ಹೇಳಲಾರೆ. ನನ್ನ ಈ ಅರ್ಪಣೆಗೆ ಅನುಮತಿ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಅನಂತ ವಂದನೆಗಳು.

ಸಾಹಿತ್ಯ ಕೃತಿಗಳು ಬೆಳಕಿಗೆ ಬರಲು ಪ್ರಕಾಶಕರ ನೆರವು ಅಗತ್ಯವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಓಂಕಾರ್ ಮುದ್ರಣಾಲಯದ

ಒಡೆಯರಾದ ಶ್ರೀ ಬಿ. ಎಸ್. ನಾರಾಯಣರಾಯರು, ಈ ನನ್ನ ಕೃತಿಯನ್ನು ತಮ್ಮ ಸಾಹಿತ್ಯಮಾಲೆಯ ಮೊದಲನೆಯ ಕುಸುಮವನ್ನಾಗಿ ಅರಳಿಸಿದ್ದಕ್ಕೆ ಕೃತಜ್ಞನಾಗಿದ್ದೇನೆ.

ಅಂದವಾದ ಮುಖಚಿತ್ರವನ್ನು ಬರೆದುಕೊಟ್ಟ ಶ್ರೀ ಅರಗಂರವರಿಗೆ ನನ್ನ ವಂದನೆಗಳು ಸಲ್ಲಬೇಕು. ಮುದ್ರಣದ ಸೌಂದರ್ಯದ ಬಗ್ಗೆ ನಾನು ಬೇರೆ ಹೇಳಬೇಕಾಗಿಲ್ಲ; ಪುಸ್ತಕವೇ ಸಾಕ್ಷಿ.

ಈ ಎಲ್ಲವುಗಳಿಗೆ ಮೂಲಭೂತವಾದ ಕನ್ನಡ ಬಂಧುಗಳ ಸಹೃದಯತೆ ಬಹು ಮುಖ್ಯವಾದುದು. ನನ್ನ ಈ ಸಂಗ್ರಹವನ್ನು ಸಹೃದಯಿಗಳಾದ ಕನ್ನಡಿಗರು, ಮೆಚ್ಚಿಕೊಂಡು ಅಪೂರ್ವ ಪ್ರೋತ್ಸಾಹವನ್ನೀಯುತ್ತಾರೆಂಬ ಅಚಲವಾದ ನಂಬಿಕೆಯುಳ್ಳವನಾಗಿದ್ದೇನೆ.

ಬೆಂಗಳೂರು
೧, ಜನವರಿ, ೧೯೫೨.

ಹಿ. ಮ. ನಾಗಯ್ಯ.

ನಮ್ಮ ಮುಂದಿನ ಪ್ರಕಟಣೆಗಳು

★

ಶ್ರೀ ಚಿ. ಸದಾಶಿವಯ್ಯನವರ

ಆಶಾರಾಣಿ

(ಕಥೆ)

●

ಶ್ರೀ ಅರ್ಚಿಕ ವೆಂಕಟೇಶರ

ಹೆಣ್ಣು ಹೆಣ್ಣಲ್ಲ

(ಕಾದಂಬರಿ)

●

ಶ್ರೀ ಹಿ. ಮ. ನಾಗಯ್ಯನವರ

ಬಾಳಕನಸು

(ಕಾದಂಬರಿ)

●

ಶ್ರೀ ಕುಮಾರ ವೆಂಕಣ್ಣನವರ

ದೀಪದ ಕೆಳಗೆ

(ಕಾದಂಬರಿ)

●

ಶ್ರೀ ಬಿ. ವಿ. ವೆಂಕಟೇಶಯ್ಯನವರ

ಸರೋಜರಮಣಿ

(ಪತ್ತೇದಾರಿ ಕಾದಂಬರಿ)

●

ಶ್ರೀ ಭಾವಾನಂದರ

ಕಥಾ ಸಂಗ್ರಹ

ಅ ರ್ಪ ಣೆ

ಪೂಜ್ಯ ವಿದ್ಯಾಗುರು
ಶ್ರೀ ಆಲೂರು ಹನುಮಂತರಾಯರ
ಅಡಿದಾವರೆಗಳಲ್ಲಿ ಈ ಕೃತಿಯನ್ನು
ಅರ್ಪಿಸಿದ್ದೇನೆ.

ಪರಿವಿಡಿ

ಯೌವ ರೈಲು!!

೧

ಶಿವಪ್ರಸಾದನಿಗೆ,

ನೀನು ನಮ್ಮ ಮನೆಗೆ ಬಂದು ಹದಿನಾಲ್ಕು ವರ್ಷಗಳಾದವು. ಬೀದಿಯ ಭಿಕಾರಿಯಾಗಿದ್ದ ನಿನ್ನನ್ನು ಮನೆಗೆ ಕರೆತಂದು, ಸಲಹಿ, ಬಿ.ಎ. ವರೆಗೆ ಓದಿಸಿದ್ದೂ ಆಯಿತು. ನೀನಿನ್ನು ನಮ್ಮ ಮನೆಯಲ್ಲಿರತಕ್ಕವನಲ್ಲ. ಇಷ್ಟು ದಿನಸ ಹೇಳಿದ ಮಾತುಗಳು ನಿನ್ನ ಕಿವಿಗೆ ಬೀಳಲಿಲ್ಲ. ನೀನು ವಿಶ್ವಾಸಘಾತುಕನಾಗಿರುವಿ. ನೀನು ಈ ದಿನವೇ ಖಂಡಿತವಾಗಿ ಮನೆಬಿಟ್ಟು ಹೊರಡಬೇಕು. ಯಾರೊಬ್ಬರಿಗೂ ತಿಳಿಯದಂತೆ ಹೊರಡಬೇಕು. ಮನೆಯಲ್ಲಿ ಯಾರಿಗೂ ಹೇಳಕೂಡದು. ಬಹಳ ಎಚ್ಚರಿಕೆಯಿಂದ ವರ್ತಿಸಬೇಕು. ಎಲ್ಲರೂ ಮಲಗಿದಮೇಲೆ ನೀನು ಹೊರಡಬೇಕು. ಇಲ್ಲದಿದ್ದರೆ ಬೆಳಗಾಗುವುದರೊಳಗೆ ಅಪಾಯ ಸಂಭವಿಸಬಹುದು, ಎಚ್ಚರಿಕೆ!

ಇಂತು,

ಶಿವಕುಮಾರಯ್ಯ.

ಹನ್ನೊಂದು ಗಂಟೆಯಾದುದರಿಂದ ಮಲಗಲು ಹವಣಿಸುತ್ತಿದ್ದ ಶಿವಪ್ರಸಾದನಿಗೆ ಶಿವಕುಮಾರಯ್ಯ ತಂದುಕೊಟ್ಟ ಕಾಗದವನ್ನು ನೋಡಿದ ಕೂಡಲೆ ಸಿಡಿಲು ಬಡಿದಂತಾಯಿತು. ನೀರು ತುಂಬಿದ ಕಣ್ಣುಗಳಲ್ಲಿ, ಇಪ್ಪತ್ತೆರಡು ವರ್ಷಗಳ ಅವನ ಜೀವನಕ್ಕೆ—ಹಾಸುಹೊಕ್ಕಾಗಿದ್ದ ಅನೇಕ ವ್ಯಕ್ತಿಗಳು ಅರೆಕ್ಷಣದಲ್ಲಿ ಸುಳಿದು ಮರೆಯಾಗತೊಡಗಿದರು. ತನ್ನ ಹೃದಯದ ಅಧಿದೇವತೆಯರಂತಿದ್ದ ಪಾರ್ವತಮ್ಮ ಸುಶೀಲೆಯರಿಗೆ ಎರಡು ಮಾತನ್ನು ಹೇಳಲೂ ಸಾಧ್ಯವಾಗದಾಯಿತು. ದಿಕ್ಕಿಲ್ಲದಾಗಿದ್ದ ತನಗೆ ಈ ಹದಿನಾಲ್ಕು ವರ್ಷ ಆಶ್ರಯವನ್ನಿತ್ತು, ವಿದ್ಯೆ ಕಲಿಸಿದ ಪುಣ್ಯನಿಧಿಯಾಗಿದ್ದ ಸಂಗಯ್ಯನವರ ಮನೆಯೇ ತನಗೆ ಎರವಾಯಿತಲ್ಲಾ ಎಂದು ದುಃಖ ಉಮ್ಮಳಿಸಿ ಬರತೊಡಗಿತು. “ಈ ಆಜ್ಞೆ ವಿಷಮ ಹೃದಯದಿಂದ ಬಂದು

ದಾಗಿದೆ; ಮನೆಯನ್ನು ಹೊಂಚಿಸಿ ನೀನು ಹೋಗಬೇಡ!'' ಎಂದು ಅವನ ಒಳದನಿ ನುಡಿಯುತ್ತಿತ್ತು. ಆದರೂ ಉಪಾಯವಿಲ್ಲ. ''ವಿಧಿ ನಿಯಮವನ್ನು ಮೀರಿ ನಡೆದವರುಂಟೆ''-ಎಂಬ ನುಡಿ ಅವನ ಮನಃಪಟಲದ ಮೇಲೆ ಮೂಡಿ ಮರೆಯಾಗುತ್ತಿತ್ತು. ಪಾರ್ವತಮ್ಮ ಸುಶೀಲೆಯರನ್ನು ವಂಚಿಸಿ, ಈ ನಡುರಾತ್ರಿಯಲ್ಲಿ ಮನೆಬಿಟ್ಟು ಹೊರಡಬೇಕಾಯಿತಲ್ಲಾ ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದ. ಪಾರ್ವತಮ್ಮ ಸುಶೀಲೆಯರು ಒಳಗಡೆ ಮಲಗಿಕೊಂಡಿದ್ದರು. ಮನೆಯ ಮುಂದುಗಡೆ ಇದ್ದ ಎರಡು ರೂಮುಗಳ ಪೈಕಿ ಒಂದರಲ್ಲಿ ಶಿವಪ್ರಸಾದನಿರುತ್ತಿದ್ದುದರಿಂದ ಈ ಸನ್ನಿವೇಶವು ಪಾರ್ವತಮ್ಮ ಸುಶೀಲೆಯರಿಗೆ ತಿಳಿಯಲು ಅವಕಾಶವಿರಲಿಲ್ಲ. ಅವನ ರೂಮಿನ ಎದುರು ಗಡೆಗಿದ್ದ ಇನ್ನೊಂದು ರೂಮಿನಲ್ಲಿ ಶಿವಕುಮಾರಯ್ಯ ಮತ್ತು ಅವನ ಸ್ನೇಹಿತ 'ಗುಜು ಗುಜು' ಮಾತನಾಡುತ್ತಲೇ ಇದ್ದರು.

ಶಿವಪ್ರಸಾದ ಧೈರ್ಯ ತಂದುಕೊಂಡ. ತನ್ನನ್ನೇ ಸರ್ವಸ್ವವೆಂದು ನಂಬಿಕೊಂಡಿದ್ದ ಪಾರ್ವತಮ್ಮ ಸುಶೀಲೆಯರನ್ನು ವಂಚಿಸಿ ಹೊರಡುತ್ತಿರುವುದಕ್ಕೆ ''ಕ್ಷಮಾಪಣೆಯನ್ನು'' ಮನಸಿನಲ್ಲಿಯೇ ಬೇಡಿದ. ಈ ವಿಷಮ ಸನ್ನಿವೇಷದಲ್ಲಿ ಅವನು ಹೊರಡುವುದೇ ಸರಿಯೆಂದು ನಿರ್ಧರಿಸಿದ. ಮತ್ತೊಮ್ಮೆ ಅವರನ್ನು ಕೂಡುತ್ತೇನೆಂಬ ಆಶಾಭಾವನೆಯೂ ಅವನಲ್ಲಿ ಮೂಡದೆ ಇರಲಿಲ್ಲ. ಸ್ವರ್ಗದಲ್ಲಿ ನಿಂತು ಈ ವ್ಯಾಪಾರವನ್ನೆಲ್ಲಾ ನೋಡುತ್ತಿದ್ದ ಸಂಗಯ್ಯನವರಿಗೆ ಭಕ್ತಿಪೂರ್ಣವಾಗಿ ವಂದಿಸಿದ.

ಇಷ್ಟೆಲ್ಲ ಮನಸ್ಸಿನ ತಾಕಲಾಟದಲ್ಲಿ ರಾತ್ರಿ ಒಂದು ಗಂಟೆಯಾಗಿ ಹೋಗಿತ್ತು. ಎಷ್ಟು ಯೋಚಿಸಿದರೂ ಅಷ್ಟೇ ಎಂದು ತಿಳಿದು, ತನಗೆ ಬೇಕಾದ ಪುಸ್ತಕಗಳನ್ನೂ ಬಟ್ಟೆಗಳನ್ನೂ ಕಟ್ಟಿಕೊಂಡು, ಆಗ ತನ್ನಲ್ಲಿದ್ದ ಕೇವಲ ಹತ್ತು ರೂಪಾಯಿಗಳನ್ನು ತೆಗೆದುಕೊಂಡು ಹೊರಟ. ತನ್ನ ಪುಸ್ತಕಗಳ ರಾಶಿಯನ್ನೂ ತನ್ನ ಅಚ್ಚುಮೆಚ್ಚಿನ ನಾಯಕರನೇಕರ ಭಾವ ಚಿತ್ರಗಳನ್ನೂ ಮತ್ತೆಮತ್ತೆ ನೋಡಿ ಕಣ್ಣೀರು ಹಾಕಿದ...............ಮೆಟ್ಟಲು ಇಳಿದು ಸ್ವಲ್ಪ ದೂರ ಹೋಗಿ, ಮತ್ತೆ ಹಿಂದಕ್ಕೆ ಬಂದು, ಪಾರ್ವತಮ್ಮ ನವರಿಗೆ ಹೇಳಬೇಕೆಂದು ಯೋಚಿಸಿದ. ಆದರೆ ಸನ್ನಿವೇಶ ವಿಪರೀತಕ್ಕಿಟ್ಟು ಕೊಳ್ಳಬಹುದೆಂದು ಬಗೆದು, ಭಾರವಾದ ಹೃದಯವನ್ನು ಹೊತ್ತು ಹೆಜ್ಜೆ

ಹಾಕತೊಡಗಿದ. ಇದನ್ನೆಲ್ಲಾ ಶಿವಕುಮಾರಯ್ಯ ಮತ್ತು ಅವನ ಸ್ನೇಹಿತ ಕಿಟಕಿಯಲ್ಲಿ ನೋಡುತ್ತಲೇ ಇದ್ದರು.

೨

"ಬಸವರಾಜು! ರೀ, ಬಸವರಾಜು!"

"......................"

"ಬಸವರಾಜು! ರೀ, ಬಸವರಾಜು!...........ಬಾಗಿಲು ತೆಗೆಯಿರಿ ಸ್ವಲ್ಪ!"

"ಯಾರು!!..........."

"ನಾನು, ಶಿವಪ್ರಸಾದ, ಕೊಂಚ ಬಾಗಿಲು ತೆಗೆಯಿರಿ!"

"ಯಾರು, ಶಿವಪ್ರಸಾದ್........ಬನ್ನಿ ಏನು ಇಷ್ಟುಹೊತ್ತಿನಲ್ಲಿ? ಯಾವುದಾದರೂ ಊರಿಂದ ಬಂದಿರೋ— ಹೇಗೆ?"

"ಇಲ್ಲ, ಊರಿಗೆ ಹೋಗಬೇಕು........ಬೆಳಗಿನ ರೈಲಿಗೆ ಹೋಗಲು ನಿಮ್ಮ ರೂಮಿಂದ ಸಮೀಪವಾಗುತ್ತೇಂತ ಬಂದೆ....ಬೆಳಗ್ಗೆ ಎದ್ದು ವಿಶ್ವೇಶ್ವರ ಪುರದಿಂದ ಬರಲು ವೇಳೆಯಾಗುತ್ತದೆಂದರಿತು, ಈಗಲೇ ಇಲ್ಲಿಗೆ ಬಂದುಬಿಟ್ಟೆ. ಈ ತೋಟದಪ್ಪನವರ ಛತ್ರ ಸ್ಟೇಷನ್ನಿಗೆ ಸಮೀಪವಾಗಿರುವುದರಿಂದ ಬಹಳ ಅನುಕೂಲ ನೋಡಿ........"

"ಕಣ್ಣೇಕೆ ಅಷ್ಟೊಂದು ಕೆಂಪಾಗಿವೆಯಲ್ಲ? ಏನು, ಕಣ್ಣೀರು ಹಾಕಿದ ಹಾಗಿದೆಯಲ್ಲ!?........"

"ಇಲ್ಲರಿ, ಅದೇನೋ ಬಾವಲಿಯಂತ ಹಾರಾಡುವ ಪ್ರಾಣಿ ಇರುತ್ತಲ್ಲ, ಅದು 'ರಪ್' ಅಂತ........ಇಲ್ಲೆ........ಚಿಕ್ಕಲಾಲಬಾಗಿನ ಬಳಿ ಬರುವಾಗ ಬಡಿಯಿತು, ಅದಕ್ಕೇ ನೀರು ಬರುತ್ತಲಿದೆ....ಒಂದು ಚಾಪೆ ಕೊಟ್ಟುಬಿಡಿ; ಇಲ್ಲೆ ಹೊರಗಡೆ ಮಲಗಿಕೊಳ್ಳುತ್ತೇನೆ........ತಣ್ಣಗಿದೆ........"

"ಛೆ! ಛೇ!! ಒಳಗೇ ಮಲಕ್ಕೊಳ್ಳಿ ಶಿವಪ್ರಸಾದ್, ಹಾಸಿಗೆ ಇದೆ."

"ಹಾಸಿಗೆಯೇಕೆ ಮಹರಾಯ...ಸ್ವಲ್ಪಹೊತ್ತು ಮಲಗಿದರಾಯಿತು.... ಇಲ್ಲೆ ಬಹಳ ಚೆನ್ನಾಗಿದೆ."

“ಆಗಲಿ, ತಗೊಳ್ಳಿ ; ತಲೆದಿಂಬು ಕೊಡಲೆ ?”

“ಏನೂ ಬೇಡ ಕೈಚೀಲವಿದೆ........ಸಾಕು........ಬೋಲ್ಟ್ ಹಾಕಿಕೊಂಡುಬಿಡಿ.”

ಇಷ್ಟುಹೊತ್ತಿಗಾಗಲೆ ಎರಡು ಗಂಟೆಯಾದುದರಿಂದ ಬಸವರಾಜು ಹೆಚ್ಚಿಗೆ ಮಾತನಾಡದೆ ಮಲಗಿಬಿಟ್ಟ. ಶಿವಪ್ರಸಾದ ನಿದ್ರೆಯಿಲ್ಲದೆ ಏನೇನೋ ಯೋಚಿಸುತ್ತ ಸುಮ್ಮನೆ ಹೊರಳಾಡುತ್ತಿದ್ದ.

೩

ಶಿವಪ್ರಸಾದನು ತುಮಕೂರು ಹತ್ತಿರ ಒಂದು ಹಳ್ಳಿಯಲ್ಲಿ ಬಡ ಕುಟುಂಬವೊಂದರಲ್ಲಿ ಜನಿಸಿದ. ಕಾರಣಾಂತರದಿಂದ ತನ್ನ ಬಡ ತಂದೆ ತಾಯಿಗಳು ಜೀವನವನ್ನೊರೆಯಲು ತುಮಕೂರಿಗೆ ಬಂದರು. ಶಿವಪ್ರಸಾದನ ತಂದೆಗೆ ಅಕ್ಷರಜ್ಞಾನವಿಲ್ಲದ್ದರಿಂದ, ‘ಚಾಕರಿ’ ಕೆಲಸವಲ್ಲದೆ ಬೇರೆ ದೊರೆಯುವಂತಿರಲಿಲ್ಲ. ಆದ್ದರಿಂದ ಅವನು, ಆಗ ತುಮಕೂರಿನಲ್ಲಿ ಅಮಲ್ದಾರರಾಗಿದ್ದ ಸಂಗಯ್ಯನವರ ಮನೆಯಲ್ಲಿ ‘ಚಾಕರಿಗೆ’ ಸೇರಿದ. ಅವನ ಹೆಂಡತಿ ಕೂಲಿ ಮಾಡುತ್ತಿದ್ದಳು. ಅವರ ಪುಟ್ಟ ಜೀವನ ಹಾಗೂ ಹೀಗೂ ನಡೆಯುತ್ತಲಿತ್ತು. ಶಿವಪ್ರಸಾದನ ತಾಯಿ ಕೂಲಿಗೆ ಹೋದಾಗ ಅವನು, ತಂದೆಯ ಜೊತೆಯಲ್ಲಿಯೇ ಸಂಗಯ್ಯನವರ ಮನೆಯಲ್ಲಿ ಇರುತಿದ್ದ. ಆಗ ಸಂಗಯ್ಯನವರಿಗೆ ಮಕ್ಕಳಿರಲಿಲ್ಲವಾದ್ದರಿಂದ, ಶಿವಪ್ರಸಾದನ ಮೇಲೆ ಪಾರ್ವತಮ್ಮನವರಿಗೆ ಒಂದು ಬಗೆಯ ಪ್ರೀತಿ. ಸಂಗಯ್ಯನವರೂ ಕೆಲವು ಸಲ ಅವನನ್ನು ಮುದ್ದಿಸದೆ ಇರಲಿಲ್ಲ. ಶಿವಪ್ರಸಾದ ಬಹಳ ಮುದ್ದಾಗಿದ್ದ; ನೋಡುವ ಕಣ್ಗಳ ಸಿರಿಯಾಗಿದ್ದ. ಆದ್ದರಿಂದ ಎಲ್ಲರ ಮನಸ್ಸನ್ನೂ ಸೆಳೆಯುತ್ತಿದ್ದ. “ಈ ಮಗು ನಮ್ಮ ಮನೆಯಲ್ಲಾದರೂ ಹುಟ್ಟಬಾರದಾಗಿತ್ತೆ !” — ಎಂದು ಪಾರ್ವತಮ್ಮನವರು ಕೆಲವು ಸಲ ಅಂದುದುಂಟು. ತಮ್ಮ ಆಳಿನ ಮಗುವೆಂಬುದನ್ನು ಲೆಕ್ಕಿಸದೆ, ಹಗಲೆಲ್ಲ ತಮ್ಮ ಮನೆಯಲ್ಲಿಯೇ ಇರಿಸಿಕೊಳ್ಳುತ್ತಿದ್ದರು. ಒಂದೇ ಮತದವರಾದ್ದರಿಂದ ಶಿವಪ್ರಸಾದನಿಗೆ ಯಾವ ತಡೆಯೂ ಇರಲಿಲ್ಲ. ಮನೆಯಲ್ಲೆಲ್ಲ ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಓಡಾಡುತ್ತಿದ್ದ. ಒಂದೊಂದು ದಿವಸ ರಾತ್ರಿ ಸಮಯದಲ್ಲಿಯೂ ಅವನನ್ನು ಮನೆಯಲ್ಲಿಯೇ ಇರಿಸಿಕೊಳ್ಳುತ್ತಿದ್ದರು........

ಕಾಲಚಕ್ರವು ತಿರುಗಿದ ಹಾಗೆ ಅದೃಷ್ಟದ ಬಣ್ಣ ಬದಲಾಯಿಸ ತೊಡಗಿತು. ಸಂಗಯ್ಯನವರಿಗೆ ತಮ್ಮ ಸ್ವಂತ ಊರಾದ ಬೆಂಗಳೂರಿಗೆ ವರ್ಗವಾಯಿತು. ಪಾರ್ವತಮ್ಮನವರು ಶಿವಪ್ರಸಾದನನ್ನು ಬಿಡಲಾರದೆ ಬಿಟ್ಟುಬಂದರು.

ಬೆಂಗಳೂರಿಗೆ ಬಂದ ಒಂದು ವರ್ಷಕ್ಕೆ ಸುಶೀಲ ಹುಟ್ಟಿದಳು. ಪಾರ್ವತಮ್ಮ ಸಂಗಯ್ಯನವರಿಗೆ ಬಹಳ ದಿನಗಳಾದ ಮೇಲೆ ಮಕ್ಕಳಾದುದ ರಿಂದ ಸಂತೋಷವೇ ಸಂತೋಷ. ಗಂಡುಮಗುವನ್ನು ಅಪೇಕ್ಷಿಸಿದ ಅವರಿಗೆ ಸುಶೀಲೆಯು ಹುಟ್ಟಿದ್ದರಿಂದ ವ್ಯಥೆಯೇನೂ ಆಗಲಿಲ್ಲ. ಸುಶೀಲೆಯು ಮಲ್ಲಿಗೆಹೂವಿನಂತೆ ಬೆಳೆದಳು.

ಸುಶೀಲೆಗೆ ಮೂರು ವರ್ಷ ತುಂಬಿದ ಮೇಲೆ ಪಾರ್ವತಮ್ಮನವರು ತುಮಕೂರಿನ ತಮ್ಮ ಚಿಕ್ಕಮ್ಮನವರ ಮನೆಗೆ ಹೋಗಿದ್ದರು. ಆ ಮನೆ ಯವರು, ಮಕ್ಕಳನ್ನಾಡಿಸಲು ಒಬ್ಬ ಹುಡುಗನನ್ನಿಟ್ಟುಕೊಂಡಿದ್ದರು. ಆ ಹುಡುಗನ ಮುಖ ನೋಡಿದ ಕೂಡಲೆ, ಪಾರ್ವತಮ್ಮನವರಿಗೆ ಶಿವ ಪ್ರಸಾದನ ನೆನಪು ಬಂತು. ಒಮ್ಮೆ ಮನಸ್ಸು ತಡೆಯಲಾರದೆ, ಅವರ ಚಿಕ್ಕಮ್ಮನವರನ್ನು ಕೇಳಿಯೇ ಬಿಟ್ಟರು.

“ಯಾರು ಚಿಕ್ಕಮ್ಮ, ಈ ಹುಡುಗ?”

“ನಿಮ್ಮ ಮನೆಯಲ್ಲಿದ್ದನಲ್ಲಮ್ಮ ‘ಲಿಂಗಪ್ಪ’, ಅವನ ಮಗ. ಪಾಪ, ಲಿಂಗಪ್ಪ, ಅವನ ಹೆಂಡತಿ, ಈ ಊರಲ್ಲಿ ಕಾಲರಾ ಬೇನೆ ಬಂದಿತ್ತಲ್ಲ—ಆಗ ಒಂದೇ ದಿವಸ ಸತ್ತುಹೋದರು! ಆಗಿನಿಂದ ನಮ್ಮ ಮನೆಯಲ್ಲಿಯೇ ಇರಿಸಿಕೊಂಡಿದ್ದೇವೆ. ಬಹಳ ಒಳ್ಳೆಯ ಹುಡುಗ ಕಣೆ ಪಾರ್ವತು!!”

ಈ ಮಾತುಗಳನ್ನು ಕೇಳುತ್ತಿದ್ದ ಹಾಗೆ ಪಾರ್ವತಮ್ಮನವರ ಕಣ್ಣಲ್ಲಿ ನೀರು ಘಳಕ್ಕನೆ ಉದುರಿತು.

ಮನಸ್ಸು ತಡೆಯಲಾರದೆ,

“ಚಿಕ್ಕಮ್ಮ, ಶಿವಪ್ರಸಾದನನ್ನು ನಮ್ಮ ಮನೆಗೆ ಕಳಿಸಿಬಿಡು........” ಎಂದು ಕೇಳಿ ಒಡಂಬಡಿಸಿ, ಬೆಂಗಳೂರಿಗೆ ಕರೆತಂದರು. ಆಗ ಶಿವಪ್ರಸಾದ ನಿಗೆ ಎಂಟು ವರ್ಷ ತುಂಬಿ ಒಂಭತ್ತರಲ್ಲಿ ನಡೆಯುತ್ತಿತ್ತು. ಸುಶೀಲೆಗೆ ಮೂರು ತುಂಬಿ ನಾಲ್ಕರಲ್ಲಿ ನಡೆಯುತ್ತಿತ್ತು.

ಸರಸ್ವತಿಯ ಪ್ರಸಾದವನ್ನು ಹೊತ್ತುತಂದಿದ್ದ ಶಿವಪ್ರಸಾದ ಓದು ಕಲಿಯುವುದರಲ್ಲಿ ತುಂಬಾ ಚುರುಕಾಗಿದ್ದ. ಸುಶೀಲೆಗೂ ಹಾಗೆಯೇ ಓದುವುದೆಂದರೆ ಪಂಚಪ್ರಾಣ. ಮನೆಯಲ್ಲಿ ಇಬ್ಬರೂ ಓದುತ್ತ ಕುಳಿತರೆ ನೋಡುವವರಿಗೊಂದು ಆನಂದ. ಪಾರ್ವತಮ್ಮ ಸಂಗಯ್ಯನವರಿಗೆ ಅವರಿಬ್ಬರ ಬೆಳವಣಿಗೆಯನ್ನು ನೋಡಿ ಇಲ್ಲದ ಆನಂದ.......

ದುರಾದೃಷ್ಟದಿಂದ ಸಂಗಯ್ಯನವರಿಗೆ ಬಹಳ ದಿನ ಬದುಕುವ ಭಾಗ್ಯ ವಿರಲಿಲ್ಲ. ಒಂದು ದಿನ ಆಫೀಸಿನಿಂದ ಬಂದಮೇಲೆ, ಹೃದಯಕ್ರಿಯೆ ನಿಂತು ದೈವಾಧೀನರಾಗಿಬಿಟ್ಟರು. ಆಗ ಮನೆಯಲ್ಲಿ ತುಂಬಿದ ದುಃಖದ ಆಳವನ್ನು ಅಳೆಯಲು ಸಾಧ್ಯವಿಲ್ಲ. ಕಾಲ ಕಳೆದಂತೆಲ್ಲ ಪಾರ್ವತಮ್ಮನವರು ಧೈರ್ಯ ತಂದುಕೊಂಡು, ಸುಶೀಲೆ, ಶಿವಪ್ರಸಾದ ಮತ್ತು ಮಂಗಳೆಯರ (ಪಾರ್ವತಮ್ಮ ನವರ ಎರಡನೆ ಹಾಗೂ ಚಿಕ್ಕಮಗಳು) ಮುಖ ನೋಡಿಕೊಂಡು ಬಾಳುವೆ ಯನ್ನು ಸಾಗಿಸತೊಡಗಿದರು.

ಶಿವಕುಮಾರಯ್ಯ ಸಂಗಯ್ಯನವರ ತಮ್ಮ. 'ಲಫಂಗತನ'ದ ಅವ ತಾರವೇ ಅವನಾಗಿದ್ದ. ತಲೆತಲೆ ಚಚ್ಚಿಕೊಂಡರೂ ಲೋವರ್‌ಸೆಕೆಂಡರಿ ದಾಟಲಿಲ್ಲ. ಕಾಲ ಕಳೆದಂತೆಲ್ಲ ಇಸ್ಪೇಟ್ ರಾಜರ ಆಗ್ರಗಣ್ಯನಾದ. ಇವರ ತಂದೆ ಬೆಂಗಳೂರಿನ ವಿಶ್ವೇಶ್ವರಪುರದಲ್ಲಿ ಒಳ್ಳೆಯ ಎರಡು ಮನೆಗಳನ್ನು ಕಟ್ಟಿಸಿದ್ದರು. ಸಂಗಯ್ಯನವರು ಬೆಂಗಳೂರನ್ನು ಬಿಟ್ಟು ಬೇರೆ ಕಡೆ ಕೆಲಸಕ್ಕೆ ಹೋದಾಗ, ಈ ಎರಡು ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದರು. ಬರುತ್ತಿದ್ದ ೧೫೦ ರೂಪಾಯಿ ಬಾಡಿಗೆಯನ್ನು ಶಿವಕುಮಾರಯ್ಯ ಸ್ವಾಹಾ ಮಾಡಿ ಬಿಡುತ್ತಿದ್ದ. 'ಪಂಡರಪಟ್ಟಿ'ಯ ಹಾಗೆ ಬೀದಿ ಬೀದಿ ತಿರುಗುವುದೇ ಅವನ ಕೆಲಸ. ವ್ಯವಹಾರ ಜ್ಞಾನ ಪಂಜು ಹಚ್ಚಿ ಹುಡುಕಿದರೂ ಸಿಕ್ಕುವಂತಿರಲಿಲ್ಲ.

ಈ ಮಹಾನುಭಾವನಿಗೆ ಮದುವೆಯೇ ಆಗಲಿಲ್ಲವೆಂದು ಬೇರೆ ಹೇಳ ಬೇಕಾಗಿಲ್ಲ. ಯಾವ ಕಲ್ಲೆದೆಯ ತಂದೆ ತಾನೇ ಮಗಳನ್ನು ಕೊಟ್ಟು ಮದುವೆ ಮಾಡಿಯಾನು!!

ಸಂಗಯ್ಯನವರು ಬೆಂಗಳೂರಿಗೆ ಬಂದ ಮೇಲೆ ಅವನನ್ನು ಮನೆ ಯಲ್ಲಿಯೇ ಇರಿಸಿಕೊಂಡರು. ಆದರೂ ಎಣ್ಣೆ ಸೀಗೇಕಾಯಿಗಿದ್ದ ಸಂಬಂಧವೇ ಇತ್ತು! ಸಂಗಯ್ಯನವರು ತೀರಿದ ಮೇಲಂತೂ ಇವನನ್ನು ಕೇಳುವವರೇ

Mr. R. J. ...

ಇಲ್ಲದಾಯಿತು. ಶಿವಕುಮಾರಯ್ಯನಿಗೆ ಬರಬೇಕಾಗಿದ್ದ ಆಸ್ತಿಯನ್ನು ಕೊಟ್ಟು ಬೇರೆ ಸಾಗಿಸಬೇಕೆಂಬ ಬುದ್ಧಿ ಸಂಗಯ್ಯನವರಿಗೆ ಬರಲಿಲ್ಲ. ಮುಂದೆ ಬರಬಹುದಾದ ವಿಪತ್ತನ್ನು ಅವರು ಯೋಚಿಸಲಿಲ್ಲ.

ಶಿವಕುಮಾರಯ್ಯನ ಕೆಟ್ಟ ಬುದ್ಧಿಯ ಜೊತೆಗೆ ಯಾರೋ ಪ್ರಚೋದಿಸ ತೊಡಗಿದರು. ಮದುವೆಯ ವಯಸ್ಸು ಮುಗಿದಿದ್ದರೂ ಕೂಡ, ವಿಶ್ವೇಶ್ವರ ಪುರದ ಸಂಗಯ್ಯನವರ ಮನೆಗಳ ಮೇಲೆ ಕಣ್ಣು ಹಾಕಿದ ಮಹಾಶಯರೊಬ್ಬರು ಮಗಳನ್ನು ಕೊಟ್ಟು ಮದುವೆ ಮಾಡುವುದಾಗಿ ಹೇಳಿದ್ದಕ್ಕೆ, ಶಿವಕುಮಾರಯ್ಯ ರಬ್ಬರ್ ಚೆಂಡಿನ ಹಾಗೆ ಹಿಗ್ಗಿ ಹಿಗ್ಗಿ ಮನೆಯಲ್ಲಿ ವಿಪರೀತ ತೊಂದರೆ ಕೊಡತೊಡಗಿದ. ಮೊದಲಿನಿಂದಲೂ ಶಿವಪ್ರಸಾದನ ಮೇಲೆ ಕೆಂಡ ಕಾರು ತ್ತಿದ್ದ ಇವನು ಕಡೆ ಕಡೆಗೆ ವಿಷ ಕಾರತೊಡಗಿದ. ಇವನಿಗೆ ಮದುವೆಯ ಹುಚ್ಚು ಹಿಡಿಸಿದ ಒಬ್ಬ 'ಘಟಿಂಗ' ಸುಶೀಲೆಯ ಮೇಲೆ ಕಣ್ಣಿಟ್ಟಿದ್ದ. ಸುಶೀಲೆಯನ್ನು ಇವನಿಗೆ ಕೊಡಿಸಿದರೆ ಬೇರೆ ಕಡೆ ಖಂಡಿತವಾಗಿ ಶಿವ ಕುಮಾರಯ್ಯನಿಗೆ ಹೆಣ್ಣು ಕೊಡಿಸುವುದಾಗಿ 'ಭರವಸೆ' ಕೊಟ್ಟಿದ್ದ. ಶಿವ ಕುಮಾರಯ್ಯ ಕೆಲವು ಸಲ ಪಾರ್ವತಮ್ಮನವರೊಡನೆ ಸುಶೀಲೆಯ ಲಗ್ನದ ವಿಚಾರವಾಗಿ ಪ್ರಸ್ತಾಪಿಸಿ ಈ 'ಘಟಿಂಗ'ನಿಗೆ ಕೊಡುವಂತೆ ಉಪದೇಶ ಮಾಡತೊಡಗಿದ; ಕೆಲವು ಸಲ ಹೆದರಿಸಿಯೂ ನೋಡಿದ. ಆದರೆ, ಪಾರ್ವತಮ್ಮನವರು ಅವನ ಬೆದರಿಕೆಗೆ ಜಗ್ಗಲಿಲ್ಲ. ಒಂದು ದಿನ ಹೀಗೆ ಮಾತುಕತೆ ನಡೆಯಿತು.

"ಸುಶೀಲೆಯ ಓದು ಮುಗಿದ ಮೇಲೆ ನೋಡೋಣ; ಈಗೇಕೆ ಆ ಪ್ರಸಂಗ; ಅಕೆ, ಕಾಲೇಜಿನ ಅಭ್ಯಾಸ ಮುಗಿಸಬೇಕೆಂದಿದ್ದಾಳೆ...."

"ಶಿವಪ್ರಸಾದನಿಗೆ ಮಾಡಬೇಕೆಂದಿರುವೆಯಂತೆ. ಆ ಭಿಕಾರಿಗೆ ಮಾಡಿದರೆ, ನೀವೆಲ್ಲ ಮನೆ ಬಿಟ್ಟು ಹೊರಡಬೇಕಾಗುವುದು."

"ಅವನೇನು ಮಾಡಿದ್ದಾನೆ ಪಾಪ! ಭಂಗಾರದಂಥ ಹುಡುಗ; ಪರದೇಶಿ ಹುಡುಗನಿಗೆ ಹೀಗೆಲ್ಲ ಕಿರುಕುಳ ಕೊಡುವುದು ಸರಿಯಲ್ಲ; ಬಿ. ಎ. ಪಾಸು ಮಾಡಿದ್ದಾನೆ. ಎಲ್ಲಿಯಾದರೂ ದುಡಿದು ತಿನ್ನುತ್ತಾನೆ, ಅವನ ಮೇಲೇಕಪ್ಪ ನಿನಗೆ ಕಣ್ಣು?"

"ನನಗೇಕೆ ಕಣ್ಣು? ಪಾಪ! ನಿಮ್ಮ ಕೆಟ್ಟ ಬುದ್ಧಿಯೆಲ್ಲಾ ನನಗೆ ಅರ್ಥವಾಗುತ್ತೆ! ಯಾವನನ್ನೊ ಮನೆಗೆ ಕರೆತಂದು, ಸಾಕಿ ಸಲಹಿ, ಈಗ ಮನೆಯ ಯಜಮಾನನನ್ನೇ ಮಾಡಲು ಹವಣಿಸುತ್ತಿರುವುದು ನನಗೆ ಸರಿ ತೋರುವುದಿಲ್ಲ. ಅವನನ್ನು ಮನೆ ಬಿಟ್ಟು ಹೊರಡಿಸಲೇಬೇಕು. ಸುಶೀಲೆ ಯನ್ನು ನಾನು ಹೇಳಿದವರಿಗೆ ಕೊಡುವಹಾಗಿದ್ದರೆ ಹೇಳು; ಶಿವಪ್ರಸಾದನಿಗೆ ಮಾಡುವುದು ಮಾತ್ರ ನನಗೆ ಸರಿತೋರುವುದಿಲ್ಲ."

"ಅದು ಸುಶೀಲೆಯ ಇಷ್ಟ. ಆಕೆ ಯಾರನ್ನು ಅಪೇಕ್ಷಿಸುತ್ತಾಳೋ ಅವರಿಗೇ ಮಾಡುವುದು. ಒಂದು ವೇಳೆ ಶಿವಪ್ರಸಾದನನ್ನು ಮಾಡಿಕೊಳ್ಳು ತ್ತೇನೆಂದರೆ, ಅವನಿಗೇ ಮಾಡುತ್ತೇನೆ. ದೇವರ ಸಂಕಲ್ಪ ಹೇಗಿದೆಯೋ ಹಾಗೆ ಆಗಲಿ. ಈ ವಿಷಯದಲ್ಲಿ ನೀನು ಹೀಗೆಲ್ಲ ಅಡ್ಡ ಬರಬಾರದು ನೋಡಪ್ಪ!"

"ಆಗಲಿ, ಅದು ಹೇಗೆ ಮಾಡುತ್ತೀರಿ ನೋಡುತ್ತೇನೆ."

ಎಂದು ಅಫೀಮು ತಿಂದ ತಲೆತಿರುಕನ ಹಾಗೆ ಕೂಗಾಡುತ್ತ ಹೊರ ಹೊರಟ. ಇಂಥ ಪ್ರಸಂಗಗಳು ಎಷ್ಟೋ ಆಗಿಹೋಗಿದ್ದವು. ಪಾರ್ವತಮ್ಮ ನವರಿಗೆ ಬಿಡಿಸಲಾರದ ಸಮಸ್ಯೆಯಾಯಿತು. ಮನೆ ಬಿಟ್ಟು ಬೇರೆ ಕಡೆ ಹೋದರೆ ಬಾಳುವೆ ಸಾಗುವಂತಿಲ್ಲ. "ಶಿವಕುಮಾರಯ್ಯ ತಲೆ ಕೆಟ್ಟವನು! ಏನು ಮಾಡಲಿಕ್ಕೂ ಹೇಸಿದವನಲ್ಲ; ಯಾವ ವೇಳೆಯಲ್ಲಿ ಏನು ಮಾಡು ತ್ತಾನೆಯೋ" ಎಂಬ ಭಯ ಪಾರ್ವತಮ್ಮನವರ ಮನಸ್ಸನ್ನು ಕೊರೆ ಯುತ್ತಿತ್ತು.

೬

ಶಿವಕುಮಾರಯ್ಯನ ಕಿರುಕುಳ ಶಿವಪ್ರಸಾದನ ಮೇಲೆ ಜಾಸ್ತಿಯಾಗ ತೊಡಗಿತು. ಶಿವಪ್ರಸಾದನು ಇದನ್ನು ಲೆಕ್ಕಿಸದೆ, ತನ್ನನ್ನೇ ನಂಬಿ ಕೊಂಡಿದ್ದ ಪಾರ್ವತಮ್ಮನವರ ಮುಖ ನೋಡಿಕೊಂಡು ಸಹಿಸಿಕೊಂಡಿದ್ದ. ಅವನು ಆ ವೇಳೆಗೆ ಸೆಂಟ್‌ಜೋಸೆಫ್ ಕಾಲೇಜಿನಲ್ಲಿ ಬಿ. ಎ. ಮುಗಿಸಿ, ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲೀಷ್ ಎಂ. ಎ. ಗೆ ಅವರಿವರ ಸಹಾಯದಿಂದ ಅಭ್ಯಾಸ ಮಾಡುತ್ತಲಿದ್ದ. ಹೇಗೋ ಮಾಡಿ ಎಂ. ಎ. ಮುಗಿಸಬೇಕೆಂದು

ಪಾರ್ವತಮ್ಮನವರ ಆಶೆ. ಸುಶೀಲೆ ಮಹಾರಾಣಿ ಕಾಲೇಜಿನಲ್ಲಿ ಇಂಟರ್‌ನಲ್ಲಿ ಅಭ್ಯಾಸ ಮಾಡುತ್ತಿದ್ದಳು.

ಅವರಿಬ್ಬರು ಸಾಯಂಕಾಲ ಮನೆಗೆ ಬಂದ ಕೂಡಲೆ ಪಾರ್ವತಮ್ಮನವರು ಮಾಡಿಟ್ಟದ್ದ ಕಾಫಿ ಕುಡಿದು, ಮಂಗಳನನ್ನು ಕರೆದುಕೊಂಡು ಲಾಲ್ ಬಾಗಿನ ಕಡೆಗೆ ವಿಹಾರಕ್ಕೆ ಹೋಗುವ ರೂಢಿಯನ್ನಿಟ್ಟುಕೊಂಡಿದ್ದರು. ಪಾರ್ವತಮ್ಮನವರು ಬಾಗಿಲಿಗೆ ಬಂದು ಸ್ವಲ್ಪದೂರ ಹೋಗುವವರೆಗೆ ನೋಡಿ, ಆನಂದದಿಂದ ಹಿಗ್ಗುತ್ತಿದ್ದರು. ಆದರೆ ಶಿವಕುಮಾರಯ್ಯನ ಕ್ರೂರದೃಷ್ಟಿ ನೆನಪಿಗೆ ಬಂದ ಕೂಡಲೆ ದುಃಖ ಉಮ್ಮಳಿಸಿಬರುತ್ತಿತ್ತು.

ಎಂದಿನಂತೆ ಆ ದಿನವೂ ಶಿವಪ್ರಸಾದ ಸುಶೀಲೆಯರು ಲಾಲ್‌ಬಾಗಿನಲ್ಲಿ ಉಪಯುಕ್ತ ಹರಟೆ ಹೊಡೆಯುತ್ತ ಕುಳಿತಿದ್ದರು.

"ಸುಶೀ, ಈ ದಿನದ ಪೇಪರ್ ನೋಡಿದೆಯಾ?"

"ನೋಡಿದೆ! ಅಸ್ಸಾಂ ಭೂಕಂಪದ ಭಯಾನಕ ವಾರ್ತೆಯಿತ್ತು. ಪ್ರವಾಹದ ಬಗ್ಗೆ ಈ ದಿನ ಒಂದು ವರದಿ ಬಂದಿದೆ. ಅಬ್ಬ! ಏನು ಭೀಕರ ಹಾವಳಿ ಮಾಡಿದೆ!! ಈ ಕಡೆ ಪಂಜಾಬು, ಜಮ್ಮು ಕಾಶ್ಮೀರಗಳಲ್ಲಿ ಪ್ರವಾಹದ ಹಾವಳಿ ಹೇಳತೀರದಾಗಿದೆ..............."

"ಪಾಪ! ಅಲ್ಲಿನ ಜನರಿಗೆ ಎಷ್ಟು ಕಷ್ಟವಾಗಿದೆಯೋ........ನಮ್ಮ ಜನ ಪರಿಹಾರನಿಧಿಗೆ ಉದಾರವಾಗಿ ದಾನ ಮಾಡುತ್ತಿಲ್ಲ, ಏನು ಮಾಡುವುದು!.... ಬ್ರಹ್ಮಪುತ್ರ ನದಿಯ ಪ್ರವಾಹದಿಂದ ದಿಬ್ರುಘರ್ ಮೊದಲಾದ ನಗರಗಳು ಥರ ಥರ ನಡುಗುತ್ತಲಿವೆಯಂತೆ........ನೆಹರು ಅಸ್ಸಾಮಿಗೆ ಭೇಟಿಕೊಟ್ಟ ವಿಷಯ ಓದಿದೆಯ?

"ಅಬ್ಬ! ನೆಹರೂರವರ ಧೈರ್ಯವೇ ಧೈರ್ಯ. ನೀವು ಆಗಾಗ ನನಗೆ ಅವರ ಬಗ್ಗೆ ಹೇಳುತ್ತಿದ್ದಿರಲ್ಲ ಅದೆಲ್ಲ ನಿಜ, ನೀವು ಬುರುಡೆ ಬಿಡುತ್ತೀರಿ ಅಂದುಕೊಂಡಿದ್ದೆ. ಬಾಳಿದರೆ ನೆಹರೂರವರಂಥ ಧೀರ ನಾಯಕರಾಗಿಯೇ ಬಾಳಬೇಕು........ಭೂಮಿ ನಡುಗಿದ ಪ್ರದೇಶದಲ್ಲಿಯೂ, ನದಿಗಳು ಭೋರ್ಗರೆದು ಭೂಮಿಯನ್ನು ಕೊಚ್ಚಿಕೊಂಡು ಹೋಗುತ್ತಿದ್ದ ಕಡೆಗಳಲ್ಲಿಯೂ ಅಂಜದೆ, ಅಳುಕದೆ ಮುನ್ನುಗ್ಗುತ್ತಿದ್ದರಂತೆ! ಅಬ್ಬ! ಅದೆಂಥ ಹುಚ್ಚು ಧೈರ್ಯ!!"

"ನಾನು ಅವರ ಬಗ್ಗೆ ಹೇಳಿದರೆ, ನಿನ್ನ ಕಿವಿಗೆ ಬೀಳುತ್ತಲೇ ಇರಲಿಲ್ಲ, ಅಲ್ಲವೆ?"

"ನೀವು ಕೂಡ ನೆಹರೂರವರಂತೆ ರಾಷ್ಟ್ರದ ನಾಯಕರಾಗಬೇಕು; ಸಾವಿರ ರೂಪಾಯಿ ಕೊಟ್ಟರೂ ಸರಕಾರಿ ಕೆಲಸಕ್ಕೆ ಹೋಗಬೇಡಿ ...."

"ನಾನು ರಾಷ್ಟ್ರಸೇವೆಯಲ್ಲಿಯೇ ಜೀವನವನ್ನು ಸವೆಸಬೇಕೆಂದಿದ್ದೇನೆ. ಶಾಂತಿಯ ವಾತಾವರಣವನ್ನು ಹಬ್ಬಿಸಲು ರಾಷ್ಟ್ರದ ಪ್ರತಿಯೊಬ್ಬ ಯುವಕ ಯುವತಿಯರ ಹೃದಯಗಳಲ್ಲಿ ಕ್ರಾಂತಿಯ ಕಹಳೆ ಮೊಳಗಬೇಕಾಗಿದೆ. ಪ್ರಜಾರಾಜ್ಯದ ತಿಳುವಳಿಕೆಯಿಲ್ಲದ ನಮ್ಮ ಜನತೆಗೆ ತಿಳುವಳಿಕೆ ಕೊಡಬೇಕಾಗಿದೆ. ನಮ್ಮಂಥ ತರುಣರು ಮಾಡಬೇಕಾದ ಸಹಸ್ರಾರು ಕೆಲಸಗಳು ಕಾದುಕುಳಿತಿವೆ. ಪ್ರತಿಯೊಬ್ಬ ಸಹೋದರನೂ ಕೋಮುವಾರು ನೀತಿಯನ್ನು ದೂರೀಕರಿಸಿ ರಾಷ್ಟ್ರದ ಮಹಾ ನಾಯಕರಿಗೆ ಬೆಂಬಲ ನೀಡಬೇಕಾಗಿದೆ. ಬಾಪೂಜಿಯ ತತ್ವಗಳ ಸಾಧನೆಗೆ ಅಹರ್ನಿಸಿ ದುಡಿಯಬೇಕಾಗಿದೆ....ಸುಶೀ, ನನ್ನ ಅಭ್ಯಾಸ ಮುಗಿದ ಕೂಡಲೆ, ಮೊದಲು ಪತ್ರಿಕಾವೃತ್ತಿಯನ್ನು ಕೈಕೊಳುತ್ತೇನೆ ...."

"ನನಗೂ ರಾಷ್ಟ್ರಸೇವೆಯಲ್ಲಿ ಇಷ್ಟ! ಅರಸೀಕೆರೆಯಲ್ಲಿ ಸ್ಥಾಪಿತವಾಗಿರುವ ಕಸ್ತೂರಿ ಬಾ ಶಿಕ್ಷಣಕೇಂದ್ರದಲ್ಲಿ ಶಿಕ್ಷಣ ಪಡೆದು ಬರಬೇಕೆಂಬ ಆಶೆಯಾಗಿದೆ .... ನಿಮ್ಮ ಜೊತೆಯಲ್ಲಿಯೇ ನಾನೂ ದುಡಿಯುತ್ತೇನೆ."

"ನನ್ನ ಜೊತೆಯಲ್ಲಿಯೇ ದುಡಿಯುತ್ತೀಯ? ಒಳ್ಳೆ ಹುಚ್ಚಿ ನೀನು! ಮದುವೆಯಾದ ಮೇಲೆ ಗಂಡನ ಮನೆಗೆ ಹೋಗಬೇಕೆಂಬುದನ್ನು ಮರೆತೆಯೇನು?!"

"ಅಮ್ಮಾ ಹೇಳಿದಳು ...."

"ಏನು ಹೇಳಿದರು ....?"

"..................."

"ಏನು ಹೇಳಿದರು, ಹೇಳು ಸುಶೀ!"

"ನಿಮಗೇ ಮಾಡುತ್ತಾರಂತೆ ....!"

"ನನಗೆ ?.... ಅಯ್ಯೋ, ನಿಮ್ಮ ಚಿಕ್ಕಪ್ಪ ಹಸಿದ ಹುಲಿಯ ಹಾಗೆ ನೆಗೆದಾಡುತ್ತಲಿದ್ದಾರೆ.... ನಿನಗೆ ಗೊತ್ತಿಲ್ಲವೇನು ?.... ನಿನ್ನನ್ನು ಶ್ರೀಮಂತರ ಮನೆಗೆ--ಮನ್ಮಥನಂತ ಹುಡುಗನಿಗೆ ಕೊಡುತ್ತಾರಂತೆ........"

"ಸಾಕು, ಸುಮ್ಮನಿರಿ........ಅವರು ನೆಗೆದಾಡಿದರೆ ಕೇಳುವವರಾರು ....ಮದುವೆ ಅವರವರ ಇಷ್ಟ..... ಬೇಕಾದರೆ ಅವರ ಆಸ್ತಿ ತೆಗೆದುಕೊಳ್ಳಲಿ ನಮಗೇನೂ ಬೇಡ........"

"ನಿಮಗೆ ಏನೂ ಬಿಡುವುದಿಲ್ಲವಂತೆ.... ಮೊನ್ನೆ ನಿಮ್ಮ ಚಿಕ್ಕಪ್ಪನವರು ಖಂಡಿತವಾಗಿ ಹೇಳಿಬಿಟ್ಟಿದ್ದಾರೆ....!

"ನಾವೆಲ್ಲ ಬೇರೆ ಹೋಗಿಬಿಡೋಣ........ನಮಗೇನು ದುಡಿದುಕೊಳ್ಳಲಿಕ್ಕಾಗುವುದಿಲ್ಲವೆ ?.... ಪ್ರತಿಯೊಬ್ಬರಿಗೂ ಹಿರಿಯರು ಗಳಿಸಿದ ಆಸ್ತಿಯೇ ಇದೆಯೇನು !........"

"ಸರಿ, ಹೋಗಲಿ, ಹಾಗೆಯೇ ಮಾಡೋಣ.... ನಿನಗೆ ರಾಷ್ಟ್ರಸೇವೆ ಮಾಡಲು ಬಹಳ ಇಷ್ಟವೇನು ?"

"ಅಹುದು, ನಾನು ಕ್ರಾಂತಿವಾದಿಯಾಗಿ ಬಾಳಬೇಕೆಂದಿದ್ದೇನೆ."

"ಹಾಗಾದರೆ, ಯಾವ ಯಾವ ರಾಷ್ಟ್ರೀಯ ಸೇವೆಗಳನ್ನು ಮಾಡಬೇಕೆಂದಿರುವೆ ?"

"ನಿರಕ್ಷರಕುಕ್ಷಿಗಳಾದ ನಮ್ಮ ಜನತೆಗೆ ಅಕ್ಷರಜ್ಞಾನವನ್ನುಂಟು ಮಾಡುವುದು ; ಅನೇಕ ಪರದೇಶಿ ಮಕ್ಕಳಿಗೆ ಅಲ್ಲಲ್ಲಿ ಹಾಸ್ಟೆಲುಗಳನ್ನು ತೆರೆಯುವುದು........"

"ದುಡ್ಡು ಬೇಕಲ್ಲ....?"

"ಭಿಕ್ಷೆ ಮಾಡಬೇಕು........ಪಂಡಿತ ಮಾಲವೀಯರವರು ಭಿಕ್ಷೆ ಮಾಡಿಯಲ್ಲವೇನು ಹಿಂದೂ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದು ! ಭಿಕ್ಷೆ ಮಾಡಿಯಲ್ಲವೇನು ಬಾಪೂಜಿಯು, ಹರಿಜನೋದ್ಧಾರ ಮೊದಲಾದ ಕಾರ್ಯಗಳನ್ನು ಕೈಕೊಂಡಿದ್ದು?........"

"ಹಾಗಾದರೆ, ನೀನು ರಾಷ್ಟ್ರದ ನಾಯಕಿಯಾಗಬೇಕೆಂದಿರುವೆಯೆನ್ನು ?"

"ಅಹುದು, -ಏಕಾಗಬಾರದು! ನಾನು ರಾಷ್ಟ್ರದ ನಾಯಕಿಯಾಗ ಬೇಕೆಂದು ನೀವೇ ಹೇಳುತ್ತಿದ್ದಿರಿ!.... ಬರಬಹುದಾದ ಕಷ್ಟಗಳನ್ನು ಸಹಿಸಿ ಕೊಂಡು, ಅಡ್ಡಬಂದ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಬೇಕೆಂದು ಅನೇಕ ಸಲ ನೀವೇ ಹೇಳುತ್ತೀರಿ! ಮೊನ್ನೆ ನೆಹರೂರವರು ರಾಷ್ಟ್ರದ ಜನತೆಗಿತ್ತ ಸಂದೇಶದಲ್ಲಿ ಇದೇ ಮಾತನ್ನು ಹೇಳಿಲ್ಲವೇನು?....ರಾಷ್ಟ್ರದ ಮಹಾನಾಯಕರ ಜೀವನವನ್ನು ಆದರ್ಶವಾಗಿಟ್ಟುಕೊಂಡು, ಮುನ್ನುಗ್ಗ ಬೇಕೆಂದು ನೀವು ಮೇಲಿಂದ ಮೇಲೆ ಹೇಳುತ್ತಿರುವಿರಲ್ಲ........"

"ಇರಲಿ, ರಾಷ್ಟ್ರದ ನಾಯಕಿಯರ ಪೈಕಿ ನೀನು ಯಾರನ್ನು ಮೆಚ್ಚಿ ಕೊಂಡಿರುವೆ?"

"ನನಗೆ, 'ಅರುಣ ಅಸಫ್‌ಆಲಿ' ಬಹಳ ಮೆಚ್ಚಿಗೆ; ಬೇರೆ ನಾಯಕಿಯರನ್ನೂ ಮೆಚ್ಚಿದ್ದೇನೆ. ಆದರೆ ಅರುಣಾರವರ ಕ್ರಾಂತಿಮಯ ಹಾಗೂ ಸಾಹಸ ಜೀವನ ನನ್ನ ಮನಸ್ಸನ್ನು ಸೂರೆಗೊಂಡಿದೆ. ಗಂಡ-ಹೆಂಡಿ ರೆಂದರೆ ಅವರ ಹಾಗೆ ಇರಬೇಕು ನೋಡಿ....ಅವರಂತೆ ಕ್ರಾಂತಿಕಾರಿಯಾಗ ಬೇಕೆಂದು ನನ್ನ ಆಸೆ."

"ನಾನು ಪೂರ್ವ ಬಂಗಾಳಕ್ಕೆ ಹೋಗಿ ಸೌಹಾರ್ದ ಸಂದೇಶ ಸಾರ ಬೇಕೆಂದಿದ್ದೇನೆ........ಅದಕ್ಕೆ ಪರವಾನಿಗೆ ಕೊಡಬೇಕೆಂದು ನೆಹರೂರವರಿಗೂ ರಾಷ್ಟ್ರದ ಇತರ ನಾಯಕರಿಗೂ ಪತ್ರಗಳನ್ನು ಬರೆದಿದ್ದೇನೆ........ನೀನು ನನ್ನ ಹಿಂದೆ ಬರಲು ಸಾಧ್ಯವೆ?"

"ಬರದೆಯೇನು? ನೀವು ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ಭಾಗಿಯಾಗುತ್ತೇನೆ."

"ಒಳ್ಳೆ ಹುಚ್ಚಿ ನೀನು!!........ನಿಮ್ಮ ತಾಯಿಯವರನ್ನು ಬಿಟ್ಟು ಹೋಗಲು ಸಾಧ್ಯವೆ?.....ನಮ್ಮ ಪ್ರಾಂತದಲ್ಲಿಯೇ ಬೇಕಾದಷ್ಟು ಸೇವೆ ಸಲ್ಲಿಸಬಹುದು. ಸೇವೆ ಮಾಡಬೇಕೆಂಬುವವರಿಗೆ ಬೇಕಾದಷ್ಟು ಕ್ಷೇತ್ರಗಳಿವೆ. ....ಇರಲಿ, ಮುಂದಿನ ಮಾತು ಈಗೇಕೆ!........ನೀನು, ನಿಮ್ಮ ಚಿಕ್ಕಪ್ಪ ನವರು ಹೇಳಿದ ವರನ ಕೈಹಿಡಿದು ಸುಖವಾಗಿರು........ನಾನು ತುಂಬಾ ಸರಳ ಜೀವನ ನಡೆಸಬೇಕೆಂದಿದ್ದೇನೆ. ಈ ಕಾಲದ ಹುಡುಗಿಯರಿಗೆ 'ಥಳಕು ಬೆಳಕು' ಬೇಕು....ಹುಡುಗ ಶ್ರೀಮಂತನಂತೆ; ಅಲ್ಲದೆ ಮನ್ಮಥನ ಹಾಗೆ

ಇದ್ದಾನಂತೆ!........ಇದೇನು ಸುಶೀ, ಕಣ್ಣೀರೇಕೆ? ಹೋಗಲಿ ಬಿಡು. ದೇವರ ಇಚ್ಛೆಯಂತಾಗಲಿ.''

''ಅವನ ಶ್ರೀಮಂತಿಕೆಗೆ ಮಣ್ಣು ಹಾಕಿದರು!....ಅಂಥವರನ್ನು ಮದುವೆಯಾಗುವುದಕ್ಕಿಂತ ಹಾಗೇ ಇರುವುದು ಸಾವಿರ ಪಾಲಿಗೆ ಉತ್ತಮ....''

''ನಿನಗೆ ಬುದ್ಧಿ ಇಲ್ಲ........ನಿನ್ನ ಗೆಳತಿಯರೆಲ್ಲ, ಶ್ರೀಮಂತರನ್ನೂ, ಸೂಟು ಗೀಟು ಹಾಕುವವರನ್ನೂ ಆರಿಸಿಕೊಳ್ಳುತ್ತಾರೆ!!....ಹಾ! ಸುಶೀ, ಗಾಂಧಿಜಯಂತಿ ಯಾವ ದಿನ ಬೀಳುತ್ತೆ?....ಸೋಮವಾರವಲ್ಲವೆ?....ಸರಿ, ನಾನು ಕೆಲವು ಭಾಷಣಗಳನ್ನೂ, ಲೇಖನಗಳನ್ನೂ ತಯಾರುಮಾಡಬೇಕಾಗಿದೆ....ನಡೆ, ಮನೆಗೆ ಹೋಗೋಣ........ಈಗ ಕಣ್ಣೀರು ಹಾಕಬೇಡ........ ಸುಮ್ಮನಿರು ಸುಶೀೀ........''

ಎಂದು ತನ್ನ ಅಂಗವಸ್ತ್ರದಿಂದ ಸುಶೀಲಳ ಕಣ್ಣೀರು ಒರೆಸುತ್ತಿದ್ದ. ಆ ಹೊತ್ತಿಗೆ ಸರಿಯಾಗಿ, ಮಂಗಳ ಲಾಲ್‌ಬಾಗನ್ನೆಲ್ಲಾ ಸುತ್ತಿಕೊಂಡು ಓಡೋಡಿಬಂದಳು. ಆಕೆ ತಂದಿದ್ದ ಹೂವುಗಳನ್ನು 'ಮಾವ, ಮಾವ, ಅಕ್ಕಯ್ಯನಿಗೆ ಮುಡಿಸು' ಎಂದು ಕೊಟ್ಟಳು. ನಗುವಿನ ಮಧ್ಯದಲ್ಲಿ, ಅವನು ಸುಶೀಲೆಗೆ ಹೂಮುಡಿಸತೊಡಗಿದ. ಮಂಗಳೆ ದೂರ ಸರಿದು ''ಹಾಗೆ ಇರಿ, ಪೋಟೋ ತೆಗೀತೀಸಿ'' ಎಂದು ಕುಣಿದಾಡಿದಳು. ಶಿವಪ್ರಸಾದ 'ಕಳ್ಳಿ' ಎಂದು ಆಕೆಯನ್ನು ಹಿಡಿಯಲು ಹೋದಕೂಡಲೆ, ಮನೆಯ ಹಾದಿ ಹಿಡಿದು ಓಡಿದಳು. ಅವರೂ ಆಕೆಯ ಹಿಂದೆ ಮನೆಗೆ ಹೊರಟರು.

೫

ಅದೇ ದಿನವೇ ಅವನು ಮನೆಯನ್ನು ಬಿಟ್ಟು ಹೊರಡುವ ಪ್ರಸಂಗ ಬಂದೊದಗಿದ್ದು. ಬಂದುದೆಲ್ಲಾ ಬರಲಿ, ನಂಬಿದವರನ್ನು ಬಿಟ್ಟು ಕದಲಕೂಡದು ಎಂದು ಧೈರ್ಯವಾಗಿದ್ದ ಶಿವಪ್ರಸಾದನು ದೀರ್ಘವಾಗಿ ಯೋಚಿಸಿ ಈ ಸಂದರ್ಭದಲ್ಲಿ ಮನೆಯಿಂದ ಹೊರಡುವುದೇ ಕ್ಷೇಮವೆಂದು ನಿರ್ಧರಿಸಿದ. ತಾನು ಹೊರಡದಿದ್ದರೆ, ವಿಷಮ ವೇಳೆಯಲ್ಲಿ ಅಪಾಯ ಸಂಭವಿಸಬಹುದೆಂದೂ ಆಗ ಪಾರ್ವತಮ್ಮ ಸುಶೀಲೆಯರಿಗೆ ಇಲ್ಲದ ದುಃಖವನ್ನು ತಂದೊಡ್ಡಿದಂತಾಗುವುದೆಂದೂ ಯೋಚಿಸಿ, ಹೊರಡಲು ನಿರ್ಧರಿಸಿದ.

ಅಂತು ಪಾರ್ವತಮ್ಮ ಸುಶೀಲೆಯರನ್ನು ಶಿವಕುಮಾರಯ್ಯನ ಕ್ರೂರದೃಷ್ಟಿಗೆ ತುತ್ತುಮಾಡಲಾರೆನೆಂದು ಸಂಕಲ್ಪಮಾಡಿದ. ಆದರೆ ಅವನ ಮನಸ್ಸಿನಲ್ಲಿದ್ದುದು ಅವರಿಗೆ ತಿಳಿಯುವಂತೆ ಒಂದು ಚೀಟಿಯಲ್ಲಾದರೂ ಬರೆದಿಟ್ಟಿರಲಿಲ್ಲ..........ಹೃದಯದ ಭಾರದಿಂದ, ಹೆಜ್ಜೆಯನ್ನು ಇಡಲಾರದೆ ಇಟ್ಟು ಮನೆಯನ್ನು ಬಿಟ್ಟು ಹೊರಟ........

೬

ಮರುದಿನ ಭಾನುವಾರವಾದುದರಿಂದ ಬಸವರಾಜು ಬೇಗ ಏಳಲಿಲ್ಲ. ನಿದ್ರೆಯಿಲ್ಲದೆ ಹೊರಳಾಡುತ್ತಿದ್ದ ಶಿವಪ್ರಸಾದ ಬೆಳಕುಹರಿಯುವ ಮುಂಚೆ, ಚಾಪೆ ಸುತ್ತಿಟ್ಟು ಹೊರಟುಹೋಗಿದ್ದ....ಯಾವ ರೈಲಿಗೆ ಹೋದನೆಂಬುದು ಯಾರಿಗೂ ತಿಳಿಯಲಿಲ್ಲ!!!

ದಾರಿಯಲ್ಲೆ !!

" ಇದು ಯಾವ ಊರು ಸ್ವಾಮಿ ? "

" ಇದು ರಂಗಾಪುರ ; ನಿಮ್ಮದು ಯಾವೂರು ? "

" ನನ್ನದು ಶಿವಪುರ ; ಮುಂದೆ ಬರುವುದು ಯಾವ ಊರು ? "

" ಮುಂದೆ ಬರೋದೆ ? ಅದು ಜವನಗಿರಿ ! "

" ಇಲ್ಲಿಗೆ ಎಷ್ಟಾಗುತ್ತೆ ? "

" ಇಲ್ಲಿಗೆ ಸುಮಾರು, ನೋಡಿ, ಅಡ್ಡಹಳ್ಳಕ್ಕೆ ಒಂದು ಆರು, ಅತ್ಲಾಗೆ ಕುರುಬನ ಕಟ್ಟೆಗೆ ಒಂದು ನಾಲ್ಕು, ಅಲ್ಲಿಂದ ಮೂರೋ, ನಾಲ್ಕೋ ಮೈಲಿ ಇರಬೇಕು. ಒಟ್ಟು ಹನ್ನೆರಡು – ಹದಿಮೂರು ಮೈಲಿ ಆಗುತ್ತೆ "

" ಇಷ್ಟೊತ್ತಿನಿಂದ ಹೋಗಬಹುದೋ ? ಇನ್ನೂ ಬೈಗಿನ ಮೂರು ಗಂಟೆಯಾಗಿದೆ."

" ಅಯ್ಯೊ, ಹೋಗ್ಬೆಯೇನ್ರಿ ! ಸೊಗಸಾಗಿ ಹೋಗಬಹುದು."

" ಎಲ್ಲಾದ್ರೂ ದಾರಿ ಹೊಡೆಯುತ್ತೊ ? "

" ಹ್ಞೂಂ, ಒಂದು ಆಲದ ಮರ ಬರುತ್ತೆ ; ಅದರ ಹೆಸರು 'ದೆವ್ವನ ಮರ' ಅಂತ; ಅಲ್ಲಿ ಮೂರು ದಾರಿಗಳು ಕಲೆಯುತ್ತವೆ. ಮೂರರಲ್ಲಿ ಎರಡನೆ ಮತ್ತು ಮೂರನೆ ದಾರಿಗಳ ನಡುವೆ ಒಂದು ಕಾಲುದಾರಿ ಹೋಗುತ್ತೆ. ಅದನ್ನು ಹಿಡಿದು ಹೋದ್ರಿ ಅಂದ್ರೆ ದೀಪ ಹಚ್ಚೋದ್ರೊಳಗೆ ಹೋಗ್ತೀರಿ "

" ಒಳ್ಳೇದ್ರಿ ಬರ್ತೀನೆ, ನಮಸ್ಕಾರ ? "

ಎಂದು ಪಾಪಣ್ಣ ಹೊರಟ.

ಬೆಳಗ್ಗೆ ಹೊರಟ ಪಾಪಣ್ಣ ಮೂರು ಗಂಟೆಯವರೆಗೆ ನಡೆದೇ ನಡೆದಿದ್ದ. ಮಧ್ಯಾಹ್ನ ಒಂದು ಗಂಟೆಯಲ್ಲಿ ಮಾತ್ರ ಅರ್ಧ ಗಂಟೆ ಕುಳಿತಿದ್ದ ; ಹಿಂದೆ ತಂದಿದ್ದ ಸ್ವಲ್ಪ ಕಡಲೇಕಾಯನ್ನು ತಿಂದು ನೀರು ಕುಡಿದಿದ್ದ. ಈಗ, ನಡೆದೂ ನಡೆದೂ ದಣಿದಿದ್ದರೂ, ಇನ್ನೂ ನಡೆಯುತ್ತಲೇ ಇದ್ದಾನೆ. ಊರಿಗೆ ಹೋಗಿ ತನ್ನ ತಂದೆ ತಾಯಿಗಳನ್ನು ಯಾವಾಗ ನೋಡಿಯೇನು ಎಂಬ ಆಸೆ ! ಊರು

ಬಿಟ್ಟು ಒಂದು ವರ್ಷವಾಗಿತ್ತು. ಹಿಂದಿನ ಬೇಸಗೆ ರಜಕ್ಕೆ ಊರಿಗೆ ಹೋದವನು ಪುನಃ ಬೇಸಗೆ ರಜಕ್ಕೆ ಹೊರಟಿದ್ದಾನೆ!

ಪಾಪಣ್ಣನಿಗೆ ಸುಮಾರು ಇಪ್ಪತ್ತು ವರ್ಷ ವಯಸ್ಸು. ತಂದೆ ತಾಯಿಗಳು ತುಂಬಾ ಬಡವರು. ಪಾಪಣ್ಣನದು ವಾರದ ಮನೆಯಲ್ಲಿ ಊಟ. ಶಿವಪುರದಲ್ಲಿ ಅವರದೊಂದು ಪುಟ್ಟ ಬಾಳುವೆ. ಕೂಲಿಯಿಂದಲೇ ಜೀವನ; ತಂದೆ ತಾಯಿಗಳಿಗೆ ಇದ್ದೊಬ್ಬ ಮಗನನ್ನು ಸ್ವಲ್ಪ ಓದಿಸಬೇಕೆಂದು ಆಸೆ. ಬೇರೆಯವರ ನೆರವೂ ದೊರೆಯಿತು. ಪಾಪಣ್ಣನೂ ಬಹಳ ಜಾಣ. ಶ್ರೀನಗರದ ಹೈಸ್ಕೂಲಿನಲ್ಲಿ ಅವನ ಅಭ್ಯಾಸ.

ಬೇಸಗೆ ರಜಕ್ಕೆ ಊರಿಗೆ ಬರಲು ಚಾರ್ಜಿಗಾಗಿ ಅವನ ತಂದೆ ಎರಡು ರೂಪಾಯಿ ಮೊನಿ ಆರ್ಡರ್ ಮಾಡಿದ್ದ! ಮಾರ್ಚಿ ಇಪ್ಪತ್ತು ನಾಲ್ಕನೆ ತಾರೀಕು; ಪಾಪಣ್ಣನ ಸಂತೋಷವೇ ಸಂತೋಷ! ಬಟ್ಟೆ ಬರೆಗಳನ್ನು ಒಗೆದುಕೊಂಡ; ಅವನಿಗಿದ್ದುದು ಎರಡು ಕಡ್ಡಿಗೀರಿನ ಪಂಚೆಗಳು, ಒಂದು ಷರ್ಟು, ಒಂದು ನಿಃಕರು, ಒಂದು ಖಾದಿ ಟೋಪಿ! ಎಲ್ಲವನ್ನೂ ಅಂದು ರಾತ್ರಿಯೇ ಒಗೆದುಹಾಕಿದ. ಪುಸ್ತಕಗಳನ್ನೆಲ್ಲ ಜೋಡಿಸಿಕೊಂಡು ಹೊತ್ತಿಂಟಿ ಏಳಬೇಕೆಂದು ಮಲಗಿದ. ಕಣ್ಣಲ್ಲೆ ಬೆಳಗಾಯ್ತು. ಬಟ್ಟೆಗಳನ್ನು ಜೋಡಿಸಿಕೊಂಡ. ನಿಃಕರನ್ನು ಝಾಡಿಸಿ ಕೊಡವಿದ. ಜೇಬಿನಿಂದ ಮುದ್ದೆಯಾದ ಕಾಗದ ಬಿತ್ತು; ನೋಡುತ್ತಾನೆ! ಕವರಿನಲ್ಲಿ ಇಟ್ಟುಕೊಂಡಿದ್ದ ಎರಡು ರೂಪಾಯಿ ನೋಟು ತೋಯ್ದು ಉಂಡೆಯಾಗಿ ಹೋಗಿದೆ!! ಪಾಪ! ಪಾಪಣ್ಣನ ಕಂಬನಿ ಫಳಕ್ಕನೆ ಉದುರಿದವು. ಸುಮ್ಮನೆ ಅರ್ಧಗಂಟೆ ನಿಸ್ತೇಜನಾಗಿ ಕುಳಿತ! ಆಕಾಶ ಕಳಚಿ ಬಿದ್ದಂತಾಯಿತು! ಚಾರ್ಜಿನ ಪೂರ್ತಾ ಯಾರನ್ನಾದರೂ ಕೇಳಬಹುದಾಗಿತ್ತು. ಅಹುದು, ಯಾರು ಕೊಡುತ್ತಾರೆ? ಸಿರಿವಂತರ ಮಕ್ಕಳಿಗೆ ಎಲ್ಲಿಯಾದರೂ ದೊರೆಯುತ್ತೆ; ಆದರೆ ಬಡವರಿಗೆ ಯಾರು ಕೊಡುತ್ತಾರೆ! ಏನೇನೋ ನೆನೆಸಿಕೊಂಡ. ಎಲ್ಲಿಯೋ ಓದಿದ ಕೆಲವು ಸಾಲುಗಳು ನೆನಪಿಗೆ ಬಂದವು; "ತತ್ತರಿಸದಿರು ಎಲೆಲೇ, ಎಲೆ ಜೀವತಂತಿ! ಈ ದೇಹತಂಬೂರಿಯನು ಹಿಡಿದು ಮಿಡಿಯುವುದು ಆ ದಿವ್ಯಶಕ್ತಿ! ಮಿಡಿತವನು ಹಿಡಿದು ನುಡಿಯಲದು ಪರಮ ಮುಕ್ತಿ! ...."

ಮನಸ್ಸು ಹಿಂದಕ್ಕೂ ಮುಂದಕ್ಕೂ ತೂಗಾಡ ಹತ್ತಿತು! ಇನ್ನು ತಡ ಮಾಡುವುದು ಸರಿಯಲ್ಲವೆಂದುಕೊಂಡ. ಅವನು ಊಟ ಮಾಡುತ್ತಿದ್ದ ಒಂದು ಮನೆಯ ಯಜಮಾನಿ ತುಂಬಾ ಒಳ್ಳೆಯವರಿದ್ದರು. ಆ ಮನೆಗೆ ಹೋದಾಗ ಹೊರಗೆ ಮೊಮ್ಮಗನನ್ನು ಎತ್ತಿಕೊಂಡು ನಿಂತಿದ್ದರು ಯಜಮಾನಿ.

"ಅಮ್ಮ, ಊರಿಗೆ ಹೋಗಿ ಬರುತ್ತೇನೆ."

"ಯಾವಾಗ ಹೊರಡುತ್ತಿ ಮಗು ?"

"ಈಗಲೇ ಅಮ್ಮ !"

"ರೈಲಿಗೋ, ಅಥವಾ ಬಸ್ಸಿಗೋ ?"

"ಬಸ್ಸಿಗೇ ಹೋಗುತ್ತೇನೆ."

"ಸ್ವಲ್ಪ ಊಟ ಮಾಡಿ ಹೋಗಪ್ಪ ; ದೂರ ಪ್ರಯಾಣ, ಅರವತ್ತು ಮೈಲಿ ; ಇನ್ನೇನು ಬಸ್ಸು ಹೊರಡುವ ಹೊತ್ತಾಯ್ತು! ತಂಗಳನ್ನವಿದೆ ಅದನ್ನೇ ಊಟ ಮಾಡುತ್ತೀಯೋ, ಇಲ್ಲ, ಸ್ವಲ್ಪ ತಡಿಯುತ್ತೀಯೋ ?"

"ಅದನ್ನೇ ಊಟ ಮಾಡಿ ಹೋಗುತ್ತೇನೆ."

ಪಾಪಣ್ಣನ ಊಟ ಅವಸರವಾಗಿಯೇ ಮುಗಿಯಿತು.

"ನಿಮ್ಮೂರ ದಾರಿ ಬಹಳ ಅಡವಿ. ಬಸ್ಸಿನಲ್ಲಿ ಕಡೆಯ ಸೀಟಿನಲ್ಲಿ ಕುಳಿತುಕೊಳ್ಳಬೇಡ. ಕುಳಿತರೂ ಕೈ ಹೊರಗೆ ಚಾಚಬೇಡ ಮಗು, ಮರಗಳಿಗೆ ತಗಲಿಯಾವು!"

"ಎಚ್ಚರವಾಗಿಯೇ ಕುಳಿತುಕೊಳ್ಳುತ್ತೇನಮ್ಮ."

"ಹೋಗಿಬಾಪ್ಪ."

"ಎಲ್ಲಿಯಮ್ಮ ಪಾದ."

"ಇರಲಿ ಬಿಡಪ್ಪ ಬೇಡ." ಎನ್ನುತ್ತ ಪಾದಗಳನ್ನು ನೀಡುತ್ತಾರೆ. ಪಾಪಣ್ಣ ನಮಸ್ಕಾರ ಮಾಡುತ್ತಾನೆ.

"ದೇವರು ಒಳ್ಳೆಯದು ಮಾಡಲಪ್ಪ !"

ಪಾಪಣ್ಣ ಆಶೀರ್ವಾದವನ್ನು ಪಡೆದು ಊರಿಗೆ ಹೊರಟ.

ಅಂದು ಬೆಳಗ್ಗೆ ಕಾಲ್ನಡಗೆಯಲ್ಲಿ ಹೊರಟವನು ಮಧ್ಯಾಹ್ನ ಮೂರು ಗಂಟೆಗೆ ರಂಗಾಪುರವನ್ನು ಸೇರಿದ್ದ. ಅಲ್ಲಿಂದ ಆ ದಿನ ರಾತ್ರಿ ಜವನಗಿರಿಯನ್ನು ಸೇರಬೇಕೆಂದು ಹೊರಟ. ಜವನಗಿರಿಯಿಂದ ಅವರ ಊರು

೨೫ ಮೈಲಿ. ಮರುದಿನ ಹೇಗಾದರೂ ಮಾಡಿ ಸ್ವಂತ ಊರನ್ನು ಸೇರ ಬೇಕೆಂಬ ಆಸೆ. ಆ ವರ್ಷದ ಮಧ್ಯದಲ್ಲಿ ತಂದೆಯನ್ನು ಒಂದು ಸಲ ನೋಡಿದ್ದನೇ ಹೊರತು, ತಾಯಿಯನ್ನು ನೋಡಿರಲಿಲ್ಲ. ಹಿಂದಿನ ಎರಡು ರಜೆಗಳಲ್ಲಿ ಊರಿಗೆ ಹೋಗಿ ಬರಲಿಕ್ಕೆ ದುಡ್ಡಿನ ಅಡಚಣೆಯೇ ಕಾರಣ.

ಬೇಗ ಬೇಗ ಹೆಜ್ಜೆ ಹಾಕುತ್ತಿದ್ದಾನೆ. ಕಾಲಲ್ಲಿ ಹಳೆಯ ಚಪ್ಪಲಿಗಳು. ಕೈಯಲ್ಲಿ ಒಂದೇ ಒಂದು ಚೀಲ. ಒಂದು ಹೊದೆಯುವುದನ್ನೂ ಎರಡು ಪಂಚೆ ಗಳನ್ನೂ ಪುಸ್ತಕಗಳ ಮೇಲೆ ಸುತ್ತಿ ಚೀಲದಲ್ಲಿ ಇಟ್ಟಿದ್ದಾನೆ........ದೆವ್ವನ ಮರವನ್ನು ಸೇರಿದ. ಕತ್ತಲು ಹೆಪ್ಪುಗಟ್ಟುತ್ತಲಿದೆ! ಯಾವ ದಾರಿ ಯನ್ನು ಹಿಡಿಯುವುದು! ಕಾಲು ದಾರಿ ಕಾಣಿಸುತ್ತಲಿಲ್ಲ! ಯೋಚನೆಗೆ ಆರಂಭವಾಯ್ತು. ಹೊಟ್ಟೆ ಬೇರೆ ತುಂಬಾ ಹಸಿದಿದೆ! ಮುಂಗಾರಿನ ಕಪ್ಪು ಮೋಡಗಳು ಗುಡ್ಡಗುಡ್ಡವಾಗಿ ತೇಲುತ್ತಲಿವೆ! ಉತ್ತರದಿಕ್ಕಿನಲ್ಲಿ ಮಿಂಚು ಪ್ರಾರಂಭವಾಯ್ತು! ಅವನಿಗೆ ದಾರಿ ಕಾಣದಾಯ್ತು! ಯಾವ ದಾರಿ ಯನ್ನು ಹಿಡಿದನೋ ಗೊತ್ತೇ ಆಗಲಿಲ್ಲ! ಫಳ್, ಫಳ್! ಮಿಂಚಿದರೆ ಹಾದಿ! ದೂರದಲ್ಲಿ ಮಳೆ ಭೋರ್‌ಗುಟ್ಟುತ್ತಲಿದೆ! ಬರುಬರುತ್ತದೊಡ್ಡ ಅಡವಿಯೇ ಆವರಿಸಿಕೊಂಡಿದೆ! ಪೆರ್ ಮರಗಳು ಮರ್‌ಗುಟ್ಟುತ್ತಲಿವೆ. ಬಿರು ಗಾಳಿ ಬರ್ ಬರ್ ಬೀಸುತ್ತಲಿದೆ. ದೊಡ್ಡ ದೊಡ್ಡ ಮರಗಳು ಬುಡ ಮೇಲಾಗುತ್ತಲಿವೆ. ಮುರಿದುಬಿದ್ದ ಕೊಂಬೆಗಳು ಗಾಳಿಗೆ ಉರುಳುತ್ತಲಿವೆ. ....ಮರಗಳನ್ನು ಬಿಟ್ಟು ನಿಂತರೆ ಮಳೆಯ ಬಡಿತ; ಮರದ ಮರೆಗೆ ಹೋದರೆ ಮುರಿದು ಮೇಲೆ ಬೀಳುತ್ತವೆಂಬ ಭಯ! 'ಶಿವಶಿವಾ' ಎಂದು ಶಿವನ ಮೇಲೆ ಭಾರ ಹಾಕಿ ಕಲ್ಲಾಗಿ ನಿಂತುಬಿಟ್ಟ! ಕಾಡುಹಂದಿಗಳ ಗುಂಪೊಂದು ಅವನ ಮುಂದೆ 'ವಡರ್, ವಡರ್' ಎಂದು ಶಬ್ದ ಮಾಡುತ್ತ ಹಾದುಹೋಯ್ತು!

'ಫಳ್ ಫಳ್' ಮಿಂಚುತ್ತಲೇ ಇದೆ! ತಡಬಡಿಸುತ್ತ ಮುಂದೆ ನುಗ್ಗಿದ; ದೇವರೇ ಎಂದ; ನಾರಾಯಣನನ್ನು ನೆನೆದ. ಮುಂದೆ ಒಂದು ಸಣ್ಣ ಹಳ್ಳ. ಅದರ ಆ ಕಡೆ ಅಡವಿ ವಿರಳವಿರಳವಾಗಿ ಕಂಡುಬಂತು. ಸುತ್ತಾದರೂ ಚಿಂತೆಯಿಲ್ಲ, ರಸ್ತೆಯನ್ನೇ ಹಿಡಿದಿದ್ದರೆ ಚನ್ನಾಗಿತ್ತು! ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ! ಅದೇ ಹಾದಿ ಹಿಡಿದು ಮುಂದೆ ನುಗ್ಗಿದ.

ಹಳ್ಳವನ್ನೂ ದಾಟಬೇಕೆಂದು ಇಳಿದ. ಮಳೆಯು ಕೊಂಚ ಕಡಿಮೆಯಾಗಿದೆ. ಹಳ್ಳದಲ್ಲಿ ನೀರು ಮೊಣಕಾಲಿಗೆ ಬರುತ್ತಿತ್ತು. ಅರ್ಧ ಹಳ್ಳಕ್ಕೆ ಬಂದ. ನೀರು ಜಾಸ್ತಿಯಾಯ್ತು! ಬೇಗ ಬೇಗ ಹೆಜ್ಜೆ ಹಾಕಿದ! ನೀರು ಸೊಂಟಕ್ಕೆ ಬಂತು. 'ದೇವರೇ' ಎಂದು ಮೊರೆ ಇಟ್ಟ. ಪುಸ್ತಕಗಳಿದ್ದ ಚೀಲವನ್ನೊಮ್ಮೆ ನಮಸ್ಕರಿಸಿ, ಮೇಲಕ್ಕೆ ಎತ್ತಿ ಹಿಡಿದ. ತಂದೆತಾಯಿಗಳನ್ನು ನೆನೆದು ಮನಸ್ಸಿನಲ್ಲಿಯೇ ವಂದಿಸಿದ. ಉಳಿಯುವುದಿಲ್ಲವೆಂದು ಗೊತ್ತಾದರೂ ಮುಂದೆ ನುಗ್ಗಿದ. ದಡ ಸಮೀಪಿಸಿದಂತಾಯ್ತು! ಕೆರಗಳು ಹಳ್ಳದಲ್ಲಿ ಕೊಚ್ಚಿಕೊಂಡು ಹೋಗಿದ್ದವು. ಗಡ್ಡೆ ಹತ್ತಿದ. ಕೋಲ್ ಮಿಂಚು 'ಫಳಲ್' ಎಂದು ಸೆಳೆದ ಕೂಡಲೆ ಛಡ್ ಛಡಲ್ ಎಂದು ಸಿಡಿಲು ಬಡಿಯಿತು. ಯಾರೋ ಕಿಟ್ಟನೆ ಕಿರಲಿದರು! ಪಾಪಣ್ಣನಿಗೆ ಜೆಪ್ಪು ಹಿಡಿದಂತಾಯಿತು! ಜಂಗಾಬಲವೇ ಕುಸಿದುಬಿತ್ತು! ಸ್ವಲ್ಪ ಚೇತರಿಸಿಕೊಂಡು ಸಮೀಪಕ್ಕೆ ಬರುತ್ತಾನೆ. ಹೆಂಗಸು ಗಿಡವನ್ನು ಬಿಮ್ಮನೆ ತಬ್ಬಿಕೊಂಡು ನಡುಗುತ್ತಿದ್ದಾಳೆ. ಇಬ್ಬರಿಗೂ ಭಯ! ಮಳೆ ನಿಂತಿದೆ. ರಾತ್ರಿ ಒಂದು ಘಂಟೆಯ ಸಮಯ. ಪಾಪಣ್ಣ ಧೈರ್ಯ ತಂದುಕೊಂಡ.

"ತಾಯಿ, ಯಾರಮ್ಮ ನೀವು ?" ಎಂದ.

"........" ಹಲ್ಲು ಗಿಟಕಿ ಹಿಡಿದಿದ್ದರಿಂದ ಮಾತನಾಡಲಾಗಲಿಲ್ಲ! ನಖಶಿಖಾಂತ ತೋಯ್ದಿದ್ದಾಳೆ.

"ತಾಯಿ ಯಾರಮ್ಮ ನೀವು ?" ಮತ್ತೆ ಕೇಳಿದ.

"ನಾ .... ನು .... ಕ .... ಮ .... ಲ .... ಮ್ಮ." ಈಗ ಹೆಚ್ಚು ಮಾತನಾಡಲಿಕ್ಕೆ ವೇಳೆಯಲ್ಲವೆಂದರಿತು — ;

"ಏಳಮ್ಮ ಹೋಗೋಣ ; ಈ ಹಾದಿ ಎಲ್ಲಿಗೆ ಹೋಗುತ್ತೆ ನಿನಗೆ ತಿಳಿದಿದೆಯೇನಮ್ಮ ?"

"ನೀವಾರಪ್ಪ ? ನನಗೆ ಭಯವಾಗುತ್ತೆ"

"ನಿನಗೆಷ್ಟಮ್ಮ ವಯಸ್ಸು ?"

"ಯಾಕಪ್ಪ ...."

"ಚಿಂತೆಯಿಲ್ಲ ಹೇಳಮ್ಮ"

"ಹದಿನಾರು ...."

"ಹಾಗಾದರೆ ನಾನು ನಿನ್ನ ಅಣ್ಣ ; ಏಳಮ್ಮ ಹೋಗೋಣ"

"ನೀವಾರಣ್ಣ, ಎಲ್ಲಿಗಣ್ಣ, ನಾನು ಇಲ್ಲೆ ಈ ಗಿಡದ ಬುಡದಲ್ಲೇ ಸಾಯುತ್ತೇನೆ ನೀವು ಹೋಗಿ, ಅಣ್ಣಾ."

"ಪರವಾಯಿಲ್ಲ ಬಾರಮ್ಮ."

"ನನ್ನಿಂದ ನಡೆಯಲಾಗುವುದಿಲ್ಲವಣ್ಣ."

"ನಾನು ನಿನ್ನ ಕೈ ಮುಟ್ಟಬಹುದೇನಮ್ಮ."

"ಏಕಣ್ಣ?..........."

"ಕೈಹಿಡಿದು ಕರಕೊಂಡು ಹೋಗುತ್ತೇನೆ."

ಇಬ್ಬರೂ ತೊಯ್ದು ತಪ್ಪಟೆಯಾಗಿದ್ದಾರೆ. ಮೆಲ್ಲಮೆಲಗೆ ಹೆಜ್ಜೆ ಹಾಕುತ್ತಲಿದ್ದಾರೆ. ಅಡವಿ ಕಡಮೆಯಾಗುತ್ತಲಿದೆ! ಯಾವುದೋ ಒಂದು ಬಂಡಿಹಾದಿ ಸಿಕ್ಕಿತು. ಮಳೆ ನಿಂತಿದ್ದರೂ ಮೋಡಗಳು ಕವಿದಿವೆ. ಆಗಾಗ ಮಿಂಚುತ್ತಲೂ ಇದೆ. ಎರಡು ಫರ್ಲಾಂಗ್ ದೂರದಲ್ಲಿ ಒಂದು ಕಟ್ಟಡ ಕಾಣಿಸುತ್ತಲಿದೆ. ಬೆಳಗಾಗುವ ತನಕ ಅಲ್ಲಿ ಆಶ್ರಯ ಪಡೆಯಬಹುದೆಂದು ಮುಂದೆ ಸಾಗುತ್ತಾರೆ.

ಅದೊಂದು ದೇವರ ಗುಡಿ. ಮಳೆಯಿಂದ ಸೋರಿದ್ದರೂ ಅಲ್ಲಲ್ಲಿ ಒಣಗಿದ ಜಾಗವಿದೆ. ಗರ್ಭಗುಡಿಯೂ ಉಂಟು; ಅದಕ್ಕೆ ಬೀಗ ಹಾಕಿರಲಿಲ್ಲ. ದೇವರಗುಡಿಗಳ ಗೂಡುಗಳಲ್ಲಿ ಸಾಮಾನ್ಯವಾಗಿ ಹಣತೆಗಳಿರುತ್ತವೆಯೆಂದು ಪಾಪಣ್ಣನಿಗೆ ಗೊತ್ತು. ಹಾಗೆ ಕೈ ಆಡಿದ; ಒಂದು ಹಣತೆ ಇದೆ! ಅಹುದು ಕಡ್ಡಿಪೆಟ್ಟಿಗೆ? 'ದೇವರೇ' ಎಂದು ಗೂಡಿನಲ್ಲಿ ಕೈಯಿಟ್ಟ; ಕಡ್ಡಿ ಪೆಟ್ಟಿಗೆಯೂ ಇದೆ!! ಕತ್ತಲಲ್ಲೇ ಭತ್ತಿ ಸರಿಮಾಡಿ, 'ರಾಮಾ' ಎಂದು ಕಡ್ಡಿ ಗೀಚಿದ; ದೇವರು ಬೆಳಕು ಕೊಟ್ಟ.

"ತಂಗೀ."

"ಅಣ್ಣ."

"ನನ್ನ ಚೀಲದಲ್ಲಿ ಸುತ್ತಿಟ್ಟಿರುವ ಒಂದು ಪಂಚೆಯಲ್ಲಿ ನಡುವೆ ಇರುವುದನ್ನು ತೆಗೆದುಕೊಂಡು ಗುಡಿಯೊಳಕ್ಕೆ ಹೋಗಿ ಅದನ್ನು ಉಟ್ಟು ಕೊಂಡು, ಸೀರೆಯನ್ನು ಹಿಂಡಿ, ಆ ಗೂಟಕ್ಕೆ ತಗುಲಿಹಾಕಮ್ಮ; ಬೆಳಗಾಗುವುದರೊಳಗೆ ಆರಿಕೊಳ್ಳುತ್ತೆ."

"ಬೇಡಣ್ಣ, ನಿನ್ನ ಬಟ್ಟೆಗಳನ್ನೆ ಬಿಡು; ನಾನು ಹೀಗೇ ಇರುತ್ತೇನೆ"

"ಛೆ! ಛೆ! ಬೇಡಮ್ಮ ದೇವರು ಮೆಚ್ಚಿಯಾನೆ! ತನ್ನ ಒಡ ಹುಟ್ಟಿದ ತಂಗಿಯಾಗಿದ್ದರೆ ಹೀಗೆ ಸುಮ್ಮನೆ ಇರುತಿದ್ದನೆ ಎಂದು ದೇವರು ಅಂದುಕೊಳ್ಳಲಾರನೇನಮ್ಮ!"

"ಆಗಲಣ್ಣ."

ಎಂದು ಒಳಗೆ ಹೋಗಿ ದೇವರ ಜಗುಲಿಯ ಪಕ್ಕದಲ್ಲಿದ್ದ ದೀಪವನ್ನು ಹಚ್ಚಿ, ಮರೆಗೆ ಹೋಗಿ ಸೀರೆಯನ್ನು ಬದಲಾಯಿಸುತ್ತಾಳೆ. ಅದಾದ ಮೇಲೆ ಬಾಗಿಲು ತೆಗೆದು,

"ನೀನು ಹಾಗೇ ಇರುತ್ತಿಯೇನಣ್ಣ?"

"ಇಲ್ಲಮ್ಮ, ಅಂಗಿಯನ್ನು ಹಿಂಡಿ ಹಾಕಿದ್ದೇನೆ; ನಿಃಕರು ಮೈಮೇಲೆಯೇ ಆರಿಕೊಳ್ಳುತ್ತೆ. ಇರಲಿ, ಅಲ್ಲೆ ಸ್ವಲ್ಪ ಹೊತ್ತು ಹಾಗೆ ಮಲಕ್ಕೊಳಮ್ಮ. ಈ ದೀಪದಲ್ಲಿ ಎಣ್ಣೆ ಮುಗಿಯುತ್ತ ಬಂತು; ಅದರಲ್ಲಿ?"

"ಇದರಲ್ಲಿ ಸ್ವಲ್ಪ ಇದೆ."

"ಸರಿ, ಇದು ಇರುವವರೆಗೆ ಇರಲಿ; ಎಣ್ಣೆ ಇರುವವರೆಗೆ ಮಾತ್ರ ಉರಿಯುತ್ತೆ ತಾನೆ! ದೇವರು ಇಷ್ಟನ್ನಾದರೂ ಅನುಕೂಲಮಾಡಿಕೊಟ್ಟನಲ್ಲ! ಉಳ ಉಪ್ಪಡಿ! ಸ್ವಲ್ಪ ಜಾಗರೂಕತೆಯಿಂದಿರಮ್ಮ! ಕೆಟ್ಟ ಅದೃಷ್ಟವಾದರೆ ಬರಬಾರದ ಕಷ್ಟಗಳು ಬರುತ್ತವೆ. ಆದರೆ ಅವಕ್ಕೆಲ್ಲ ನಾವು ಅಂಜಬಾರದು. ದೇವರು ನಡೆಸಿದಂತೆ ನಾವು ನಡೆಯಬೇಕು. ಪಾಲಿಗೆ ಬಂದದ್ದು ಪಂಚಾಮೃತ; ಅನುಭವಿಸಬೇಕು..............."

ಇತ್ತ ಶಿವಪುರದಲ್ಲಿ ಪಾಪಣ್ಣನ ತಂದೆ ತಾಯಿಗಳು ದಾರಿ ನೋಡಿ ನೋಡಿ ಬೇಸತ್ತರು. ೨೫ನೇ ತಾರೀಕಿಗೆ ಖಂಡಿತ ಬರುತ್ತೇನೆಂದು ಬರೆದಿದ್ದ. ಆ ಪತ್ರವನ್ನು ಮುಂದಿಟ್ಟುಕೊಂಡು ಹಾಗೇ ಕುಳಿತಿದ್ದಾರೆ. ಅವನ ತಾಯಿ, ಕರಿಯಪ್ಪ ಸಾಹುಕಾರರ ಮನೆಯ ಹುಡುಗರೇನಾದರೂ ಬಂದಿದ್ದಾರೆಯೋ ಏನೋ ಅಂತ ಕೇಳಿ ಬಂದಳು, ಅವರು ಬಂದಿದ್ದಾರೆ. ಪಾಪಣ್ಣ ಬೆಳಗ್ಗೆ ಬಸ್ಸಿಗೆ ಬಂದುದಾಗಿಯೂ ಅವನು ಊಟ ಮಾಡುವ ಮನೆಯ ಮುದುಕಿ ಹೇಳಿದರೆಂದೂ ತಿಳಿಸಿದರು. ಇದನ್ನು ಕೇಳಿ, ಪಾಪ, ಆ ಬಡ ತಂದೆ ತಾಯಿ

ಗಳಿಗೆ ಕಾತರ ಹೆಚ್ಚಿತು. ಅವನ ತಾಯಿ ಸಿದ್ದೇಶ್ವರನಿಗೆ ಮೀಸಲು ಕಟ್ಟಿದಳು. ತನ್ನ ಮಗ ಸುಖವಾಗಿ ಮನೆಯನ್ನು ಸೇರಿದರೆ ಹೇಗಾದರೂ ಮಾಡಿ ಮೂರು ಸೇರು ಎಣ್ಣೆ ಹಾಕಿಸುತ್ತೇನೆ ಎಂದು ಅರಿಕೆ ಮಾಡಿಕೊಂಡಳು! ಒಬ್ಬನೇ ಒಬ್ಬ ಮಗ! ಅವನನ್ನೇ ತನ್ನ ಪ್ರಾಣವಾಗಿ ನಂಬಿದ್ದ ಲಿಂಗಮ್ಮ ಅವನಿಗಾಗಿ ಏನೇನೋ ತಿಂಡಿ ಮಾಡಿಟ್ಟಿದ್ದಾಳೆ, ಬಡ ರೀತಿಯಲ್ಲಿ! ಅದರಲ್ಲೂ ಮಗ ಒಂದು ವರ್ಷದ ಮೇಲೆ ಮನೆಗೆ ಬರುತ್ತಾನೆ! ಸರ್ಕಾರಿ ಪರೀಕ್ಷೆ ಮುಗಿಸಿ ಕೊಂಡು ಬರುತ್ತಾನೆ!

ಹಿಂದಿನ ರಾತ್ರಿ ಲಿಂಗಮ್ಮನಿಗೆ ಬಹಳ ಕೆಟ್ಟ ಕನಸು ಊಟ ಮಾಡಿ ದಂತಾಗಿತ್ತು. ಯಾರದೋ ಮದುವೆಯಾದಂತಾಯ್ತು. ಇನ್ನು ಏನೇನೋ ಕೆಟ್ಟ ಕನಸು! ಅದನ್ನೆಲ್ಲ ನೆನಸಿಕೊಂಡು ಕಣ್ಣೀರು ಕರೆಯುತ್ತಾಳೆ. ಅಂದು ಮಧ್ಯಾಹ್ನ ನೆಲುವು ಹರಿದುಬಿದ್ದು ಪಾಪಣ್ಣನಿಗಾಗಿ ತಂದಿಟ್ಟಿದ್ದ ಹಾಲಿನ ಕುಡಿಕೆ ಚೂರುಚೂರಾಗಿತ್ತು. ರಾತ್ರಿ ಅವರಿಗೆ ಸರಿಯಾಗಿ ನಿದ್ರೆಯೇ ಇಲ್ಲ. ಪಾಪಣ್ಣನ ತಂದೆ ಒಳಗೊಳಗೆ ಕಳವಳಪಡುತ್ತಲಿದ್ದಾನೆ. ಪಾಪಣ್ಣ ಬೆಳಗ್ಗೆ ಹೊರಟಿದ್ದರೆ ಬಂದೇ ಬರಬೇಕಾಗಿತ್ತೆಂದು ಅವನ ವಾದ. ಒಂದು ಮಾತನ್ನೂ ಆಡಲೊಲ್ಲ. ಸುಮ್ಮನೆ ಮಲಗಿದ್ದಾನೆ. ಲಿಂಗಮ್ಮ ಕಂಬಕ್ಕೆ ಒರಗಿ ಕುಳಿತಿ ದ್ದಾಳೆ.

ಹೊರಗೆ ಮಳೆಯ ಆರ್ಭಟ! ಗುಡುಗು! ಮಿಂಚು! ಸಿಡಲಿನ ಬಡಿತ! ಬರ್, ಬರ್; ಬಿರುಗಾಳಿ ಬೀಸುತ್ತಲಿದೆ. ತಡಿಕೆಯ ಕದ; ಅಗಳಿ ಹಾಕಿರಲಿಲ್ಲ. ಮನುಷ್ಯರ ಸುಳಿವಾದಕೂಡಲೆ ಹೊರಗೆ ಬಂದು 'ಪಾಪಣ್ಣ' ಎನ್ನುತ್ತಾಳೆ. ನಿರಾಶೆಯಿಂದ ಒಳಗೆ ಹೋಗುತ್ತಾಳೆ. ಗಾಳಿ ಬರ್ರನೆ ಬೀಸಿ ಬಾಗಿಲನ್ನು ದಬ್ಬಿಕೊಂಡು ಒಳಗೆ ನುಗ್ಗಿತು; ಕಿರುಬಾಳುವೆಯ ಹಿರಿಯ ಬೆಳಕೆಂಬಂತೆ ಮಿನುಗುತ್ತಿದ್ದ ಒಂದೇ ಒಂದು ದೀಪ ಆರಿ ಹೋಯ್ತು! ಲಿಂಗಮ್ಮ ಕಡ್ಡಿಪೆಟ್ಟಿಗೆಗಾಗಿ ತಡಬಡಿಸುತ್ತಿದ್ದಾಳೆ........

ಪಾಪಣ್ಣ ಹೊರಗೆ, ಕಮಲಮ್ಮ, ಒಳಗೆ—ಹಾಗೇ ಮಾತನಾಡುತ್ತ ಲಿದ್ದಾರೆ.

"ನಿನ್ನದು ಯಾವೂರಮ್ಮ?"

"ಕಾಮನಹಳ್ಳಿ!"

"ಹೀಗೇಕೆ ಅಡವಿಯ ಹೆಣವಾಗಿದ್ದವ್ಮ!?"

"ಅದೆಲ್ಲ ನೆನಸಿಕೊಂಡರೆ ಈಗಲೆ ಪ್ರಾಣ ಕಳೆದುಕೊಳ್ಳಬೇಕೆನ್ನಿಸುತ್ತೆ!"

"ಅಂಥಾದ್ದೇನವ್ಮ ನಿನಗೆ ಬಂದದ್ದು!"

"ಏನೂ ಇಲ್ಲ. ನಮ್ಮ ತಂದೆತಾಯಿಗಳು ನನಗಿಷ್ಟವಿಲ್ಲದ ಒಬ್ಬರಿಗೆ ಮದುವೆ ಮಾಡಿಕೊಟ್ಟರು. ನಮ್ಮವರು ತುಂಬಾ ಕುಡುಕರು. ಜೂಜಾಟ ಇಂಥದರಲ್ಲೆ ಕಾಲ ಕಳೆಯುತ್ತಾರೆ! ಆಸ್ತಿಯೆಲ್ಲ ಹಾಳಾಗಿಹೋಯ್ತು. ಯಾವಾಗಾದರೂ ಮನೆ ಸೇರಿದರೆ, ನನ್ನನ್ನು ದನವನ್ನು ಬಡಿದ ಹಾಗೆ ಬಡಿಯುತ್ತಿದ್ದರು. ನನ್ನ ಲಗ್ನವಾಗಿ ಎರಡು ವರ್ಷಗಳಾದರೂ ಒಂದು ದಿನವೂ ನನ್ನ ಸಂಗಡ ಸರಿಯಾಗಿ ಮಾತನಾಡಿಲ್ಲ. ನನ್ನ ಮೈಯೆಲುಬು ಮುರಿದುಹೋಗಿವೆ. ತವರುಮನೆಯ ಮುಖವನ್ನೇ ನೋಡಿಲ್ಲ! ಮೊನ್ನೆ ನಮ್ಮ ತಂದೆತಾಯಿಯವರು ಬಂದಿದ್ದರು. "ಊರಿಗೆ ಬರುತ್ತೇನೆ" ಎಂದು ಕೇಳಿದೆ. ನಮ್ಮ ತಂದೆಯವರು ನಮ್ಮವರನ್ನು ಕೇಳಿದರು. ಅವರು ಕಳಿಸುವುದಿಲ್ಲ ಅಂದುದಕ್ಕೆ ಸುಮ್ಮನಾದರು. ನಾನು ಕಣ್ಣೀರು ಹಾಕಿದ್ದಕ್ಕೆ, 'ಏನು ಮಾಡುವುದವ್ಮ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ; ನಿನ್ನನ್ನು ಮನೆಗೆ ಕರೆದುಕೊಂಡುಹೋಗಿ ಇಟ್ಟುಕೊಂಡರೂ ಜನ ನಮ್ಮ ಬೆಲೆ ಕಟ್ಟುತ್ತಾರಮ್ಮ; ದೇವರ ಮೇಲೆ ಭಾರ ಹಾಕಿ ಬಾಳುವೆ ಮಾಡಿಕೊಂಡು ಹೋಗು' ಎಂದು ಹೇಳಿ ಅವರು ಕಣ್ಣೀರು ಕರೆದರು...."

ಎಂದು ಹೇಳುತ್ತ ಕಣ್ಣೀರು ತರುತ್ತಾಳೆ.

"ಅಳಬೇಡ ಸುಮ್ಮನೆ ಹೇಳವ್ಮ! ನಾನು ಆಗಲೆ ಹೇಳಿಲ್ಲವೆ 'ಪಾಲಿಗೆ ಬಂದುದು ಪಂಚಾಮೃತ' ಅಂತ."

"ನಮ್ಮ ತಂದೆ ತಾಯಿ ಇಬ್ಬರೂ ಹೊರಟುಹೋದರು. ಅವರು ಹೊರಟುಹೋದ ಮೇಲೆ ನಮ್ಮವರು ಸಂಜೆಯವರೆಗೆ ಸುಮ್ಮನಿದ್ದರು. ಆಮೇಲೆ ಕಂಬಕ್ಕೆ ಕಟ್ಟಿ, ಬಾಯಿಗೆ ಬಟ್ಟೆ ತುರುಕಿ, "ನಿಮ್ಮ ತಂದೆ ಮುಂದೆ ಏನೇನು ಹೇಳಿದೆಯೇ ಕಣ್ಣೀರು ಹಾಕುತ್ತ; 'ಏನೇ ಹೇಳಿದ್ದು' ಅಂತ ಬಾರಿಕೋಲಿನಿಂದ ಹೊಡೆದರು........ಬೆಳಕು ಹರಿಯುವವರೆಗೆ ಎಲ್ಲಿಗೋ

ಹೋಗಿದ್ದರು. ಬಂದ ಮೇಲೆ ನನ್ನನ್ನು ಬಿಚ್ಚಿದರು! ಬೆಳಗ್ಗೆ ಅಡುಗೆ ಮಾಡಿದೆ! ಊಟ ಮಾಡಿ ಎಲ್ಲಿಗೋ ಹೋದರು. ನಾನು ಬಾವಿಗೆ ಬೀಳ ಬೇಕೆಂದು ನಿರ್ಧಾರಮಾಡಿ ಬಾವಿ ಬಳಿಗೆ ಹೋದೆ. ಪ್ರಾಣಹತ್ಯೆ ಪಾಪಕರ ವೆಂದು ಓದಿದ್ದೆ. ಅದಕ್ಕೆ ಹಿಂಜರಿದು ನಮ್ಮ ತವರುಮನೆಗೆ ಹೋಗ ಬೇಕೆಂದು ಹೊರಟೆ. ಎರಡು ಮೈಲಿ ಬಂದ ಮೇಲೆ ನಮ್ಮ ತಂದೆಯವರು ಬಯ್ಯುತ್ತಾರೆಂದು ತಿಳಿದು, ನಮ್ಮ ಚಿಕ್ಕಪ್ಪನವರ ಊರಿಗಾದರೂ ಹೋಗೋಣವೆಂದು ಹೊರಟೆ; ದಾರಿ ತಪ್ಪಿತು! ಕತ್ತಲಾಯ್ತು! ಎಲ್ಲಿಯೋ ಕಾಣದಹಾಗೆ ಅಡವಿಗೆ ಬಂದೆ. ಅಷ್ಟರಲ್ಲಿ ಮಳೆಗಾಳಿ ಎದ್ದು ಆರ್ಭಟ ಮಾಡಿತು. ತೋದುಕೊಳ್ಳುತ್ತ ಹಾಗೇ ಬಂದೆ. ಮುಂದಕ್ಕೆ ಬರುವುದಾಗ ಲಿಲ್ಲ. ಹಾಗೆ ಆ ಗಿಡವನ್ನು ಹಿಡಿದು ನಡುಗುತ್ತ ಕುಳಿತಿದ್ದೆ! ಬಲವಾಗಿ ಸಿಡಿಲುಬಡಿದುದಕ್ಕೆ ಕಿರುಚಿಕೊಂಡೆ, ಅಲ್ಲಿಗೆ ನೀವೂ ಬಂದಿರಿ........''

ಎಂದು ಹೇಳುತ್ತ ಮತ್ತೆ ಅಳುತ್ತಾಳೆ.

"ಅಳಬೇಡಮ್ಮ, ಅಳಬೇಡ, ದೇವರಿದ್ದಾನೆ. ಬಂದ ಕಷ್ಟಗಳನ್ನೆಲ್ಲ ಶಾಂತಿಯಿಂದ ಅನುಭವಿಸಬೇಕು. ಆಗ ದೇವರು ಮೆಚ್ಚುತ್ತಾನೆ. ಬಸವಣ್ಣ ನವರು 'ಮನವನಲ್ಲಾಡಿಸಿ ನೋಡುವೆ ನೀನು; ತನುವನಲ್ಲಾಡಿಸಿ ನೋಡುವೆ ನೀನು; ಅದಕಾರಂಜುವರು, ಅದಕಾರಳುಕುವರು; ನಾಳೆ ಬಪ್ಪುದು ನಮಗಿಂದೇ ಬರಲಿ; ಇಂದು ಬಪ್ಪುದು ನಮಗೀಗಲೆ ಬರಲಿ...............' ಎಂದು ಮುಂತಾಗಿ ಹೇಳಿಲ್ಲವೇನಮ್ಮ. ಅಕ್ಕ ಮಹಾದೇವಿಯವರೂ ಕೂಡ ಒಂದು ಕಡೆ ಹೇಳಿದ್ದಾರಲ್ಲಮ್ಮ, 'ಬೆಟ್ಟದ ಮೇಲೊಂದು ಮನೆಯಮಾಡಿ ಮೃಗಗಳಿಗಂಜಿದೊಡೆಂತಯ್ಯ,....ಅಂತ....' ಆದುದರಿಂದ ಬಂದ ಕಷ್ಟಗಳನ್ನು ಅನುಭವಿಸಬೇಕು. ನಮಗೆ ಎಂಥಾ ಕಷ್ಟವೇ ಬರಲಿ ದೇವರ ಮೇಲೆ ಭಾರ ಹಾಕಬೇಕು. ಎಲ್ಲವನ್ನೂ ಆತ ನೋಡಿ ಕೊಳ್ಳುತ್ತಾನೆ. ನಾವು ಬೇರೆಯವರನ್ನು ಬಯ್ಯಬಾರದಮ್ಮ. ನಾವು ಪಡೆದುಕೊಂಡುಬಂದುದಕ್ಕೆ ಯಾರೇನು ಮಾಡುತ್ತಾರೆ!"

"ನಾನು ಇಲ್ಲಿಂದ ಯಾವ ಕಡೆಗಾದರೂ ಹೋಗಿ ಪ್ರಾಣ ಕಳೆದು ಕೊಳ್ಳುತ್ತೇನಣ್ಣ!"

"ಹಾಗೆಲ್ಲ ಮಾತನಾಡಬಾರದಮ್ಮ. ದೇವರು ನಮ್ಮ ಮೇಲೆ ತಪ್ಪು ಹೊರಿಸುತ್ತಾನೆ!........"

ಕಮಲಮ್ಮ ಬಿಕ್ಕಿಬಿಕ್ಕಿ ಅಳುತ್ತಾಳೆ. ಪಾಪಣ್ಣನ ಮನಸ್ಸಿನಲ್ಲಿ ವಿಚಾರ ಧಾರೆ ಧಾರೆಯಾಗಿ ಹರಿಯುತ್ತಲಿದೆ.

'ಸಮಾಜ! ಕುರುಡು ಸಮಾಜ. ಹೂವಿನಂತೆ ಬೆಳೆದ ಬೇರೆಯವರ ಹೆಣ್ಣುಮಕ್ಕಳನ್ನು ತಂದು ಸಾಕಿಕೊಳ್ಳದ ದಾನವ ಸಮಾಜ. ತಂದೆ ತಾಯಿಗಳನ್ನೂ ಅಣ್ಣತಮ್ಮಂದಿರನ್ನೂ ಎಳೆತನದ ಗೆಳತಿಯರನ್ನೂ ಬಿಟ್ಟು ಎಲ್ಲಿಯದೋ ಯಾರ ಮನೆಗೋ ಬಂದು ಬಾಳುವೆ ಮಾಡುವಾಗ, ಅಯ್ಯೋ, ಅವರನ್ನಿಷ್ಟು ಪ್ರೀತಿಯಿಂದ ಕಾಣಬಾರದೆ', ಎಂದು ಏನೇನೋ ಯೋಚನೆ ಮಾಡುತ್ತಿದ್ದ ಹಾಗೆ ಎಲ್ಲಿಯೋ ಓದಿವ ಒಂದು ಪದ್ಯ ಮನೋಮಂದಿರದಲ್ಲಿ ಹಾದುಹೋಗುತ್ತದೆ.

ಕಣ್ಣೀರ ಕರೆಯದಿರು
ಕಣ್ಣೀರ ಕರೆಯದಿರು
ಕಣ್ಣೀರ ಕರೆಯದಿರು ತಾಯೇ!
ಕೈಯೆತ್ತಿ ಬೇಡುವೆನು ತಾಯೇ!

ಕಣ್ಣೀರು ಉಕ್ಕೀತು
ಮುನ್ನೀರ ಮಿಕ್ಕೀತು
ಮೂಜಗವ ಮುಕ್ಕೀತು, ತಾಯೇ ||

ಜಗವು ಎಚ್ಚತ್ತೀತು
ಒಳಗಣ್ಣ ತೆರೆದೀತು
ನಿನ್ನಳಲ ಕಂಡೀತು, ತಾಯೇ ||

ಸಿಟ್ಟುಸಿರ ಬಿಡಬೇಡ
ಶಾಪವನು ಕೊಡಬೇಡ
ಶಾಂತಿಯನು ಬಿಡಬೇಡ, ತಾಯೇ ||

ನಿನ್ನ ಉಸಿರಿನ ಬೇಗೆ
ಜಗದ ಉದ್ದಕು ಸಾಗೆ
ತತ್ತರಂಗುಟ್ಟುತಿದೆ, ತಾಯೇ ||

ನಿನ್ನಿಂದ ಜಗದಿರವು
ನಿನ್ನಿಂದ ಇಹಪರವು
ನಿನ್ನನುಳಿದೆಲ್ಲಿಹುದು ಶಿವನ ತನುವು!!

ಇನ್ನೂ ಏನೇನೋ ಯೋಚನೆ ಮಾಡುತ್ತಿದ್ದ. ಅಷ್ಟರಲ್ಲಿ, "ಅಣ್ಣಾ" ಎಂದಳು.

"ಏನಮ್ಮ?"

"ಏಕಣ್ಣ ಸುಮ್ಮನೆ ಕುಳಿತೆ!"

"ಏನೋ ನೆನಪಿಗೆ ಬಂತು!"

"ಏನಣ್ಣ ಅದು?"

"ಏನೂ ಇಲ್ಲ, ೨೫ನೇ ತಾ|| ಊರಿಗೆ ಬರುತ್ತೇನೆಂದು ಬರೆದಿದ್ದೆ. ನಮ್ಮ ತಂದೆ ತಾಯಿಯರು ಕಾದಿರುತ್ತಾರೆ. ನಮ್ಮ ಅಮ್ಮನನ್ನು ನೋಡದೆ ಈಗ ಹತ್ತು ವರ್ಷವಾದ ಹಾಗಾಗಿದೆ. ನಾನು ಹೋದರೆ ನಮ್ಮಮ್ಮ ಸಣ್ಣ ಕೂಸನ್ನು ಕಂಡ ಹಾಗೆ ಕಾಣುತ್ತಾಳೆ. ತುತ್ತು ಬಾಯಲ್ಲಿ ಇಡಲಿಕ್ಕೆ ಬರುತ್ತಾಳೆ...............ಸರಿ ಇರಲಿ ಬಿಡು, ನಾವೆ ಹೇಗೂ ಊರು ಸೇರುತ್ತೇವಲ್ಲ"

"ನಿನ್ನ ಸಮಾಚಾರವೇ ತಿಳಿಯಲಿಲ್ಲವಲ್ಲಣ್ಣ"

"ಅದನ್ನೇನು ಕೇಳುತ್ತಿ ತಂಗೀ ಆಮೇಲೆ ಹೇಳುತ್ತೇನೆ; ತಂಗಿ, ದೇವರ ಮಾಯ! 'ಯಾವ ಹೆಜ್ಜೆಗೆ ಯಾವ ನಿಮಿಷಕ್ಕೆ ಏನು ಬರುವುದೊ ತಿಳಿಯದು' ಅಂತ ಹೇಳುತ್ತಾರೆ, ನಿಜ! ನಾವಿಬ್ಬರು ಹೀಗೆ ಕಲೆಯುತ್ತಿದ್ದೆವೆಂದು ಅಂದುಕೊಂಡಿದ್ದೆವೆ? ಮುಂದಿನ ನಿಮಿಷದಲ್ಲಿ ಏನಾಗುತ್ತದೆಯೋ ಯಾರು ಬಲ್ಲರು! ಎಲ್ಲಾ ದೇವರ ಇಚ್ಛೆಯಂತೆ ನಡೆಯುತ್ತೆ!"

ಹೀಗೆಯೇ ಅವನು ಹೊರಗೆ, ಆಕೆ ಒಳಗೆ ಮಾತನಾಡುತ್ತಲಿದ್ದಾರೆ. ಹೊರಗಿನ ದೀಪ ಆಗಲೇ ನಂದಿಹೋಗಿದೆ. ಇನ್ನೂ ಬೆಳಕು ಹರಿಯಲಿಲ್ಲ. ಅವರಿಗೆ ನಿದ್ರೆಯಂತೂ ಇಲ್ಲ. ಹೊಟ್ಟೆಯಲ್ಲಿ ಅನ್ನವಿಲ್ಲದ್ದರಿಂದ ಸಂಕಟ ಸಂಕಟವಾಗುತ್ತಲಿದೆ. ದೂರದ ಮರದಲ್ಲಿ ಒಂದು ಗೂಗೆ 'ಗೂಕ್' ಎಂದಿತು....

"ತಂಗೀ, ಹೊರಗೆ ಹೋಗಿ ಬೆಳ್ಳಿ ಹುಟ್ಟಿದೆಯೋ ಏನೋ ನೋಡಿಕೊಂಡು ಬರುತ್ತೇನೆ........"

ಎಂದು ಮೆಲ್ಲಗೆ ಎದ್ದು, ಗಂಟು ಹಿಡಿದ ಕಾಲುಗಳನ್ನು ಬಿಡಿಸಿಕೊಂಡು, ಮೆಟ್ಟಲು ಇಳಿದು, ಕೆಳಗೆ ಹೋದ. ಹೋದದ್ದು ತಡವಿಲ್ಲ, 'ಹಾಯ್, ಶಿವ ಶಿವಾ!' ಎಂದು ಕಿರುಚಿದ! ಹಿಡಿಯಾಗಿ ನೆಲಕ್ಕೆ ಬಿದ್ದ!! ಕಮಲಮ್ಮ ಒಳಗಿನಿಂದ ತಡಬಡಿಸುತ್ತ ಓಡಿಬಂದಳು! ಬರುವ ರಭಸಕ್ಕೆ ದೀಪ ಆರಿಹೋಯ್ತು! ಸಮೀಪಕ್ಕೆ ಧಾವಿಸಿ 'ಅಣ್ಣಾ' ಎಂದು ಕಿರುಚಿದಳು! ಕಪ್ಪು ನಾಗರಹಾವು ಸಳ ಸಳ ಹರಿದುಹೋಗುತ್ತಿತ್ತು!

ಮೂಡಲಲ್ಲಿ ಬೆಳ್ಳಿ ಮೂಡಿತ್ತು!!

ಗುಣವಂತೆ ಗೌರ

ಉಮಾಪತಿ ಮನೆಗೆ ಬರಲು ಅದೇಕೋ ಆ ದಿನ ಆರು ಗಂಟೆಯಾಯಿತು. ಗೌರಮ್ಮನಿಗೆ ಕಾದು ಕಾದು ಸಾಕಾಯಿತು. ಅವನು ಆಫೀಸಿನಿಂದ ಅರ್ಧ ಗಂಟೆ ತಡವಾಗಿ ಬಂದರೆ ಆಕೆಗೆ ವರ್ಷಾಂತರವನ್ನು ಕಳೆದಂತಾಗುತ್ತಿತ್ತು. ಉಮಾಪತಿ ಯಾವಾಗಲೂ ತನ್ನ ಸಮೀಪದಲ್ಲಿಯೇ ಇರಬೇಕೆಂದು ಆಶೆ. ಆಫೀಸಾದರೂ ಏಕಿದೆಯೋ ಎಂದು ಶಪಿಸಿದ್ದೂ ಉಂಟು. ಗೌರಮ್ಮನ ಪಾಲಿಗೆ ಉಮಾಪತಿಯೇ ಸರ್ವಸ್ವ! ಗಂಡನನ್ನು ಬಿಟ್ಟಿರಲಾರದೆ, ಒಂದು ವರ್ಷವಾದರೂ ತೌರುಮನೆಗೆ ಹೋಗಿರಲಿಲ್ಲ!

ಇವರ ಮದುವೆಯಾಗಿ ಕೇವಲ ಒಂದೂವರೆ ವರ್ಷ. ಬೆಂಗಳೂರಲ್ಲಿ ಇವರಿಬ್ಬರದೇ ಪುಟ್ಟ ಬಾಳುವೆ. ಉಮಾಪತಿಗೂ ಕೈತುಂಬ ಸಂಬಳ ಬರುತ್ತಿತ್ತು. ಇಬ್ಬರೂ ಕಲಾಪ್ರೇಮಿಗಳು. ಸಾಹಿತ್ಯವೆಂದರೆ ಅವರಿಗೆ ಪಂಚಪ್ರಾಣ. ಅನರದು, ಕಂಡವರು ಕುರುಬುವಂಥ ಜೀವನ. ಒಬ್ಬರ ಗೊಡವೆಗೆ ಹೋಗುವವರಲ್ಲ. ಅದೊಂದು ಅನುಕರಣೀಯ ಬಾಳುವೆ.

ಉಮಾಪತಿ ಆಫೀಸಿನಿಂದ ಬರುವುದನ್ನು ನೋಡಿದ ಕೂಡಲೆ, ಗೌರಮ್ಮ ಒಳಗೆ ಹೋಗಿ ಮಾಡಿಟ್ಟ ಕಾಫಿಯನ್ನು ಬಿಸಿ ಮಾಡತೊಡಗಿದಳು. ಉಮಾಪತಿ ಬಂದಕೂಡಲೆ ತನ್ನ ಮೇಜಿನ ಬಳಿಯ ಕುರ್ಚಿಯ ಮೇಲೆ ಕುಳಿತ. ಅವನ ದೃಷ್ಟಿ ಸಹಜವಾಗಿ ಮೇಜಿನ ಮೇಲೆ ಹೊರಳಿತು. ಅವನ ಕಣ್ಣನ್ನು ಅವನೇ ನಂಬದಾದ. ಇದು ನಿಜವೇ ಎಂದು ಯೋಚಿಸತೊಡಗಿದ. ಮೇಜಿನ ಮೇಲಿದ್ದ ಆ ಕಾಗದವನ್ನು ಅನೇಕ ಸಲ ಓದಿದ. ಇದು ನಿಜವೇ ಎಂದು ಮತ್ತೆ ಯೋಚಿಸತೊಡಗಿದ. ಅವನಿಗೆ ಕೋಪದ ಬದಲು ದುಃಖ ಉಮ್ಮಳಿಸಿ ಬಂತು. ಅವನು ಮಗುವಿನಂಥ ಮನುಷ್ಯ!—ಅವನಿಗೆ ಏನೂ ತೋಚದಾಯಿತು. “ನನ್ನ ನಚ್ಚಿನ ಗೌರಗೆ ನನ್ನ ಮೇಲೆ ವಂಚನೆಯೆ!!!”—ಎಂದು ಮಾತ್ರ ಪರಿತಪಿಸಿದ. ಕುರ್ಚಿಯ ಮೇಲೆ ಕುಳಿತುಕೊಳ್ಳಲಾರದೆ,

ಕೋಣೆಗೆ ಹೋಗಿ ಮಂಚದ ಮೇಲೆ ಮಲಗಿಬಿಟ್ಟ. ಕಾಗದವನ್ನು ಪುನಃ ಓದಿದ:—

"ಹೃದಯೇಶ್ವರಿ,

ನಿನ್ನ ಮುಖಕಮಲವನ್ನು ಒಂದು ದಿನ ಕಾಣದಿದ್ದರೆ ನನಗದೆಷ್ಟು ಬೇಸರವಾಗುತ್ತದೆಂಬುದನ್ನು ನೀನು ಬಲ್ಲೆಯಾ ? ನೀನು ಅದೇಕೆ ಮೌನ ವಾಗಿರುವಿ ? ನಿನ್ನ ಹೃದಯದ ಆಕಾಂಕ್ಷೆಯನ್ನೇಕೆ ತಡೆಗಟ್ಟುವಿ ? ನಿನ್ನ ಸಂಗಡ ನಾನು ಈ ದಿನ ಮನದಣಿಯುವವರೆಗೂ ಮಾತನಾಡಬೇಕೆಂದಿದ್ದೇನೆ. ಹೇಗಾದರೂ ಮಾಡಿ ಅವಕಾಶವನ್ನು ಕಲ್ಪಿಸಿಕೊ............ನನ್ನ ಪಂಚ ಪ್ರಾಣವೇ ನೀನೆಂದು ನಂಬಿದ್ದೇನೆ. ನನ್ನನ್ನು ಹತಾಶನನ್ನಾಗಿ ಮಾಡ ಬೇಡ. ಬಹಳ ದಿನಗಳ ಬಯಕೆಯನ್ನು ಪೂರೈಸಲಾರೆಯಾ ?........"

ಉಮಾಪತಿಯ ಕಣ್ಣಿನಲ್ಲಿ ನೀರೂರತೊಡಗಿತು. ಕಾಗದವನ್ನು ಮುಂದೆ ಓದಲಾಗಲಿಲ್ಲ. ಸುಮ್ಮನೆ ಅದನ್ನು ಜೇಬಿನಲ್ಲಿರಿಸಿಕೊಂಡು, ಹೊದ್ದುಕೊಂಡು ಮಲಗಿಬಿಟ್ಟ.

ಗೌರಮ್ಮ ಕಾಫಿ ಬಿಸಿ ಮಾಡಿಕೊಂಡು, ಅದರ ಜೊತೆಗೆ ಬೋಂಡ ವನ್ನೂ ತಂದಳು. ಅಷ್ಟರಲ್ಲಿ ಉಮಾಪತಿ ಹೊದ್ದುಕೊಂಡು ಮಲಗಿದ್ದನ್ನು ನೋಡಿ, ಆಕೆಗೆ ಪರಮಾಶ್ಚರ್ಯದ ಜೊತೆಗೆ ಭಯವೂ ಉಂಟಾಯಿತು. ಉಮಾಪತಿಗೆ ಮೈಯಲ್ಲಿ ಹುಷಾರಿರಲಿಕ್ಕಿಲ್ಲವೆ ! ಇನ್ನೇನಾದರೂ ದುಃಖದ ವಾರ್ತೆ ಬಂದಿರಬಹುದೆ !! — ಗೌರಮ್ಮನಿಗೆ ಬಿಡಿಸಲಾರದ ಸಮಸ್ಯೆ ಯಾಯಿತು.

"ರೀ, ಏಕೆ, ಏನಾಯಿತು. ಏಳಿ, ಮೇಲೇಳಿ. ಜ್ವರ ಬಂದಿದೆಯೇ ? ತಲೆ ನೊಯ್ಯುತ್ತದೆಯೇ ? ಏನಾಯಿತು ಹೇಳಿ"

ಎಂದು ಅಂಗಲಾಚಿದಳು. ಉಮಾಪತಿ ಮತ್ತಷ್ಟು ಬಿಗಿಯಾಗಿ ಹೊದ್ದುಕೊಂಡ.

"ಏಕೆ, ಏನಾಯಿತು ಹೇಳೀಂದ್ರೆ. ಕಾಫಿ ಆರಿಹೋಗುತ್ತೆ ತೆಗೆದು ಕೊಳ್ಳಿ ; ಅದೇಕೆ ಹೀಗೆ ಮಾಡುತ್ತೀರಿ......."

ಪದ್ಧತಿಯಂತೆ ಗೌರಮ್ಮನ ಕಣ್ಣುಗಳಲ್ಲಿ ಹನಿಯತೊಡಗಿತು. ಆಕೆ ಬಹಳ ಕೋಮಲೆಯಾದ್ದರಿಂದ ಇಂಥ ಪ್ರಸಂಗಗಳು ಬಂದೊದಗಿದರೆ ಬೇರು

ಕೊಯ್ದ ಬಳ್ಳಿಯಂತಾಗುತ್ತಿದ್ದಳು. ಮನಸ್ಸು ಗಟ್ಟಿಮಾಡಿಕೊಂಡು ಮತ್ತೆ ಮಾತನಾಡಿಸಿದಳು :

"ಈಗ ನನ್ನ ಸಂಗಡ ಮಾತನಾಡಬೇಡ. ಮರ್ಯಾದೆಯಿಂದ ಸುಮ್ಮನೆ ಹೋಗು! ನಾನೀಗ ಮಾತನಾಡುವಂತಿಲ್ಲ........"

"ಕಾಫಿ ತೊಗೊಳ್ಳಿ........"

"ಮತ್ತೆ ಅದೆ........"

"ಬೋಂಡ ಮಾಡಿದ್ದೇನೆ....ಸ್ವಲ್ಪ........"

"ಗೌರ, ಮರ್ಯಾದೆಯಿಂದ ಹೇಳುತ್ತಲಿದ್ದೇನೆ. ಸುಮ್ಮನೆ, ಕೋಣೆ ಯನ್ನು ಬಿಟ್ಟು ಹೊರಗೆ ನಡೆ; ನನಗೆ ತೊಂದರೆ ಕೊಡಬೇಡ...."

"ತಲೆ ಒತ್ತಲೆ? ನೀಲಗಿರಿ ತೈಲ ಹಚ್ಚಲೆ? ಏನಾಗಿದೆ ಹೇಳಿ. ಹಾಗೇಕೆ ಕೋಪ ಮಾಡಿಕೊಳ್ಳುತ್ತೀರಿ...."

ಎಂದು ಗೌರಮ್ಮ ಸೆರಗಿನಿಂದ ಕಣ್ಣೀರು ಒರೆಸಿಕೊಳ್ಳತೊಡಗಿದಳು....

'ಜಗತ್ತು ಇಷ್ಟು ಕೆಟ್ಟದ್ದೆಂದು ನಾನು ಭಾವಿಸಿರಲಿಲ್ಲ........ಪಾಷಾಣ ಹೃದಯಿ....ಇಷ್ಟೊಂದು ಕಪಟ....ಅಬ್ಬ!........'

"ಹಾಗೇಕೆ ಒಬ್ಬರೇ ಮಾತನಾಡಿಕೊಳ್ಳುತ್ತಿದ್ದೀರಿ? ಏನಾಯಿತು ಹೇಳಿ? ಅಂಥಾ ಕೆಟ್ಟದ್ದೇನಾಯಿತು ಹೇಳೀಂದ್ರೆ!.... ಏಕೆ ನನ್ನ ಸಂಗಡ ಮಾತನಾಡುವುದಿಲ್ಲವೆ?........"

"ಮಾತನಾಡುವುದೇನು! ಶಂಕರನ ಬಾಳು ಬಯಲಾಗುವ ಪ್ರಸಂಗ ಬಂದೊದಗಿತು! ಯಾರನ್ನು ತನ್ನ ಹೃದಯವೆಂದು ನಂಬಿ ಅರೆಕ್ಷಣ ಅಗಲದೆ ಇದ್ದನೋ, ಯಾರನ್ನು ತನ್ನ ಕಣ್ಣುಗೊಂಬೆಯೆಂದು ಭಾವಿಸಿಕೊಂಡು ಬಂದಿದ್ದನೋ ಅವರೇ ಇಂದು ದ್ರೋಹ ಬಗೆಯತೊಡಗಿದ್ದಾರೆ ...."

"ಯಾರವರು? ಶಂಕರಪ್ಪ ಎಂಬುವರಾರು?"

"ಅವರೊಬ್ಬ ನನ್ನ ನಚ್ಚಿನ ಸ್ನೇಹಿತರು. ಚಿನ್ನದಂಥ ಮನುಷ್ಯ! ಬೆಳ್ಳಗಿದ್ದುದನ್ನೆಲ್ಲಾ ಹಾಲೆಂದು ನಂಬುವ ಮುಗ್ಧ!....ಅವನ ಜೀವನನೌಕೆ, ಇಂದು ಬಲವಾದ ಬಿರುಗಾಳಿಯಲ್ಲಿ ಸಿಕ್ಕು ಹೋಯ್ದಾಡತೊಡಗಿದೆ...."

"ಏಕೆ, ಅವರಿಗೇನಾಯಿತು?...."

"ತನ್ನ ಪ್ರಾಣವೆಂದು ನಂಬಿದ್ದ ತನ್ನ ಹೆಂಡತಿಯು ಬೇರೊಬ್ಬನಲ್ಲಿ ಅನುರಕ್ತಳಾಗಿ, ಅವನನ್ನು ದೂರೀಕರಿಸತೊಡಗಿದ್ದಾಳೆ. ಇಂದು ಅವನಿಗೆ ದಿಕ್ಕು ತೋಚದಾಗಿದೆ! ...."

"ಪಾಪ! ಅವರ ಹೆಂಡತಿಯೇ ಹಾಗೆ ಮಾಡಿದಳೆ? ಇಂಥವರಿಂದಲೇ ಸ್ತ್ರೀ ಜಾತಿಗೆ ಕಳಂಕ ತಟ್ಟುವುದು. ಪಾಪ! ಅವರಿಗೆ ತುಂಬಾ ವ್ಯಥೆಯಾಗಿರ ಬಹುದು! .... ಸರಿ, ಅವರವರ ದೈವ .... ನೀವೇಕೆ ಇಷ್ಟೊಂದು ದುಃಖಿತ ರಾಗಬೇಕು! ಸ್ನೇಹಿತರ ಬಗ್ಗೆ ತಾಪ ಪಡುವುದು ಸಹಜ. ಆದರೆ, ಇಷ್ಟೊಂದು........"

"ಗಂಡಸರ ಹೃದಯ ಸ್ತ್ರೀ ಹೃದಯದಷ್ಟು ಕಠಿಣವಲ್ಲವೆಂಬುದನ್ನು ನೀನಿನ್ನೂ ಅರ್ಥಮಾಡಿಕೊಳ್ಳಬೇಕಾಗಿದೆ....ನನ್ನ ಸ್ನೇಹಿತನಿಗಾದ ದುಃಖ, ನನ್ನ ದುಃಖವೆಂದೇ ಭಾವಿಸಿದ್ದೇನೆ ...."

"ಈಗ, ಅವರ ಹೆಂಡತಿ ಎಲ್ಲಿದ್ದಾರೆ?"

"ಮನೆಯಲ್ಲಿಯೇ ಇದ್ದಾಳೆ. ಬಹಳ 'ಮಳ್ಳಿ'ಯ ಹಾಗೆ; ಏನೂ ಅರಿಯದ ಹಸುಗೂಸಿನ ಹಾಗೆ ವರ್ತಿಸಿ, ಅವನ ಕಣ್ಣಿಗೆ ಸುಣ್ಣ ಎರಚ ಬೇಕೆಂದಿದ್ದಾಳೆ ...."

"ಪಾಪ! ಅವರ ಹೆಂಡತಿಗೇಕೆ ಅಂಥ ಕೆಟ್ಟ ಬುದ್ಧಿ ಬಂತೋ! ಶಂಕರಪ್ಪನವರನ್ನು ಕರೆದುಕೊಂಡು ಬಂದಿದ್ದರೆ ಚೆನ್ನಾಗಿತ್ತಲ್ಲ. ದುಃಖ ದಲ್ಲಿರುವ ಸ್ನೇಹಿತರನ್ನು ಕರೆದುಕೊಂಡು ಬಂದು ಸಂತೈಸುವುದು........"

"ಅವನು ಸಿಕ್ಕ ಸಿಕ್ಕ ಹಾಗೆ ಬೇರೆಯವರ ಮನೆಗೆ ಹೋದವನಲ್ಲ.... ತನ್ನ ಹೆಂಡತಿಯನ್ನು ಬಿಟ್ಟಿರಬೇಕೆಂದರೆ ಅವನ ಪ್ರಾಣಕ್ಕೇ ಬರುತ್ತಿತ್ತು...."

"ಪಾಪ! .... ಹೆಂಗಸರ ಬುದ್ಧಿ ...."

"ಅವನ ಹೆಂಡತಿಯು ನಿನ್ನ ಹಾಗೆ ಬೆಲ್ಲದಂಥ ಮಾತನಾಡುವುದರಲ್ಲಿ ಎತ್ತಿದ ಕೈ ...."

ಆಗ ಗೌರಮ್ಮನಿಗೇಕೋ ಅನುಮಾನ ಬಂತು. ಉಮಾಪತಿಯ ಒಂದೊಂದು ಮಾತೂ ಅರ್ಥಗರ್ಭಿತವಾಗಿತ್ತು! ಅದೆಲ್ಲವೂ ಆಕೆಗೆ ವ್ಯಂಗ್ಯ ವಾಗಿ ಕಾಣತೊಡಗಿತು.

"ನೀವೇನೋ ಮರೆಮಾಚಿ ಮಾತನಾಡುತ್ತಲಿದ್ದೀರಿ. ಅದೇನು ಸ್ಪಷ್ಟವಾಗಿ ತಿಳಿಸುವಿರಾ? .... ಅದೇನು ಹೇಳೀಂದ್ರೆ!"

"ನಾನು ಮೊದಲೇ ಹೇಳಿದ್ದೇನೆ....ಮರ್ಯಾದೆಯಿಂದ ಕೋಣೆ ಬಿಟ್ಟು ಹೋಗೆಂದು. ಮತ್ತೆ ರಾದ್ಧಾಂತ ಮಾಡುತ್ತಲಿದ್ದಾಳೆ...."

"ಕಾಫಿಯನ್ನಾದರೂ ತೆಗೆದುಕೊಳ್ಳಿ."

ಎಂದು ಬಲಗೈಯಲ್ಲಿ ಕಾಫಿ ಲೋಟ ಹಿಡಿದುಕೊಂಡು, ಎಡಗೈಯಿಂದ ಅವನು ಹೊದ್ದಿದ್ದ ಶಾಲನ್ನು ಓರೆಮಾಡಿದಳು........

ಅವನಿಗೆ ಕೋಪ ತಡೆಯದಾಯ್ತು. ಕಾಫಿ ಲೋಟ ತೆಗೆದುಕೊಂಡು ದೂರ ಎಸೆದುಬಿಟ್ಟ!........ಗೌರಮ್ಮನಿಗೆ ದುಃಖ ತಡೆಯಲಾಗಲಿಲ್ಲ. ಅಲ್ಲಿ ನಿಲ್ಲಲಾರದೆ, ಅಡಿಗೆಮನೆಗೆ ಬಂದು ಬಿಕ್ಕಿ ಬಿಕ್ಕಿ ಅಳುತ್ತ ಕುಳಿತು ಬಿಟ್ಟಳು........

ಅಷ್ಟರಲ್ಲಿ ಯಾರೋ ಬಂದು, "ಸಾರ್"—ಎಂದರು. ಯಾವುದೋ ಯೋಚನೆಯಲ್ಲಿದ್ದ ಉಮಾಪತಿಗೆ ಕೂಗಿದ್ದು ಕೇಳಿಸಲಿಲ್ಲ. ಮತ್ತೆ "ಸಾರ್" ಎಂಬ ಕರೆ ಬಂತು. ಉಮಾಪತಿ ಎದ್ದು ಬಂದು, "ಯಾರು?" ಎಂದ.

"ನಾನು ಸಾರ್, ಗಂಗ. ನಮ್ಮ ಸಾಹೇಬರು ಈ ಚೀಟಿ ಕೊಟ್ಟಿದ್ದಾರೆ. ಅಲ್ಲೆ, ಅದೇನೋ ಕೊಡುತ್ತಾರೆ ಇಸಕೊಂಡು ಬಾ ಅಂತ ಹೇಳಿದರು........"

"ಎಲ್ಲಿ, ಚೀಟಿ ಕೊಡು,"–ಎಂದು ಗಂಗನ ಬಳಿಯಿದ್ದ ಚೀಟಿಯನ್ನು ತೆಗೆದುಕೊಂಡು ನೋಡಿದ:

ಗೆಳೆಯ ಉಮಾಪತಿ,

ಈ ದಿನ ನಾಲ್ಕೂವರೆ ಗಂಟೆಯಲ್ಲಿ ನಮ್ಮ ಗಂಗನ ಸಂಗಡ ಒಂದು ಕತೆಯನ್ನು ಕಳಿಸಿದ್ದೆ. ನೀನು ಮನೆಯಲ್ಲಿರಲಿಲ್ಲವಂತೆ. ಅದನ್ನು ಬೇಗ ಪ್ರಕಟಣೆಗಾಗಿ ಕಳಿಸಬೇಕಾಗಿದೆ. ಆದ್ದರಿಂದ, ನೀನು ನೋಡಿದ್ದರೆ, ತಿದ್ದಬೇಕಾದುದನ್ನು ಸೂಚಿಸಿ, ನಮ್ಮ ಗಂಗನ ಸಂಗಡ ತಕ್ಷಣ ಕಳಿಸಿಕೊಡು. ಸಾಧ್ಯವಾದರೆ, ನೀನೂ ನಮ್ಮ ಮನೆ ಕಡೆಗೆ ಬಾ........

ಇಂತು ನಿನ್ನ,
ಶ್ರೀಧರ.

ಗಂಗಸನ್ನು ವರಾಂಡದಲ್ಲಿ ಸ್ವಲ್ಪ ಕುಳಿತುಕೊಳ್ಳುವಂತೆ ಹೇಳಿ, ಉಮಾಪತಿ ಒಳಗೆ ಬಂದು, ಮೇಜಿನ ಮೇಲೆಲ್ಲ ಹುಡುಕತೊಡಗಿದ. ಗೌರಮ್ಮನನ್ನು ಮಾತನಾಡಿಸಿದರೆ ಆತ್ಮಗೌರವಕ್ಕೆ ಕುಂದು ಎಂದು ಅವನ ಭಾವನೆ. ಇವನು ಹುಡುಕಾಡುವುದನ್ನು ನೋಡಿ, ಗೌರಮ್ಮ ಮೆಲ್ಲಗೆ ಎದ್ದು ಬಂದು, ಪುಸ್ತಕಗಳ ಮಧ್ಯದಲ್ಲಿ ಇಟ್ಟಿದ್ದ ಕತೆಯ ಹಾಳೆಗಳನ್ನು ತೆಗೆದುಕೊಟ್ಟು ಮತ್ತೆ ಒಳಗೆ ಹೋಗಿಬಿಟ್ಟಳು. ಉಮಾಪತಿ, ಪದ್ಧತಿಯಂತೆ ಕತೆ ಎಷ್ಟು ಪುಟ ಇದೆ ಯೆಂದು ನೋಡಿದ. ಹದಿನಾರು ಪುಟದ ಕಥೆ. ಹನ್ನೆರಡನೆ ಪುಟ ಅದರ ಲ್ಲಿರಲೇ ಇಲ್ಲ. ಎಲ್ಲಿರಬಹುದೆಂದು ಮತ್ತೆ ಅಲ್ಲೆಲ್ಲ ಹುಡುಕತೊಡಗಿದ. "ಎಲ್ಲಿ ಹೋಯಿತೊ...." ಎಂದು ಒಬ್ಬನೆ ಗೊಣಗತೊಡಗಿದ....... ಹತ್ತು ಅಥವಾ ಹದಿನೈದು ನಿಮಿಷ ಪುಸ್ತಕಗಳನ್ನೆಲ್ಲಾ ಕೊಡವಿ ಶೋಧಿಸತೊಡಗಿದ. ....ಅವನಿಗೆ ಮನಸ್ಸು ಬಿಗಿಹಿಡಿಯಲಾಗಲಿಲ್ಲ....

"ಗೌರ, ಹನ್ನೆರಡನೆ ಪುಟ ಏನಾಯ್ತು!"

ಎಂದು ಕೇಳಿಯೇ ಬಿಟ್ಟ. ಉಮಾಪತಿ ಮಾತನಾಡಿಸಿದನಲ್ಲಾ ಎಂದು ಗೌರಮ್ಮನಿಗಾದ ಸಂತೋಷವನ್ನು—ಇಷ್ಟೇ ಎಂದು ಹೇಳಲಿಕ್ಕಾಗುವುದಿಲ್ಲ.

"ಅಲ್ಲೆ ಇತ್ತು ...ನೀವು ಬರುವುದಕ್ಕೆ ಮುಂಚೆ ಇಲ್ಲೇ ಇಟ್ಟಿದ್ದೆ...." ಎಂದು ಹುಡುಕಾಡತೊಡಗಿದಳು. ಆಕೆಯ ಮುಗ್ಧಸ್ವಭಾವವನ್ನು ನೋಡಿ ಉಮಾಪತಿಗೆ....ಕರುಣೆಯಾಯಿತು.

"ಹನ್ನೆರಡನೆ ಪುಟದಲ್ಲಿ ಅದೇನೋ ಕಥಾನಾಯಕ ಕಥಾನಾಯಕಿಗೆ ಬರೆದ ಕಾಗದ ಇದ್ದಹಾಗಿತ್ತು........"

ಎಂದು ಮೇಜಿನ ಕೆಳಗಡೆ, ಅಲ್ಲಿ, ಇಲ್ಲಿ ಎಲ್ಲಾಕಡೆ ಹುಡುಕತೊಡಗಿದಳು....ಕಥಾನಾಯಕ ಬರೆದ ಕಾಗದವೆಂದ ಕೂಡಲೆ, ಅವನು ನೋಡಿದ ಕಾಗದ ಅದೇ ಇರಬಹುದೆಂದು ಯೋಚಿಸಿ, ಜೇಬಿನಲ್ಲಿಟ್ಟಿದ್ದನ್ನು ಹೊರಗೆ ತೆಗೆದ! ಅಹುದು, ಅದೇ ಹನ್ನೆರಡನೆ ಪುಟ!!

ಗೌರಮ್ಮನ ಹೂವಿನಂಥ ಮನಸ್ಸಿಗೆ ನೋವು ಮಾಡಿದ್ದಕ್ಕೆ ಉಮಾಪತಿಗೆ ಬಹಳ ಕೆಡುಕೆನಿಸಿತು. ಕೋಣೆಗೆ ಹೋಗಿ ಮಂಚದ ಮೇಲೆ ಕುಳಿತು, "ಗೌರಾ" – ಎಂದ. ಗೌರಮ್ಮ ಮಾತನಾಡದೆ, ಸುಮ್ಮನೆ ಬಂದು ಬಾಗಿಲಲ್ಲಿ ನಿಂತಳು.... "ಒಳಗೆ ಬಾ, ಗೌರ" – ಎಂದ. ಆಕೆಗೆ ಎಲ್ಲವೂ

ಆಶ್ಚರ್ಯವಾಗಿ ಕಂಡಿತು. "ಕುಳಿತುಕೋ ಗೌರ" – ಎಂದು ಮಗ್ಗುಲಲ್ಲಿ ಕುಳ್ಳಿರಿಸಿಕೊಂಡ. ಗೌರಮ್ಮನಿಗೆ ಸಂತೋಷದ ಜೊತೆಗೆ ದುಃಖವೂ ಬಂತು. ಎಳೆಮಗುವಿನಂತೆ ಅವನ ಮುಖವನ್ನು ಉಳಿ ಉಳಿ ನೋಡತೊಡಗಿದಳು. "ಕ್ಷಮಿಸು ಗೌರ!" — ಎಂದು ಆಕೆಯನ್ನು ಉಮಾಪತಿ ಬಾಹುಬಂಧನದಲ್ಲಿ ಅಡಗಿಸಿಕೊಂಡ. ಕಂಠದವರೆಗೆ ಬಂದು ನಿಂತಿದ್ದ ಗೌರಮ್ಮನ ದುಃಖ ಒಮ್ಮೆಗೇ ಉಕ್ಕಿಬಂತು.

ದಿಗಂತದಾಚೆ ಗಂಗಾಧರ

"ಅಹುದು, ನಾನು ಹೋದರೆ ನಿನ್ನ ಗತಿ?"

"ಪರವಾಯಿಲ್ಲ ಹೋಗಿಬಾರಪ್ಪಾ; ದೇವರಿದ್ದಾನೆ!"

"ನೀನು ಹೀಗೇ ಮಲಗಿಕೊಂಡಿದ್ದರೆ ಗಂಜಿ ಮಾಡಿಕೊಡುವವರಾರು?"

"ನಾನೇ ಮಾಡಿಕೊಳ್ಳುತ್ತೇನೆ; ಇಲ್ಲದಿದ್ದರೆ ಪಕ್ಕದ ಮನೆಯ ಚಿಕ್ಕತಾಯಿಯ ಸಂಗಡ ಮಾಡಿಸಿಕೊಂಡರಾಯಿತು"

"ಅಹುದು, ಬೇರೆಯವರು ಎಷ್ಟು ದಿನಾಂತ ಮಾಡಿಕೊಡುತ್ತಾರಪ್ಪಾ?"

"ಅದೆಲ್ಲ ನಿನಗೇಕೆ ಚಿಂತೆ ಮಗು? ನಿನ್ನ ಅಭ್ಯಾಸದ ಗಮನ ಮಾತ್ರ ನಿನಗಿರಲಿ. ನಾನು ಹೇಗೂ ಜೀವಿಸುತ್ತೇನೆ. ನಿನ್ನ ಓದು ಮುಗಿದರೆ ನನಗಷ್ಟೇ ಸಾಕು."

"ಹೀಗೆ ಹಾಸಿಗೆ ಹಿಡಿದಿರುವ ನಿನ್ನನ್ನು ಎಂಭತ್ತು ಮೈಲಿ ದೂರದಲ್ಲಿ ಬಿಟ್ಟುಹೋಗಿ ನಾನು, ಅಲ್ಲಿ, ಸಮಾಧಾನವಾಗಿ ಓದುವುದಾದರೂ ಹೇಗೆ?"

"ನಿನಗೆಲ್ಲೋ ಹುಚ್ಚು; ಸುಮ್ಮನೆ ಹೋಗಿಬಾರಪ್ಪಾ ಅಂದರೆ, ದೊಡ್ಡ ಯಜಮಾನನ ಹಾಗೆ ಮಾತನಾಡುತ್ತಾನೆ. ನನ್ನ ಚಿಂತೆ ನಿನಗೇಕೆ ಮಗು; ನೀನು ಓದಿ ದೊಡ್ಡವನಾಗಪ್ಪಾ ಸಾಕು."

"ನೀನು ಹೀಗೆ ಹಾಸಿಗೆ ಹಿಡಿದರೆ ನನಗೆ ದುಡ್ಡು ಕಳುಹಿಸುವವರಾರು?"

"ದೇವರಿದ್ದಾನೆ ಹೋಗಪ್ಪ, ನೋಡೋಣ. ಈಗ ನಿನ್ನಲ್ಲಿ ಎಷ್ಟಿದೆ?"

"ನನ್ನ ಹತ್ತಿರ ಈಗ ಮೂವತ್ತೆರಡು ರೂಪಾಯಿಗಳಿವೆ."

"ಫೀಜಿಗೆ ಎಷ್ಟು ಬೇಕು?"

"ಮೂವತ್ತಾರು ರೂಪಾಯಿ ಬೇಕಾಗುತ್ತೆ. ಹೋದ ಮೇಲೆ ಪಬ್ಲಿಕ್ ಪರೀಕ್ಷೆಯ ಫೀಸ್ ಬೇರೆ ಕಟ್ಟಬೇಕಾಗುತ್ತದೆ."

"ಸರಿ, ಅದನ್ನು ನೋಡಿಕೊಳ್ಳೋಣ, ನೀನು ಹೋದ ನಾಲ್ಕಾರು ದಿನಗಳಲ್ಲಿ ಕಳಿಸುತ್ತೇನೆ ಈಗ ಮೂವತ್ತಾರು ರೂಪಾಯಿ ಫೀಸು; ಹೋಗುವ ಚಾರ್ಜು ಎರಡೂವರೆ; ಒಟ್ಟು ನಲವತ್ತು ರೂಪಾಯಿಗಳಾದರೂ ಬೇಕು. ಸರಿ, ಅಲ್ಲಿ ನನ್ನ ಅಂಗಿಯ ಜೇಬಿನಲ್ಲಿ ಸ್ವಲ್ಪ ದುಡ್ಡಿತ್ತು ನೋಡು ಇದೆಯೋ ಏನೋ;........ಎಷ್ಟಿದೆ?....ಎಷ್ಟು?....ಎರಡೆ?........ಅಲ್ಲಿ ನಿನ್ನ ತಾಯಿಯ ಫೋಟೋದ ಹಿಂದೆ ಒಂದು ಕಾಗದದಲ್ಲಿ ಇಟ್ಟಿದ್ದೆ ನೋಡು, ಇರಬಹುದು......ಸುಮ್ಮನೆ ನೋಡಪ್ಪಾ, ಫೋಟೋದ ಎದುರಿನಲ್ಲಿ ಕಣ್ಣೀರು ಕರೆದರೆ ಬರುತ್ತಾಳೆಯೆ ನಿನ್ನ ತಾಯಿ! ಈ ಹೊತ್ತಿಗಾಗಲೇ ಮಣ್ಣಾಗಿ ಹೋಗಿದ್ದಾಳೆ........ಈಗ ಕಣ್ಣೀರು ಹಾಕಬಾರದಪ್ಪಾ, ಊರಿಗೆ ಹೊರಡುವ ಸಮಯದಲ್ಲಿ........ಈಗ ಒಟ್ಟು ಎಷ್ಟಾಯಿತು? ಮೂವತ್ತೆಂಟೆ?........ ಹೂಂ........"

"ಸಾಕು ಬಿಡಪ್ಪ, ಅಲ್ಲಿ ಯಾರ ಸಂಗಡವಾದರೂ ಸಾಲದ್ದು ಕಮ್ಮಿಗೆ ಇಸಕೊಳ್ಳುತ್ತೇನೆ."

"ಅಷ್ಟು ಮಾಡು, ನಾನು ಬೇಗ ಕಳಿಸಿಕೊಡುತ್ತೇನೆ........"

ಎಂದು ಹೇಳಿ ಮನಸ್ಸಿನಲ್ಲಿಯೇ ಮರುಗತೊಡಗಿದರು.

'ಅಯ್ಯೋ ನನ್ನ ಮಗನಿಗೆ ಇಷ್ಟು ಕಷ್ಟ ಬಂತಲ್ಲ;........ನಾನು ಚೆನ್ನಾಗಿದ್ದಿದ್ದರೆ ಹೇಗೂ ಮಾಡುತ್ತಿದ್ದೆ;........ಸರಿಯಾಗಿ ಊಟಮಾಡದೆ ಹೊರಡುವಂತಾಯಿತೇ ನನ್ನ ಮಗನ ಬಾಳು—ಶಿವ ಶಿವಾ....ನನ್ನ ಮಗನ ಕೈಗೆ ತಿಂಡಿಗಾಗಿ ನಾಲ್ಕಾಣೆ ಕೊಡದಂತಾಯಿತೆ ನನ್ನ ಜೀವನ....ಅಯ್ಯೋ, ಅವನ ತಾಯಿ ಇದ್ದಿದ್ದರೆ! ದೇವರೆ, ಆ ಮಾತೇ ಬೇರೆ!'

"ಯಾಕಪ್ಪಾ ಅಳುತ್ತಿ? ನೀನೇ ಹೀಗೆ ಕಣ್ಣೀರು ಹಾಕಿದರೆ, ನಾನು ಹೇಗಪ್ಪಾ ಹೋಗೋದು?"

"ಇರಲಿ ಬಿಡು ಮಗು, ನೀನು ಹೋಗಿಬಾರಪ್ಪ, ದೇವರಿದ್ದಾನೆ."

ಮೂರು ತಿಂಗಳಿಂದ ಕಾಯಿಲೆಬಿದ್ದಿದ್ದ ಹಿರಿಯಣ್ಣನವರು ತುಂಬಾ ಬಳಲಿದ್ದರು. ಮಗನನ್ನು ಕಳುಹಿಸಿಕೊಡಲು ಹೊರ ಅಂಗಣಕ್ಕೆ ಬರುವುದ ರೊಳಗೆ ಸೋತುಹೋದರು. ಮಗ ತಂದೆಯ ಎರಡೂ ಪಾದಗಳಿಗೆ ಹಣೆ ಯನ್ನು ಹಚ್ಚಿ ಸಾಷ್ಟಾಂಗವೆರಗಿದ. ಕಣ್ಣೀರು ತಂದೆಯ ಪಾದಗಳೆರಡರ

ಮೇಲೂ ಹನಿಯಿತು. ಮಗನ ತಲೆಯ ಮೇಲೆ ಕೈಗಳನ್ನಿಡಲು ಬಗ್ಗಿದ ಹಿರಿಯಣ್ಣನವರ ಕಣ್ಣುಗಳಿಂದ ದಳದಳನೆ ನೀರು ಸುರಿಯಿತು!

ಗಂಗಾಧರ ತಂದೆಯ ಆಶೀರ್ವಾದ ಪಡೆದು ಮನೆಯಿಂದ ಹೊರಟು ಬಂದ. ಹಿರಿಯಣ್ಣನವರು ಒಳಗೆ ಹೋಗಿ, ಉಸ್ಸೆಂದು ಮತ್ತೆ ಹಾಸಿಗೆಯ ಮೇಲೆ ಅಂಗಾತ ಮಲಗಿಕೊಂಡರು.

ಬೆಳಗ್ಗೆ ಒಂಭತ್ತು ಗಂಟೆಗೆ ಬಸ್ಸಿನಲ್ಲಿ ಹೊರಟ ಗಂಗಾಧರ ಮಧ್ಯಾಹ್ನ ಎರಡು ಗಂಟೆಗೆ ಶ್ರೀನಗರವನ್ನು ಸೇರಿದ. ಬಸ್ಸು ಇಳಿದ ಕೂಡಲೆ, ತಾನು ಊಟಮಾಡುತ್ತಿದ್ದ "ವಿದ್ಯಾರ್ಥಿ ಮಂದಿರ"ಕ್ಕೆ ಬಂದ. ಬಾಗಿಲಿನಲ್ಲಿ ಮಂದಿರದ ವ್ಯವಸ್ಥಾಪಕರು ನಿಂತಿದ್ದರು. ಬಂದವನೇ 'ನಮಸ್ಕಾರ ಸಾರ್' ಎಂದ.

"ನಮಸ್ಕಾರ ಇರಲಿ, ಎಷ್ಟು ದಿನಗಳಯ್ಯಾ ಊರಲ್ಲಿ ಇರೋದು?" ರಜ ಮುಗಿದರೂ ಊರಲ್ಲಿ ಜಲಸ ಹೊಡೆಯುತ್ತಾ ಕುಳಿತಿರೋದೋ? ಪುಗಸಾಟೆ ಪ್ರಸಾದ........"

"ಇಲ್ಲ ಸಾರ್, ನನ್ನ ತಂದೆಗೆ ವಿಪರೀತ ಕಾಯಿಲೆ; ಮನೆಯಲ್ಲಿ ಯಾರೂ ಇಲ್ಲ. ಅದಕ್ಕಾಗಿ ಇಷ್ಟು ದಿನಗಳಾಯ್ತು."

"ನೀನು ನಿಮ್ಮಪ್ಪನಿಗೆ ವೈದ್ಯನಾಗಿದ್ದೆಯೇನೋ — ಪಾಪ."

"......................"

"ಹೋಗು, ಹೋಗು, ಲೈಟ್ ಫೀಸನ್ನೂ ಎಂಟಾಣೆ ರಿ-ಅಡ್ಮಿಷನ್ ಫೀಸನ್ನೂ ಕೊಟ್ಟು ನಿನ್ನ ಹೆಸರನ್ನು ಸೇರಿಸು."

"ಆಗಲಿ ಸಾರ್........"

ಗಂಗಾಧರನಿಗೆ ಹುಣ್ಣಿನ ಮೇಲೆ ಉಪ್ಪುನೀರೆರೆದಂತಾಯಿತು! ಹೇಗೂ ತನ್ನ ಕೋಣೆಯನ್ನು ಸೇರಿಕೊಂಡ. ಗೆಳೆಯರೆಲ್ಲಾ ಆಟದ ಮೈದಾನದಲ್ಲಿ ಆಡುತ್ತಿದ್ದರು. ಅವನ ಗಂಟಲು ಬಿಗಿದುಬಂತು; .... ಹಾಸ್ಟಲಿನ 'ಹಿರಿಮಣಿ' (ಮಾನಿಟರ್) ಬಳಿಗೆ ಹೋಗಿ ಹೆಸರು ಸೇರಿಸಿ ಬಂದ.

ಮರುದಿನ ಬೆಳಗ್ಗೆ ಎದ್ದಕೂಡಲೇ ಫೀಸಿನ ಯೋಚನೆಯಲ್ಲದೆ ಬೇರೆ ಯೋಚನೆಯೇ ಇಲ್ಲ. ಆ ದಿನ ಕಾಲೇಜು ಫೀಸನ್ನು ಕಟ್ಟದಿದ್ದರೆ ಮತ್ತೆ

ಒಂದು ರೂಪಾಯಿ ಅಡ್ಮಿಷನ್ ಫೀಸ್ ಕಟ್ಟಬೇಕಾಗಿತ್ತು. ತನ್ನ ಗೆಳೆಯರನ್ನೆಲ್ಲಾ, ಕೇಳಿ ನಾಲ್ಕಾಣೆ, ಎಂಟಾಣೆ ಇಸಕೊಂಡು, ಹಾಗೂ ಹೀಗೂ ಫೀಸಿಗೆ ಸರಿಮಾಡಿದ. ಅಂದು ಫೀಸನ್ನು ಕಟ್ಟಿ, ಕಾಲೇಜಿಗೆ ಹೋಗ ತೊಡಗಿದ.

ಎಂಟು ದಿನಗಳಾದ ಮೇಲೆ ಅರ್ಧವರ್ಷ ಪರೀಕ್ಷೆಯ ಉತ್ತರ ಪತ್ರಗಳನ್ನು ಉಪಾಧ್ಯಾಯರು ಕೊಟ್ಟರು. ಗಂಗಾಧರನಿಗೆ ಅಂಕಗಳು ತೀರಾ ಕಡಮೆ ಬಂದಿವೆ! ಅವನು ಬುದ್ಧಿವಂತಿಕೆಯಲ್ಲಿ ಯಾರೊಬ್ಬರಿಗೂ ಕಡಮೆ ಯಲ್ಲ! ಅಂಕಗಳು ಕಡಿಮೆ ಬರಲಿಕ್ಕೆ ಕಾರಣವೂ ಇತ್ತು. ಪರೀಕ್ಷೆಯ ಸಮಯದಲ್ಲಿ ಅವನ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ತನ್ನ ತಂದೆಯ ಕಾಯಿಲೆಯ ಸುದ್ದಿಯನ್ನು ಕೇಳಿ, ಬಳಲಿ, ಆದಕ್ಕಾಗಿ ಪರೀಕ್ಷೆಯಲ್ಲಿ ಉತ್ತಮ ವಾಗಿ ಬರೆದಿರಲಿಲ್ಲ. ಗಂಗಾಧರನ ಹಾಸ್ಟಲಿನಲ್ಲಿ, ಪರೀಕ್ಷೆಯಲ್ಲಿ ಕಡಮೆ ಅಂಕಗಳು ಬಂದವರಿಗೆ ಊಟವನ್ನು ತೆಗೆಯುವ ಪರಿಪಾಟವಿತ್ತು. ಈ ಭಯ ಗಂಗಾಧರನ ತಲೆಯನ್ನು ಮೇಯತೊಡಗಿತು. ಬಲಿ ಇಲ್ಲದ ಕಾಲದಲ್ಲಿ ಬದನೆಕಾಯಿ ದೆವ್ವ ಆಗುತ್ತದೆ! ಮುಟ್ಟಿದ ಕಡೆ ನೆಲ ಮುನಿದೆದ್ದು ಬರುತ್ತದೆ! ಮಮತೆಯಿಂದ ಮಾತನಾಡಿದರೆ ಮೂಗು ಮುರಿಯುವವರೂ ಉಂಟು!! ಹಾಲು ವಿಷವೂ ಆಗಬಹುದು!!

ಗಂಗಾಧರನಿಗೆ, ದಿನಬೆಳಗಾದರೆ ಇದೇ ಯೋಚನೆ. ಹಾಸ್ಟಲ್ ಅಧಿ ಕಾರಿಗಳು ತನ್ನ ಮೇಲೆ ಕರುಣೆ ತೋರಿಸಿದರೆ ದೇವರಿಗೆ ಸಾವಿರ ಸಲ ನಮಸ್ಕರಿಸುತ್ತೇನೆಂದು ಮನಸ್ಸಿನಲ್ಲಿಯೇ ಹೊಯ್ದಾಡತೊಡಗಿದ. ಅವನ ಮನಸ್ಸಿನಲ್ಲಿ ಬಹು ಭಾಗವನ್ನು ಈ ಯೋಚನೆಯೇ ತುಂಬಿಕೊಂಡಿತ್ತು......

'ಬರಗಾಲದಲ್ಲಿ ಅಧಿಕಮಾಸ' ಎನ್ನುವ ಹಾಗೆ ಕಾಲೇಜಿನಲ್ಲಿ ಇನ್ನೊಂದು ಪ್ರಸಂಗ ನಡೆಯಿತು. ಒಬ್ಬ ಉಪಾಧ್ಯಾಯರು ಒಬ್ಬ ವಿದ್ಯಾರ್ಥಿಯನ್ನು, ಪ್ರಬಂಧ ಬರೆದುಕೊಂಡು ಬಾರದ್ದಕ್ಕೆ ಕೊಂಚ ಸಡಿಲ ವಾಗಿ ಬೈದರಂತೆ! ಅದಕ್ಕಾಗಿ ವಿದ್ಯಾರ್ಥಿಗಳೆಲ್ಲಾ ಮುಷ್ಕರ ಹೂಡ ಬೇಕೆಂದು ನಿರ್ಧರಿಸಿದರು. ಗಂಗಾಧರ ಇಂಥ ಕ್ಷುಲ್ಲಕ ವಿಚಾರಗಳಿಗೆ ಮನ ಗೊಡುವವನಲ್ಲ. ಅವನು ಸತ್ಯಾರ್ಥಿ; ಅಹುದಾದುದಕ್ಕೆ ತಲೆ ಬಾಗುವವನು. ತನ್ನ ತಪ್ಪುಗಳನ್ನು ಸುಲಭವಾಗಿ ತಿದ್ದಿಕೊಳ್ಳುವನು. ಆದುದರಿಂದ ತನ್ನ

ಸಹಪಾಠಿಗಳ ನಿರ್ಧಾರ ಅವನಿಗೆ ಎಳ್ಳಷ್ಟೂ ಹಿಡಿಸಲಿಲ್ಲ. ತಾನು ಕಾಲೇಜಿಗೆ ಹೋಗುವುದಾಗಿ ಹಟ ಹಿಡಿದ. ಅವನು ನಾಲ್ವರಂತೆ ಏಕೆ ವರ್ತಿಸಬಾರದಾಗಿತ್ತು? ಇಲ್ಲ, ಅದು ಸಾಧ್ಯವಿಲ್ಲ! ಅವನ ಮನಸ್ಸು ಮಂಗಳಮಯವಾಗಿತ್ತು. ಬಂದ ಕಷ್ಟಗಳನ್ನು ಶಾಂತಿಯಿಂದ ಸಹಿಸುವ ಸ್ಥೈರ್ಯವಿತ್ತು. ಮಾನವನ ಬಾಳು ಕ್ಷಣಿಕ; ಆದುದರಿಂದ ಬಾಳು ಭವ್ಯವಾಗಬೇಕೆಂದು ಅವನ ಹೃದಯದ ಮಿಡಿತ!! ತನ್ನ ಪ್ರಾಣಹೋದರೂ ತನ್ನ ಮನಸ್ಸಿಗೆ ವಿರುದ್ಧವಾಗಿಯೂ ತತ್ವ ಬಾಹಿರನಾಗಿಯೂ ವರ್ತಿಸಲಾಗುವುದಿಲ್ಲವೆಂದು ಧೈರ್ಯವಾಗಿ ಹೇಳಿದ.

ಮುಷ್ಕರದ ಮುಂದಾಳು ಗಂಗಾಧರನ ಕೋಣೆಗೆ ಬಂದು,

"ರೀ, ಮಿಸ್ಟರ್ ಗಂಗಾಧರ್, ಸುಮ್ಮನೆ ನಮ್ಮ ಮಾತನ್ನು ಕೇಳಿ" ಎಂದ.

"ಅದಕ್ಕೆ ನಾನು ಒಪ್ಪುವುದಿಲ್ಲ ಗೌಡ್; ಉಪಾಧ್ಯಾಯರ ಕಡೆ ತಪ್ಪೇನಿದೆ ಹೇಳಿ? ಶ್ರೀಧರನ ಹಿತಕ್ಕಾಗಿ ಬೈದರೇ ವಿನಹ, ತಮ್ಮ ಹಿತಕ್ಕಾಗಿಯೇನಾದರೂ ಬೈದರೇನು? ಉಪಾಧ್ಯಾಯರು ಅಷ್ಟುಮಾತ್ರ ಬೈಯ್ಯದೆ ಪಾಠ ಹೇಳುವುದಾದರೂ ಹೇಗೆ? ನಮಗಿನ್ನೂ ಬಿಸಿಯರಕ್ತ; ವಿವೇಚನಾಶಕ್ತಿಯಿಲ್ಲ. ಅದಕ್ಕೇ ಹೀಗೆ ಮಾಡುತ್ತೇವೆ. ಉಪಾಧ್ಯಾಯರು ಅಷ್ಟೆಲ್ಲಾ ತಲೆಯನ್ನು ಚಚ್ಚಿಕೊಳ್ಳುವುದು ನಮ್ಮ ಹಿತಕ್ಕಾಗಿ ಎಂಬುದನ್ನು ನಾವು ನೆನಪಿನಲ್ಲಿಡಬೇಕು..........."

"ರೀ, ಗಂಗಾಧರ್, ನಾವು ನಿಮ್ಮ ಉಪದೇಶ ಕೇಳಲಿಕ್ಕೆ ಬಂದಿಲ್ಲ. ನಮ್ಮಂತೆ ನೀವೇನು ಒಪ್ಪಿಕೊಳ್ಳುತ್ತೀರೋ, ನಮ್ಮ ಕೈಲಾದುದನ್ನು ಮಾಡೋಣವೋ?"

ಎಂದು ಶಂಕರಗೌಡ ಬೆದರಿಕೆ ಹಾಕುವಾಗ, ಉಪಾಧ್ಯಾಯರಿಂದ ಹೂಗಳನ್ನು ಏರಿಸಿಕೊಂಡ ಶ್ರೀಧರಮೂರ್ತಿ ಬಂದು,

"ರೀ, ಶಂಕರಗೌಡ್, ಅವನಿಗೇಕೆ ಬನ್ರಿ ಪಂಚೇರು ಬೆಣ್ಣೆ! ನಮ್ಮ ಕೈಲಾದುದನ್ನು ನಾವು ಮಾಡೋಣ. ಓಹೋ, ಇವನೇ ಮಹಾ ಹರಿಶ್ಚಂದ್ರ! ಗಾಂಧಿಯ ಮೊಮ್ಮಗ! ಮನಸ್ಸಿಗೆ ವಿರುದ್ಧವಾಗಿ ನಡೆಯುವುದಿಲ್ಲವಂತೆ— ಪಾಪ!"

ಅಷ್ಟರಲ್ಲಿ ಗಂಗಾಧರ ಬಾಯಿಹಾಕಿ,

"ರೀ, ಸ್ವಾಮಿ, ನಿಮ್ಮ ಸಂಗಡ ವಾದಮಾಡಲು ನನಗಿಷ್ಟವಿಲ್ಲ. ನಿಮಗೆ ತಿಳಿದ ಹಾಗೆ ನೀವು ಮಾಡಿಕೊಳ್ಳಿ. ನಾನು ಮಾತ್ರ ಇಂಥ ಅಲ್ಪ ವಿಷಯ ಗಳಿಗೆ ಕಾಲೇಜಿಗೆ ಹೋಗುವುದನ್ನು ಬಿಡಲಾರೆ."

"ನಿನಗೊಬ್ಬನಿಗೇ ಪಾಠ ಹೇಳುತ್ತಾರೇನಯ್ಯಾ?"

ಎಂದ ಶಂಕರಗೌಡ.

"ಪಾಠದ ಪ್ರಶ್ನೆ ಬೇರೆ. The very principle I hate! ಇಂಥ ಕ್ಷುಲ್ಲಕ ವಿಷಯಗಳಿಗೆಲ್ಲ ಮುಷ್ಕರ ಹೂಡಲೆಳಸುವ ನಾವು ಒಳ್ಳೆ ರಾಷ್ಟ್ರೋದ್ಧಾರಕರಾಗುತ್ತೇವೆ.... .."

ಎಂದು ಹೇಳುತ್ತಿದ್ದ ಹಾಗೆ,

"ನಿನ್ನ ತಲೆ, ನಿನ್ನಂಥ ಮಿತ್ರದ್ರೋಹಿ ಇದ್ದರೇನು, ಹಾಳಾಗಿ ಹೋದರೇನು..........."

ಎಂದುಕೊಳ್ಳುತ್ತ ಎಲ್ಲರೂ ಹೋಗಿ ಒಂದು ಕಡೆ ಗುಂಪು ಸೇರಿ, ಏನೇನೋ ಗುಸುಗುಸು ಮಾತನಾಡಿ, ಹೊರಟುಹೋದರು. ಸರಿ, ಕಾಲೇಜು ಪ್ರಾರಂಭವಾಗುವ ವೇಳೆಗೆ ಸರಿಯಾಗಿ ಕೆಲವರು ಕಾಲೇಜಿಗೆ ಹೋಗುವವರನ್ನು ತಡೆಯತೊಡಗಿದರು. ಇವರನ್ನು ಪ್ರತಿಭಟಿಸಿ ಹೋದ ವರ ಪೈಕಿ ಗಂಗಾಧರನೂ ಒಬ್ಬ. ಹಾಸ್ಟಲಿನ ನಲವತ್ತೈದು ವಿದ್ಯಾರ್ಥಿಗಳ ಪೈಕಿ ಹೀಗೆ ಮಾಡಿದವನು ಇವನೊಬ್ಬನೇ!

ಮುಷ್ಕರದ ಮಾತು ಅಂದಿಗೇ ಮುಗಿಯಿತು. ಮರುದಿನ ಎಂದಿನಂತೆ ಎಲ್ಲರೂ ಕಾಲೇಜಿಗೆ ಹೋದರು. ಅಂತೂ ಈ ಪ್ರಕರಣದಿಂದ ಗಂಗಾಧರ ಅನೇಕರ ಮುಖ ಕಟ್ಟಿಕೊಳ್ಳಬೇಕಾಯಿತು.

ತಂದೆ ಕಡೆಯಿಂದ ಒಂದು ಕಾಗದವೂ ಬರಲಿಲ್ಲ. ಗಂಗಾಧರನ ಮನಸ್ಸಿನ ವ್ಯಾಪಾರವೆಲ್ಲಾ ತಂದೆಯ ಕಡೆಗೇ ಇದೆ. 'ತಂದೆ ಸುಖವಾಗಿದ್ದರೆ ಪತ್ರ ಬರೆಯಬೇಕಾಗಿತ್ತು; ಅಥವಾ ಬರೆಸಬೇಕಾಗಿತ್ತು. ಏಕೆ ಬರೆದಿರ ಲಿಕ್ಕಿಲ್ಲ. ಏನಾದರೂ ಅಪಾಯ ಸಂಭವಿಸಿರಬಹುದೆ'....,.......ಗಂಗಾಧರನ ತಲೆಯಲ್ಲಿ ಇಲ್ಲದ ಯೋಚನೆಗಳು ಬರತೊಡಗಿದವು. ಈ ವಿಷಯವನ್ನೇ ಮತ್ತೆ ಮತ್ತೆ ಮೆಲುಕುಹಾಕತೊಡಗಿದ!

ಗಂಗಾಧರ ಫೀಸಿಗಾಗಿ ಕೆಲವರ ಸಂಗಡ ಸಾಲಮಾಡಿದ್ದನಷ್ಟೆ! ಈಗ ಅವನನ್ನು ಎಲ್ಲರೂ ತಕ್ಷಣ ಕೊಡಬೇಕೆಂದು ಕೇಳುವವರೇ! ಇವನಿಗೆ ಹೇಗಾದರೂ ಮಾಡಿ ಕಿರುಕುಳ ಕೊಡಬೇಕೆಂಬುದೇ ಎಲ್ಲರ ಮಹದಾಸೆ!! ಆಗ ಅವನು ಎಲ್ಲರಿಗೂ ಮಿತ್ರದ್ರೋಹಿ!!

ಕಾಲೇಜಿನ ಅಭ್ಯಾಸಕ್ಕೆ ಬಡವರು ಖಂಡಿತವಾಗಿಯೂ ಬರಬಾರದೆಂದು ಗಂಗಾಧರ ಅಂದು ಅರ್ಥಮಾಡಿಕೊಂಡ.

ಸಾಲ ತೀರಿಸದೆ ವಿಧಿ ಇಲ್ಲ! ಎಲ್ಲಿಂದ ತರುವುದು! ಏನು ಮಾಡುವುದು!!

ಶ್ರೀನಗರ ದೊಡ್ಡ ಪಟ್ಟಣ. ದೊಡ್ಡ ದೊಡ್ಡ ಅಂಗಡಿಗಳಿವೆ. ಕೆಲವು ಅಂಗಡಿಗಳಲ್ಲಿ ಭಿಕ್ಷೆ ಬೇಡುವುದೊಂದೇ ಮಾರ್ಗವೆಂದು ನಿರ್ಧರಿಸಿದ. ಹೀಗೆ ಯೋಚನೆ ಮಾಡಿದ ಕ್ಷಣದಲ್ಲಿ ಅವನ ಕಣ್ಣೀರು ಘಳಕ್ಕನೆ ಉದುರಿದವು. ತಂದೆಯನ್ನು ಮನಸ್ಸಿನಲ್ಲಿಯೇ ಮೂರ್ತೀಭವಿಸಿಕೊಂಡು ನಮಸ್ಕರಿಸಿದ. 'ತಂದೆಯೇ, ನಾನು ಈ ದಿನ ಭಿಕ್ಷೆಗೆ ಹೊರಟಿದ್ದೇನೆ! ಕ್ಷಮಿಸು. ದೇವರ ಇಚ್ಛೆಯಲ್ಲಿ ನಾನು ಭಿಕ್ಷೆ ಬೇಡಬೇಕೆಂದಿರುವಾಗ ಅದೂ ಆಗಲಿ; ಆದರೆ ತತ್ವಬಾಹಿರನಾಗದಂತೆ ಮಾತ್ರ ಕರುಣಿಸಲಿ!' ಎಂದು ಪ್ರಾರ್ಥಿಸಿ ಹೊರಟ.

ಅಂದು ಶನಿವಾರ. ಕಾಲೇಜಿಗೆ ರಜ. ಮೂರು ಗಂಟೆಗೆ ಸರಿಯಾಗಿ ಊರೊಳಗೆ ಹೋದ. ಅವನು ಹೋದ ಮೊದಲನೆ ಅಂಗಡಿ ಚಿನ್ನ ಬೆಳ್ಳಿ ವ್ಯಾಪಾರದ್ದು. ಆ ಅಂಗಡಿಯ ಯಜಮಾನರು ಲಕ್ಷಾಂತರ ರೂಪಾಯಿಗಳನ್ನು ದಾನಮಾಡಿ "ಧರ್ಮಪ್ರಕಾಶ" ಬಿರುದು ಪಡೆದವರು. ಗಂಗಾಧರ ಹೋದವನೆ,

"ನಮಸ್ಕಾರ ಸಾರ್" ಎಂದ.

"ಏನು?" ಎಂದರು ಯಜಮಾನರು.

"ಏನೂ ಇಲ್ಲ ಸಾರ್, ನಾನು ಇಂಟರ್ ಸೀನಿಯರ್ ಕ್ಲಾಸಿನಲ್ಲಿ ಓದುತ್ತಿದ್ದೇನೆ. ಫೀಸಿಗೆ ಸ್ವಲ್ಪ ತೊಂದರೆಯಾಗಿದೆ; ಅದಕ್ಕೆ ತಾವು........"

"ಗೊತ್ತಾಯ್ತು; ಗೊತ್ತಾಯ್ತು! ನಿಮಗೇನು ಬೇರೆ ಕೆಲಸವಿಲ್ಲಾಂತ ಕಾಣುತ್ತೆ. ಕೈಯಲ್ಲಿ ಕಾಸಿಲ್ಲದ ಮೇಲೆ ಏಕಯ್ಯ ಕಾಲೇಜಿಗೆ ಸೇರೋದು?

ರೆಟ್ಟೆ ಮುರಿದು ದುಡಿದು ತಿನ್ನಲಿಕ್ಕಾಗೋದಿಲ್ವೋ? ಶುದ್ಧ ಸೋಮಾರಿಗಳು! ಭಿಕ್ಷೆ ಬೇಡುವವರೆಲ್ಲಾ ಕಾಲೇಜು ಓದುವಂತಾದರಿನ್ನೇನು, ದೇಶ ಉದ್ಧಾರ ವಾದಂತೆಯೇ ಸರಿ! ನಮ್ಮಂಥವರೇ ನಮ್ಮ ಹುಡುಗರನ್ನು ಹೈಸ್ಕೂಲ್ ಪೂರ್ತಿ ಕೂಡ ಓದಿಸಿಲ್ಲ! ನಿಮಗೇಕಯ್ಯ, ಹಳ್ಳಿಗುಗ್ಗರಿಗೆ, ಕಾಲೇಜು ಓದು?..........."

"ಏನೋ ಸಾರ್, ಸೇರಿಕೊಂಡದ್ದಾಯ್ತು! ತಾವು ದಯಮಾಡಿ ಕೊಂಚ ಸಹಾಯ ಮಾಡಿದರೆ,........"

"ಒಳ್ಳೆ ಶನಿಕಾಟವಯ್ಯಾ ನಮಗೆ! ರೀ, ಗುಮಾಸ್ತರೆ, ನಾಲ್ಕಾಣೆ ಕೊಟ್ಟು, ಕಳಿಸಿರಿ ಹೋಗ್ಲಿ, ಹಾಳಾಗಿ."

ಗುಮಾಸ್ತರು ನಾಲ್ಕಾಣೆ ಕೊಟ್ಟು, ತಕ್ಷಣ ಲೆಕ್ಕ ಹಚ್ಚಿದರು. ಗಂಗಾಧರ ಎರಡು ಕೈಗಳನ್ನೂ ಜೋಡಿಸಿ,

"ಬರ್ತೇನೆ ಸಾರ್, ನಮಸ್ಕಾರ" ಎಂದ.

"..........................."

ಗಂಗಾಧರನಿಗೆ ತುಂಬಾ ಬೇಸರವಾಯಿತು. ಜೊತೆಗೆ ತಂದೆಯ ಕಡೆ ನೆನೆಸಿಕೊಂಡ. ಅವನ ಪತ್ರಕ್ಕೆ ಇನ್ನೂ ಉತ್ತರ ಬರಲಿಲ್ಲ. ಅವನ ತಂದೆ ಈ ರೀತಿ ಎಂದೂ ತಡಮಾಡಿರಲಿಲ್ಲ. ಏಕೆ ಬರೆದಿರಲಿಕ್ಕಿಲ್ಲ! ಕಾಯಿಲೆ ಜಾಸ್ತಿಯಾಗಿರಬಹುದೆ! ಯಾರ ಸಂಗಡಲಾದರೂ ಬರೆಸಬಹುದಾಗಿತ್ತಲ್ಲಾ ....ಎಂದು ಹೊಯ್ದಾಡತೊಡಗಿದ.

ಮತ್ತೆ ದುಡ್ಡಿನ ನೆನಪಾಯಿತು. ಅಯ್ಯೋ ಮೊದಲ ಮಹನೀಯರ ಸಹಾಯವೇ ಈ ರೀತಿಯಾದ ಮೇಲೆ, ಇನ್ನಾರನ್ನು ಕೇಳುವುದು! ಅಂತು ಧೈರ್ಯದಿಂದ, 'ಪಾಲಿಗೆ ಬಂದದ್ದು ಪಂಚಾಮೃತ' ಎಂದುಕೊಂಡು, ಕೆಲವು ಅಂಗಡಿಗಳಿಗೆ ಹೋಗಿ, ನಾಲ್ಕು ರೂಪಾಯಿ ಕೂಡಿಸಿದ.

ಆದರೂ ಅವನಿಗೆ ತಡೆಯಲಾರದ ದುಃಖ ಬಂತು. ಗಂಟಲು ಬಿಗಿದು ಬಂತು. ಹಾಸ್ಟಲಿನ ಕಡೆ ಹೊರಟ. ಕಣ್ಣೀರು ಅವನಿಗೆ ಪರಿವೆ ಇಲ್ಲದೆಯೆ ಹರಿಯತೊಡಗಿತು. ಅಷ್ಟರಲ್ಲಿ ಗಂಗಾಧರನ ಏಕಮಾತ್ರ ಗೆಳೆಯ ರಾಮು ಎದುರಿಗೆ ಬಂದ. ಹಾಸ್ಟಲಿನಲ್ಲಿ, ಮುಷ್ಕರದ ಪ್ರಕರಣ ನಡೆದ ಮೇಲೆ ರಾಮು ಒಬ್ಬನೇ ಇವನ ಸಂಗಡ ಸರಿಯಾಗಿ ಮಾತನಾಡುತ್ತಿದ್ದ. ಆದರೆ

'ಸಿರಿಗನ್ನಡ' ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಸಮಯ ಬಿದ್ದಾಗ ದುಡ್ಡು ಕೊಡುವಷ್ಟು ಯೋಗ್ಯತೆ ಅವನಿಗಿರಲಿಲ್ಲ. ಎದುರಿಗೆ ಬಂದ ಕೂಡಲೆ,

S 021884

"ಏನು ಗಂಗಾಧರ, ಏಕಯ್ಯ ಕಣ್ಣೀರು? ಊರಿಂದ ವರ್ತಮಾನ ವೇನಾದರೂ ಬಂತೇನಯ್ಯ? ಯಾಕಯ್ಯ ಅಳುತ್ತೀ, ಛೆ! ಹೇಳಯ್ಯಾ, ...ನಿನ್ನಂಥ ತಿಳಿದವನೇ ಹೀಗೆ ಕಣ್ಣೀರು ಹಾಕಿದರೆ ಹೇಗೆ ಗಂಗಾಧರ...."

"ನಿನಗೆ ತಿಳಿಯದೆ ಇಲ್ಲ ರಾಮು, ನನ್ನ ಸ್ಥಿತಿ! ಸುಮ್ಮನೆ ನನ್ನನ್ನೇಕೆ ಕಾಡುವೆ? ಊರಿಂದ ಕಾಗದವೂ ಬಂದಿಲ್ಲ; ಯಾವ ವರ್ತಮಾನವೂ ಇಲ್ಲ. ನನಗೆ, ಕಣ್ಣು ಕಟ್ಟಿ, ಅಡವಿಯಲ್ಲಿ ಬಿಟ್ಟ ಹಾಗಾಗಿದೆ........"

"ಇಲ್ಲಿ ಬಾ, ಆ ಕಲ್ಲುಮಂಚದ ಮೇಲೆ ಕೊಂಚ ಹೊತ್ತು ಕುಳಿತು ಕೊಳ್ಳೋಣ. ಹಾಸ್ಟಲ್ ಬೆಲ್ ಹೊಡೆಯಲಿಕ್ಕೆ ಇನ್ನೂ ವೇಳೆಯಿದೆ. ಅಲ್ಲಯ್ಯಾ, ನಮ್ಮಂತಹವರೆಲ್ಲಾ ಹೀಗೆ ಕಣ್ಣೀರು ಹಾಕುತ್ತ ಕುಳಿತರೆ ಯಾರು ಕೇಳುತ್ತಾರೆ! ನಾವು ಪಡೆದದ್ದು ನಮ್ಮ ಹೆಗಲಿನ ಬುತ್ತಿ! ದೇವರು, ನಮ್ಮ ಜೀವನದಲ್ಲಿ ಏನೇನು ಮಾಡಿಸಬೇಕೆಂದಿದ್ದಾನೋ, ಯಾವ ಯಾವುದಕ್ಕೆ ಗುರಿ ಮಾಡಬೇಕೆಂದಿದ್ದಾನೋ—ಅದೆಲ್ಲವನ್ನು ಅನುಭವಿಸೋಣ."

ರಸ್ತೆಯ ಪಕ್ಕದ ಕಲ್ಲುಬೆಂಚಿಯ ಮೇಲೆ ಕುಳಿತು ಮಾತನಾಡ ತೊಡಗಿದರು. ಈಗ ಗಂಗಾಧರನ ಪ್ರಪಂಚದಲ್ಲಿ ರಾಮು ಒಬ್ಬನೇ ಬಂಧು!

"ನಿಮ್ಮ ಮನೆಯಲ್ಲಿ ಇನ್ನು ಯಾರ್ಯಾರಿದ್ದಾರೆ?" ಎಂದು ಕೇಳಿದ ರಾಮು.

8K3 6
NAG

"ಯಾರೂ ಇಲ್ಲ ರಾಮು, ನಮ್ಮ ತಂದೆ ಒಬ್ಬರೇ ಇದ್ದಾರೆ. ನಮ್ಮ ತಾಯಿಯವರು ನಾನು ಎಂಟು ವರ್ಷದವನಿದ್ದಾಗಲೇ ತೀರಿಕೊಂಡರು. ನಮ್ಮ ತಂದೆಯವರು ಯಾರೋ ಬೇರೊಬ್ಬರಿಗೆ ಜಾಮೀನಾಗಿ ಇದ್ದಬದ್ದ ಸ್ವಲ್ಪ ಆಸ್ತಿಯನ್ನು ಕಳೆದುಬಿಟ್ಟರು! ಈಗ ಒಂದು ಹಳೆಯ ಚಿಕ್ಕ ಮನೆ ಇದೆ....ತಂದೆಯವರಿಗೆ ವಿಪರೀತ ಖಾಯಿಲೆ....ಗಂಜಿ ಮಾಡಿಕೊಡುವವರೂ ಇಲ್ಲ! ನಾನು, 'ಓದು ಸಾಕು; ಇಲ್ಲೇ ಹಳ್ಳೀ ಶಾಲೆಯಲ್ಲಿ ಉಪಾಧ್ಯಾಯ ನಾಗಿದ್ದುಬಿಡುತ್ತೇನೆ' ಎಂದರೆ, ನಮ್ಮ ತಂದೆ ಕೇಳಲಿಲ್ಲ. ನಾನು ಪದವೀಧರ ನಾಗಲೇಬೇಕಂತೆ. ಅದನ್ನು ನೋಡಿ ನಮ್ಮ ತಂದೆ ಸಂತೋಷಪಡುತ್ತಾರಂತೆ.

ಅವರ ಆಸೆಯಂತೆ ಬಂದೆ ರಾಮು. ಈಗ 'ತೋಳ ಹಳ್ಳಕ್ಕೆ ಬಿದ್ದರೆ, ಆಳಿಗೊಂದು ಕಲ್ಲು' ಎನ್ನುವಂತಾಗಿದೆ. ಯಾರನ್ನು ಮಾತನಾಡಿಸಿದರೂ ಮೈಮೇಲೆ ಬರುವಂತಾಗಿದೆ. ಕಣ್ಣಿಗೆ ಕರ್ರಗಾದ ಮೇಲೆ ಬಾಳಬಾರದು ರಾಮು!"

"ಇರಲಿ ಬಿಡು, ಬಂದ ಕತ್ತಲು ಹಾಗೆಯೇ ಇರುತ್ತದೆಯೇ? ಬೆಳಕು ಹರಿಯುವುದಿಲ್ಲವೇ? ಬೆಳಕು ಬರುವವರೆಗೆ ಕತ್ತಲನ್ನು ಸಹಿಸಿಕೊಳ್ಳಬೇಕು. ಗಂಗಾಧರ, ನಿನಗೆ ಹೇಳುವ ಯೋಗ್ಯತೆ ನನಗಿಲ್ಲ. ಅದಿರಲಿ, ಈ ಊರಲ್ಲಿ ಊಟದಮನೆಗಳು ಸಿಗುವುದಿಲ್ಲವೇನು?"

"ಅದೇಕೆ, ರಾಮು? ಇನ್ನು ನಾಲ್ಕು ತಿಂಗಳಿಗೇಕೆ ಆ ಯೋಚನೆ! ಹಾಸ್ಟಲಿನಲ್ಲಿಯೇ ಕಾಲಹಾಕಿದರಾಯಿತು!"

"ಏತಕ್ಕೂ ಇಲ್ಲ....ನಿನಗೆ ಮಾರ್ಕ್ಸ್ ಹೇಗೆ ಬಂದಿತ್ತು? ಬಹಳ ಕಡಿಮೆ ಬಂದಿದ್ದವೇನು.......?"

"ಏಕೆ ರಾಮು....ಹಾಸ್ಟಲ್ ಕಮಿಟಿಯಲ್ಲಿ ಏನಾದರೂ ತೀರ್ಮಾನವಾಯಿತೇನು? ಆಂ ...ಅದೇನು ಹೇಳು ರಾಮು!" ಗಂಗಾಧರ ಹೆದರಿಕೆಯ ದನಿಯಲ್ಲಿಯೇ ಕೇಳಿದ.

"ಏನೂ ಇಲ್ಲ.... ನಿನಗೂ ನನಗೂ ಊಟಕ್ಕೆ ತೆಗೆದಿದ್ದಾರೆ...."

"ಏನು, ತೆಗೆದಿದ್ದಾರೆಯೇ?",

"ಅದಕ್ಕೇಕಷ್ಟು ಹೆದರುತ್ತಿ ಗಂಗಾಧರ?"

"ಅಯ್ಯೋ ದೇವರೆ, ನಮಗಿನ್ನಾರಯ್ಯ ಅನ್ನ ಹಾಕುವವರು?"

"..............."

"ಹೀಗಾದರೆ ಹೇಗಯ್ಯ ನಮ್ಮ ಗತಿ!"

"ಗಂಗಾಧರ, ಅಲ್ಲಿ ನೋಡು, ಆ ಹಾರುವ ಹಕ್ಕಿಗಳ ಹೊಟ್ಟೆಯಲ್ಲಾದರೂ ಹುಟ್ಟಿದ್ದರೆ! ಅಥವಾ ಈ ನೆರಳನ್ನು ಕೊಡುವ ಮರವಾಗಿಯಾದರೂ ಹುಟ್ಟಿದ್ದರೆ!—"

"ನಮ್ಮ ತಂದೆಗೆ ತಿಳಿದರೆ ಮತ್ತಷ್ಟೂ ಕೊರಗುತ್ತಾರೆ ರಾಮು. ಏನು ಮಾಡಲಿ. ನಾನು ಊರಿಗೆ ಹೊರಟುಬಿಡುತ್ತೇನೆ ರಾಮು. ನಮ್ಮ ತಂದೆಯವರ ಸಂಗಡ ಇದ್ದರೆ ನನಗಷ್ಟೇ ಸಾಕು. ಅಲ್ಲಿಯೇ ಯಾವುದಾದರು

ಒಂದು ಹಳ್ಳಿಯಲ್ಲಿ ಉಪಾಧ್ಯಾಯನಾಗಿ ಸಮಾಜ ಸೇವೆ ಮಾಡಿದರೆ ಅಷ್ಟೇ ಸಾಕು; ನಾಳೆ ಹೊರಟುಬಿಡುತ್ತೇನೆ. ನಮ್ಮ ತಂದೆಯವರ ಬಳಿಗೆ ಹೋಗಿಬಿಡುತ್ತೇನೆ ರಾಮು.''

ಎಂದು ಹಂಬಲಿಸಿದ. ಅವರಿಬ್ಬರೂ ಮಾತನಾಡುತ್ತಿದ್ದ ಹಾಗೆ ಅಂಚೆಯವನು ಸೈಕಲ್ ಮೇಲೆ ಹಾಸ್ಟಲ್ ಮಾರ್ಗವಾಗಿ ಜೋರಾಗಿ ಬರುತ್ತಿದ್ದ. ಅವನನ್ನು ನೋಡಿ, ಗಂಗಾಧರ,

"ಏನಾದರೂ ಹಾಸ್ಟಲಿನ ಕಾಗದವಿದೆಯೇನ್ರಿ'' ಎಂದ.

"ಒಂದು ವಯರ್ ಇದೆ ಸ್ವಾಮಿ. ಗಂಗಾಧರ ಅನ್ನುವವರು ಯಾರು?'' ಎಂದ.

ಗಂಗಾಧರನಿಗೆ ಕೈ ನಡುಗತೊಡಗಿದವು! ಕವರನ್ನು ಒಡೆಯಲಿಕ್ಕೂ ತ್ರಾಣವಿಲ್ಲದಂತೆ ಕೈ ನಡುಗಲಾರಂಭಿಸಿದವು. ಒಡೆದು ನೋಡುತ್ತಿದ್ದ ಹಾಗೆ 'ಅಪ್ಪಾ' ಎಂದು ಕೂಗಿಕೊಂಡು ಓಡತೊಡಗಿದ....

"ನಾನೂ ಬಂದೆ, ಅಪ್ಪಾ, ನಾನೂ ಬಂದೆ,....ಅಪ್ಪಾ, ನಾನೂ ಬಂದೆ ....ನಿಲ್ಲು, ನಿಲ್ಲು, ನಾನೂ ಬಂದೆ....''

ಎಂದು ಹಂಬಲಿಸುತ್ತ ಯಾರಿಗೂ ಸಿಗದಂತೆ ಓಡತೊಡಗಿದ. ಅವರೂರ ಕಡೆ ಓಡುತ್ತಲಿದ್ದಾನೆ — ರಾಮು ಶಕ್ತಿಮೀರಿ ಓಡಿ ಹಿಡಿಯಬೇಕೆಂದರೂ ಸಿಗಲಿಲ್ಲ. 'ಗಂಗಾಧರಾ' ಎಂದು ಕೂಗಿದ ಕೂಗು ಅವನ ಕಿವಿಗೆ ಬೀಳದಷ್ಟು ದೂರ ಓಡಿದ....ರಾಮು ಶಕ್ತಿಗುಂದಿ ಕುಳಿತುಬಿಟ್ಟ!....ಗಂಗಾಧರ ಓಡುತ್ತಲೇ ಇದ್ದಾನೆ....ಅವನ ಕೈಯಿಂದ ಜಾರಿದ 'ವಯರ್' ಗಾಳಿಯಲ್ಲಿ ಹಾರಾಡುತ್ತಿತ್ತು.

ಗಂಗಾಧರ ಓಡುತ್ತಲೇ ಇದ್ದಾನೆ........ಕಣ್ಣಿಗೆ ಕಾಣದ ಹಾಗೆ ಓಡುತ್ತಲಿದ್ದಾನೆ!....ವಿಶಾಲ ಜಗತ್ತಿನಲ್ಲಿ ಓಡುತ್ತಲಿದ್ದಾನೆ!! ದಿಗಂತದ ಆಚೆ ಓಡುತ್ತಲಿದ್ದಾನೆ!!...............ಗಾಳಿಯಲ್ಲಿ ಗಾಳಿಯಾಗಿ ಓಡುತ್ತಲಿದ್ದಾನೆ!....ಬೆಳಕಿನಲ್ಲಿ ಬೆಳಕಾಗಿ ಓಡುತ್ತಲಿದ್ದಾನೆ...............!!!

ಮುದ್ದು ಹುಡುಗಿ ಸುಮ

"ಸುಮಾ, ಏ ಸುಮಾ, ಬಾ ಇಲ್ಲಿ."

"ಅಯ್ಯೋ, ತಡೀರೀಂದ್ರೆ! ಒಂದೇ ಅವಸರ ನಿಮ್ದು!"

"ಅರೆ! ಬಾರೇ ಇಲ್ಲಿ; ಗಂಡಾಂದ್ರೆ ಕೊಂಚವಾದ್ರು ಭಯ ಭೀತಿ........!"

"ಅಪ್ಪಯ್ಯಾ, ನಿಮ್ಮ ಮಾತೂಂದ್ರೆ, ಬೆಕ್ಕಿಗೆ ಜ್ವರ ಬರ್ಬೇಕ್ ನೋಡಿ!"

ಎಂದುಕೊಳ್ಳುತ್ತ ಸುಮ ಶಿವಕುಮಾರನ ಬಳಿಗೆ ಬಂದಳು.

ಶಿವಕುಮಾರ ಬಹಳ ಅಚ್ಚುಕಟ್ಟಾದ ಮನುಷ್ಯ. ಅವನಿಗಿದ್ದುದು ಒಂದು ಪುಟ್ಟ ಮೇಜು; ಅದರ ಮೇಲಿನ ಆಸ್ತಿಯೆಂದರೆ ಪುಸ್ತಕಗಳ ರಾಶಿ. ಕೋಣೆಯ ಮೂಲೆಗೆ ಆ ಮೇಜನ್ನು ಹೊಂದಿಸಿ, ಎರಡೂ ಮಗ್ಗುಲಿಗೆ ಎರಡು ಕುರ್ಚಿಗಳನ್ನು ಇಟ್ಟಿದ್ದ; ಒಂದು ಮರದ್ದು, ಇನ್ನೊಂದು ಬೆತ್ತದ ಸುಂದರವಾದ ಕುರ್ಚಿ. ಮನೆ ಚಿಕ್ಕದಾದರೂ ಚೊಕ್ಕಟವಾಗಿ ಅಚ್ಚು ಮೆಚ್ಚಾಗಿದೆ. ಗೋಡೆಗಳ ಮೇಲೆ ಅಂದವಾದ ವರ್ಣರಂಜಿತ ಚಿತ್ರಗಳನ್ನು ಹಾಕಿಕೊಂಡಿದ್ದಾನೆ. ಅವನ ಮನೆಗೆ ಯಾರು ಬಂದರೂ ಆನಂದಪಟ್ಟು ಕೊಂಡೇ ಹೋಗುತ್ತಿದ್ದರು. ಅವನ ಮನೆ ಮನ ಎರಡೂ ನಿರ್ಮಲ! ಶಿವಕುಮಾರ ಸಂಸಾರಿಯಾದ ವಿದ್ಯಾರ್ಥಿ! ಅಹುದು, ಅವನಿನ್ನೂ ಓದುತ್ತ ಲಿದ್ದಾನೆ!!

ಶಿವಕುಮಾರನಿಗೆ ಮನೋದಾರ್ಢ್ಯ ಹೆಚ್ಚು! ಅವನು ಅಳ್ಳೆದೆ ಯವನಲ್ಲ. ಬಂದುದನ್ನು ಶಾಂತಿಸಮಾಧಾನಗಳಿಂದ ಸಹಿಸಿಕೊಳ್ಳುವ ಸಾಹಸಿ. ಮಮತೆಯ ಮೂರ್ತಿಯೇ ಅವನಾಗಿದ್ದ!! ಬಿ. ಎ. ಓದುತ್ತಿದ್ದಾಗಲೇ ಸುಮಳ ಸಂಗಡ ಅವನ ಮದುವೆಯಾಯಿತು. ಸುಮ ಎಂದರೆ ಶಿವಕುಮಾರ; ಶಿವಕುಮಾರ ಎಂದರೆ ಸುಮ! ದೇಹಗಳೆರಡು; ಆತ್ಮ ಒಂದು! ಅವರಿಬ್ಬರು ಅಷ್ಟೊಂದು ಅಚ್ಚುಮೆಚ್ಚಿನ ಗಂಡ—ಹೆಂಡಿರು! ಬೇರೆಯವರು ಅವರ

ಬಾಳುವೆಯನ್ನು ನೋಡಿ ಕಲಿತುಕೊಳ್ಳಬೇಕು! ಅಷ್ಟೊಂದು ಅಚ್ಚುಕಟ್ಟಾದ ಜೀವನ! ಶಿವಕುಮಾರ ಒಂದು ತುತ್ತು ಕಡಿಮೆ ಊಟ ಮಾಡಿದರೆ ಸುಮಳ ಮುಖ ಸಣ್ಣದಾಗುತ್ತಿತ್ತು. ಇಂಥ ಆತ್ಮೀಯ ಗಂಡಹೆಂಡಿರನ್ನು ಜಗತ್ತು ಎಂದಾದರೂ ಕಂಡಿತ್ತೇ—ಎಂದು ಅನುಮಾನಪಡುವಷ್ಟು ಸುಂದರವಾದ ಜೀವನ ಅವರದು.

ಸುಮ ಬಹಳ ಮೆತ್ತನೆಯ ಮನಸ್ಸಿನವಳು. ಎರಡು ಮಾತೆಂದರೆ ತೀರಿತು, ಕಣ್ಣುತುಂಬ ನೀರು. ಶಿವಕುಮಾರನಿಗೆ ಆಕೆ ಒಂದು ಆಟದ ಬೊಂಬೆ. ಆಗಾಗ ಚೇಷ್ಟೆಮಾಡಿ ಅಳಿಸುತ್ತಿದ್ದನಾದರೂ, ಅವನು ಬಹಳ ಅರಿವಿನ ಜೀವಿ. ಸುಮಳ ಮನಸ್ಸಿಗೆ ಎಳ್ಳಷ್ಟೂ ತೊಂದರೆಯನ್ನುಂಟು ಮಾಡುತ್ತಿರಲಿಲ್ಲ. ಆಕೆಯ ಮೆತ್ತನೆಯ ಮನಸ್ಸು ಅವನಿಗೆ ಪೂರ್ಣ ಅರ್ಥ ವಾಗಿತ್ತು.

ಶಿವಕುಮಾರ 'ಲಾ' ಕಾಲೇಜಿನ ವಿದ್ಯಾರ್ಥಿ. ಸಾಹಿತ್ಯ ಅವನ ಜೀವನದಲ್ಲಿ ಅಂಟಿಕೊಂಡು ಬಂದ ಪವಿತ್ರ ವಸ್ತು. ಸರಸ್ವತಿಯು ಅವನ ತಲೆಯ ಮೇಲೆ, 'ಅಮರಜೀವಿಯಾಗು' ಎಂದು, ಅಮೃತಹಸ್ತವನ್ನಿರಿಸಿ ದ್ದಾಳೆ. ಅವನ ಸಾಹಿತ್ಯ ಕೃತಿಗಳೇ ಅವನನ್ನು ಬೆಳಕಿಗೆ ತಂದದ್ದು. ಜಗತ್ತಿನ ಜೀವನದ ವೇಗದಲ್ಲಿ ತನ್ನ ಹೃದಯ ತಂತಿಯನ್ನು ಮಿಡಿಯಬಲ್ಲ ಶಿವಕುಮಾರ ಸಜೀವ ಸಾಹಿತ್ಯವನ್ನು ಸೃಷ್ಟಿಸಬಲ್ಲ. ಸುಮ ಎಂದರೆ ಸಾಹಿತ್ಯದ ಮೂರ್ತಿ. ರಾಜಕೀಯವನ್ನು ಅರ್ಥಮಾಡಿಕೊಂಡ ಚತುರೆ. ನಾಡು ನುಡಿ ಎಂದರೇನೆಂಬುದನ್ನು ಪರಿಪಾಠ ಮಾಡಿಕೊಂಡ ಜಾಣೆ. ಸುಮ ಬರೆಯುವ ಕತೆ, ಲೇಖನಗಳು ಒಂದೊಂದು ವೇಳೆ ಶಿವಕುಮಾರನ ಕೃತಿಗಳನ್ನು ಮೀರಿಸುತ್ತವೆ. ಒಬ್ಬರ ಕೈಗಿಂತ ಇನ್ನೊಬ್ಬರ ಕೈ ಮೇಲು. ಸಾಹಿತ್ಯ ಲೋಕದ ಅನಂತ ಆಕಾಶದಲ್ಲಿ ಹಾರಾಡುವ ಅಚ್ಚುಮೆಚ್ಚಿನ ಹಕ್ಕಿಗಳವರು. ಆದಕ್ಕೆಂತಲೇ ಕೊಂಚ ಕಷ್ಟ ಮಿಶ್ರಿತ ಪುಟ್ಟ ಬಾಳುವೆಯಲ್ಲಿ ಸ್ವರ್ಗೀಯ ಸುಖವನ್ನು ಕಾಣುತ್ತಿದ್ದಾರೆ.

ಶಿವಕುಮಾರ ಏನಾದರೂ ಬರೆಯಲು ಕುಳಿತರೆ, ಸುಮಳ ಸಂಗಡ ಸೊಗಸಾದ ಹರಟೆ ಹೊಡೆದ ಮೇಲೆಯೇ ಷುರುವು ಮಾಡುತ್ತಿದ್ದ. ಅವ ರಿಬ್ಬರ ಮಮತೆಯ ಮಾತುಗಳಲ್ಲಿ ಮಂಜುಳ ನಿನಾದವಿತ್ತು. ಅವರ

ಜೀವನವೇ ಸಾಹಿತ್ಯಮಯವಾಗಿದ್ದಾಗ ಅವರ ಕೃತಿಗಳ ಮಟ್ಟವನ್ನು ಅಳೆಯಬೇಕಾಗಿಲ್ಲ. ಒಂದು ಸಲ ಸುಮಳ ಉಂಗುರುಗುರುಳನ್ನು ಮೆಲ್ಲಗೆ ತೀಡಿ, ಹೂಗೆನ್ನೆಯ ಮೇಲೆ ಮೃದುವಾಗಿ ತಟ್ಟಿ, ಆಕೆಗೆ ಏನಾದರೂ ಚೇಷ್ಟೆ ಮಾಡಿದರೇನೇ ಅವನಿಗೆ ತೃಪ್ತಿ; ಸ್ಫೂರ್ತಿ. ಆದಕ್ಕಾಗಿಯೇ ಈಗ ಅವನು ಸುಮಳನ್ನು ಕರೆದದ್ದು.

ಚಿತ್ರದ ಕುರ್ಚಿಯಲ್ಲಿ ಸುಮ ಕುಳಿತರೆ ಆ ಕುರ್ಚಿಗೆ ಒಂದು ಬಗೆಯ ಸೌಂದರ್ಯ. ಸುಮ ಅವನನ್ನು ಸಮೀಪಿಸುವ ವೇಳೆಗೆ ಕುರ್ಚಿಯನ್ನು ಫಕ್ಕನೆ ಅವನ ಬಳಿಗೆ ಎಳೆದುಕೊಂಡ.

"ಈಗ ನಿಮ್ಮ ಸಂಗಡ ಆಟವಾಡಲು ನನಗೆ ವೇಳೆಯಿಲ್ಲ ಮಾರಾಯ್ರೆ! ಸಾರು ಒಲೆಯ ಮೇಲೆ ಕುದೀತಾ ಇದೆ; ಅದೇನು ಹೇಳಿ ಬೇಗ...."

"......................"

"ಅಯ್ಯೋ, ಮಾತಾಡೀಂದ್ರೆ......ಅವ್ವಯ್ಯಾ, ಇದೆಂಥ ಮುನಿಸು...."

ಶಿವಕುಮಾರ ತಲೆ ಎತ್ತಿ ಕೂಡ ನೋಡಲಿಲ್ಲ.

"ಅವ್ವಯ್ಯಾ, ಇದಾವ ಸೀಮೆ ಸತ್ಯಾಗ್ರಹ ಮಾರಾಯ್ರೆ!!"

ಎಂದುಕೊಳ್ಳುತ್ತ ಬಂದು ಕುಳಿತುಕೊಳ್ಳಬೇಕೆನ್ನುವ ವೇಳೆಗೆ ಸಾರು ಉಕ್ಕಿಬಿಟ್ಟಿತು. "ಅಯ್ಯೋ, ನನ್ನ ಸಾರೇ" ಎಂದುಕೊಂಡು ಸುಮ ಅಡುಗೆ ಕೋಣೆಗೆ ಓಡಿಹೋದಳು. ಶಿವಕುಮಾರ 'ಗಹಗಹಿಸಿ' ನಕ್ಕುಬಿಟ್ಟ. ಸುಮ ಒಳಗಿನಿಂದಲೇ "ಸಾಕು ಬಿಡಿ ಮಾರಾಯ್ರೆ! ಬೆಕ್ಕಿಗೆ ಚೆನ್ನಾಟ ಇಲಿಗೆ ಪ್ರಾಣಸಂಕಟ" ಎಂದು, ಮುಚ್ಚಳ ತೆಗೆಯಲು ಹೋಗಿ ಸುಟ್ಟು ಕೊಂಡ ಕೈ ಕೊಡಹುತ್ತ ಮೂಗುಮುರಿದಳು. ಆದರೂ ಆಕೆಗೆ ಸಿಟ್ಟೆಂಬುದೇ ಇಲ್ಲ! ಕೈ ಸುಟ್ಟುಕೊಂಡುದನ್ನು ನೋಡಿ, ಶಿವಕುಮಾರ ಓಡಿಹೋಗಿ, "ಅಯ್ಯೊ, ಪಾಪ! ಕಮಲದಂತ ಕೈ ಸುಟ್ಟೇಹೋಯ್ತಲ್ಲಾ! ಎಂದು ತನ್ನ ಎರಡೂ ಹಸ್ತಗಳಲ್ಲಿ ಒತ್ತಿಹಿಡಿದ........!

"ಇರಲಿ ಬಿಡಿ, ಆಗಲೆ ಒಂಭತ್ತು ಗಂಟೆ; ಬನ್ನಿ ಊಟಮಾಡಿ! ದಿನಾ ಇದೇ ಭಂಡಾಟ ನಿಮ್ದು! ಬೇಗ ಊಟ ಮಾಡ್ಲಿಲ್ಲ; ಬೇಗ....!"

" ಸಾಗಲಿ, ಸಾಗಲಿ, ಭಾಷಣ ಮುಂದಕ್ಕೆ ಸಾಗಲಿ! ಅಷ್ಟಕ್ಕೆ ನಿಂತು ಬಿಟ್ಟಿತಲ್ಲಾ! ಮುಂದೆ?....ಬೇಗ!"

"..................... ..."

ಅಷ್ಟರಲ್ಲಿ ಯಾರೋ ಒಬ್ಬರು ಬಾಗಿಲು ತಟ್ಟಿ,

" ಸ್ವಾಮಿ, ಶಿವಕುಮಾರಯ್ಯನವರೆ" ಎಂದು ಕೂಗಿದರು. ಶಿವ ಕುಮಾರ ತಕ್ಷಣ ಬಂದು ಬಾಗಿಲು ತೆಗೆದು " ಯಾರು ಸ್ವಾಮಿ?" ಎಂದ.

" ನಾನು ' ಶಂಕರಪ್ಪ, ಅಂತ; ದಾವಣಗೆರೆ. ಈ ದಿನ ಊರಿಂದ ಬಂದೆ. ನಿಮ್ಮ ರಾಜಶೇಖರಯ್ಯನವರು ಒಂದು ಕಾಗದ, ಇದೇನೋ ಸಾಮಾನು ಕೊಟ್ಟಿದ್ದಾರೆ...."

" ಬನ್ನಿ, ಬನ್ನಿ, ಕುಳಿತುಕೊಳ್ಳಿ"

ಎಂದು ನಡುಮನೆಗೆ ಕರೆದುಕೊಂಡುಹೋಗಿ ಕುಳಿತುಕೊಳ್ಳುವಂತೆ ಹೇಳಿದ.

" ನಿಮ್ಮ ಮನೆ ಹುಡುಕಿ ಹುಡುಕಿ ಸಾಕಾಗಿ ಹೋಯ್ತುಪ್ಪ!! ಇದೇ ಬೀದಿಯಲ್ಲೇ ಎಂಟ್ಹತ್ತು ಸಲ ತಿರುಗಾಡಿದ್ದೇನೆ! ಸಿಕ್ಕಲೇ ಇಲ್ಲವಲ್ಲಾ!!"

" ಬೆಂಗಳೂರೆಂದರೆ ಹಾಗೇಪ್ಪ!! ಅದರಲ್ಲೂ ನೀವು ಬಂದಿರುವುದು ಇದೇ ಮೊದಲಸಲಾಂತ ಕಾಣುತ್ತೆ!"

" ಹೌದ್ರಿ ಸ್ವಾಮಿ, ಆದ್ಕೇ ಇಷ್ಟ್ ಕಷ್ಟ ಆದದ್ದು!!"

" ಬಂದೆ, ಇಲ್ಲೇ ಕೂತಿರಿ" ಎಂದು ಹೇಳಿ ಶಿವಕುಮಾರ ಅಡಿಗೆ ಮನೆಗೆ ಹೋದ. ಸುಮ ಕೆಳದನಿಯಲ್ಲಿ, " ಇವರು, ನಮ್ಮ ರಾಜ ಶೇಖರಪ್ಪನವರ ಮನೆ ಇದೆಯಲ್ಲಾ, ಅದರ ಎದುರು ಮನೆಯವರು."

ಎಂದು ಹೇಳಿದಳು. ಅದರಲ್ಲೂ ದಾವಣಗೆರೆ ಕಡೆಯವರೆಂದರೆ ಸುಮಗೆ ಪಂಚಪ್ರಾಣ! ಶಿವಕುಮಾರ ಮಾತು ಮುಗಿಸಿ ಬಂದವನೆ,

" ಏಳಿ, ತೊಳೆದುಕೊಳ್ಳಿ, ಅಡಿಗೆ ಆಗಿದೆ." ಎಂದ

" ಇಲ್ಲ ಸ್ವಾಮಿ ಖಾನಾವಳಿಗೆ ಹೋಗುತ್ತೇನೆ. ಪಾಪ ನಿಮಗೇಕೆ ತೊಂದರೆ! ಅದರಲ್ಲೂ ಈ ದೊಡ್ಡ ನಗರದಲ್ಲಿ, ಎಷ್ಟು ಕಷ್ಟ, ಏನು ತ್ರಾಸ!"

"ಪರವಾಯಿಲ್ಲ ಏಳಿ ಶಂಕರಪ್ಪನವರೆ! ನಮಗೇನೂ ತೊಂದರೆ ಇಲ್ಲ. ದೇವರ ದಯದಿಂದ ಎಲ್ಲಾ ಅನುಕೂಲವಿದೆ. ನಮ್ಮ ಮಾವ ಒಳ್ಳೆ ಹುಡುಗಿಯನ್ನು ಕೊಟ್ಟಿದ್ದಾರೆ!"

ಎಂದು ಹೇಳುತ್ತ ಸುಮಳ ಕಡೆಗೆ ತಿರುಗಿದ; ಆಕೆ ಮೂಗುಮುರಿದು ಒಳಗೊಳಗೇ ನಗುತ್ತಿದ್ದಳು.

"ನೀವೂ ಬನ್ನಿ ಸ್ವಾಮಿ, ಜೊತೆಯಲ್ಲಿಯೇ ಊಟಮಾಡೋಣ."

"ಪರವಾಯಿಲ್ಲ, ನೀವು ಮೊದಲು ತೊಳೆದುಕೊಳ್ಳಿ ; ನನಗೆ ಕೊಂಚ ಕೆಲಸವಿದೆ. ನಿಮ್ಮದು ಆಗಲಿ!!"

....ಶಂಕರಪ್ಪನವರ ಊಟವಾಯ್ತು. ಅಷ್ಟರಲ್ಲಿ ಶಿವಕುಮಾರ ನಡುಮನೆಯಲ್ಲಿ ಚಾಪೆ ಹಾಸಿ ತಾಂಬೂಲದ ತಟ್ಟೆಯನ್ನಿರಿಸಿದ್ದ.

"ಬನ್ನಿ, ಕೊಂಚ ತಾಂಬೂಲ ಹಾಕಿಕೊಳ್ಳಿ. ಎಲೆ ಚೆನ್ನಾಗಿವೆ ಹಾಕಿಕೊಳ್ಳಿ!"

ಎಂದು ಹೇಳಿ ಶಿವಕುಮಾರ ಮಾತಿಗೆ ಶುರುವು ಮಾಡಿದ. ಇವರ ಮಾತುಗಳನ್ನು ಕೇಳಿ ಸುಮ ಒಳಗೊಳಗೇ ನಗುತ್ತಿದ್ದಳು!

"ಏನ್ರಿ ಸ್ವಾಮಿ, ನೀವು ಸಂಸಾರ ಕಟ್ಟಿಕೊಂಡು, ಆ ಕಡೆ ಓದಲಿಕ್ಕೆ ಯಾವಾಗ ಹೋಗ್ತೀರಿ! ಈ ಕಡೆ ದುಡಿಯೋದ್ಯಾವಾಗ ದುಡೀತೀರಿ!! ಊರಿಂದ ಏನಾದ್ರೂ ತರಿಸ್ತೀರೋ, ಹೇಗೆ?"

"ನಮ್ಮ ಕಾಲೇಜು ಎಂಟುಗಂಟೆಯಿಂದ ಹನ್ನೊಂದು ಗಂಟೆಯವರೆಗೆ ಇರುತ್ತೆ. ಆಮೇಲೆ ಮನೆಗೆ ಬಂದು ಊಟಮಾಡಿಕೊಂಡು ಹೋಗಿ ೧೨ರಿಂದ ಸಾಯಂಕಾಲ ಆರರವರೆಗೆ ಆಫೀಸಿನಲ್ಲಿ ಕೆಲಸಮಾಡುತ್ತೇನೆ.... ಆಫೀಸೇ?....ಒಂದು ದಿನಪತ್ರಿಕೆಯ ಆಫೀಸಿನಲ್ಲಿ ಕೆಲಸ ಮಾಡುತಲಿದ್ದೇನೆ. ಅಲ್ಲಿ ೧೦೦ರೂ. ಸಂಬಳ ಬರುತ್ತೆ. ಪುಸ್ತಕ ಬರೆದದ್ದೂ, ಲೇಖನ ಬರೆದದ್ದೂ ಎಲ್ಲಾ ಸೇರಿ ದೇವರ ದಯದಿಂದ ನಮ್ಮ ಜೀವನಕ್ಕೇನೂ ತೊಂದರೆಯಿಲ್ಲ! ನಮ್ಮ ಸುಮ ಕೂಡ ಪುಸ್ತಕಗಳನ್ನು ಬರೆದಿದ್ದಾಳೆ. ಇಷ್ಟರಲ್ಲೇ ಪ್ರಕಟಣೆಗೆ ಕೊಡುತ್ತೇನೆ. ಅದರಿಂದಲೂ ನೂರಾರು ರೂಪಾಯಿ ಬರುತ್ತೆ. ನಮಗೇನು ಶಂಕರಪ್ಪನವರೆ, ನಮ್ಮ ಲೇಖನಿಯೊಂದೇ ಸಾಕು, ಎಲ್ಲಿ ಬೇಕಾದರೂ ನಾಲ್ಕು ಜನರಿಗೆ ಒಳ್ಳೆಯವರಾಗಿ ಬಾಳುತ್ತೇವೆ. ನಮಗೇನು ಉಪ್ಪರಿಗೆ ಮನೆ ಬೇಡ

....ಇದ್ದಿದ್ದರಲ್ಲೇ ತೃಪ್ತಿಪಟ್ಟುಕೊಂಡರಾಯ್ತು....ಅಂತು ಇಂಥ ನಗರದಲ್ಲಿ ಸ್ವಲ್ಪ ಕಷ್ಟ!''

"ಈ ಮನೆಗೆ ಬಾಡಿಗೆ ಕೊಡುತ್ತೀರೋ?''

"ಹೌದು, ೩೦ ರೂಪಾಯಿ ಬಾಡಿಗೆ ಕೊಡುತ್ತೇವೆ!''

"೩೦ ರೂಪಾಯಿ ಕೊಡುತ್ತೀರಾ!!?''

"ಅಯ್ಯೋ, ಇದಿನ್ನೂ ಕಡಿಮೆ ಶಂಕರಪ್ಪನವರೇ. ನಮ್ಮ ಪೂರ್ವ ಜನ್ಮದ ಸುಕೃತ, ಇಂಥ ಅಚ್ಚುಕಟ್ಟಾದ ಮನೆ ಸಿಕ್ಕಿದೆ!....ಇರಲಿ ಮಲಕ್ಕೊಳ್ತೀರಿ ತಾನೆ?''

"ಇಲ್ಲ, ಇಲ್ಲ, ಚಿಕ್ಕಪೇಟೆಯ ಛತ್ರದಲ್ಲಿ ನಮ್ಮೂರಿನವರು ಕೆಲವರಿದ್ದಾರೆ. ಅಲ್ಲಿಗೇ ಹೋಗುತ್ತೇನೆ.''

ಎಂದು ಎದ್ದು ಹೊರಟರು. ಶಿವಕುಮಾರ ಹೊರಗಿನ ಬೀದಿಯವರೆಗೆ ಬಂದು, 'ಹೋಗಿಬನ್ನಿ' ಎಂದು ಹೇಳಿ, ಹಿಂತಿರುಗಿ ಮತ್ತೆ "ಊರಿಗೆ ಹೋಗುವಾಗ ಕಂಡುಹೋಗಿ'' ಎಂದು ಹೇಳಿ ಒಳಗೆ ಹೋದ.

ಶಿವಕುಮಾರ ಒಳಗೆ ಹೋದವನೇ ತೊಳೆದುಕೊಂಡು, "ರಾಣಿ ಸಾಹೇಬರ ಸವಾರಿ ದಯಮಾಡಿಸಲಿ'' ಎಂದ. ಅವನು ಬರೆದು ಇಟ್ಟಿದ್ದ ಹಾಳೆಗಳನ್ನೆಲ್ಲ ಅಷ್ಟರಲ್ಲಿಯೇ 'ಚಕ್' ಮಾಡಲಿಕ್ಕೆ ಷುರುವು ಮಾಡಿದ್ದಳು ಸುಮ. ಅವನು ಒಳಗೆ ಬಂದುದನ್ನು ನೋಡಲೇ ಇಲ್ಲ. ಶಿವಕುಮಾರ ಕರೆದ ಕೂಡಲೆ ಹಾಳೆಗಳನ್ನೆಲ್ಲಾ ಮುದುರಿಟ್ಟು ಮಹಾ ಸಂಪನ್ನೆಯ ಹಾಗೆ ಬಂದಳು.

ಇಬ್ಬರ ಊಟ ಒಂದೇಸಲ ಆಗಬೇಕು! ಅವನು ಸುಮಳನ್ನು ಬಿಟ್ಟು ಊಟ ಮಾಡುತ್ತಲೇ ಇರಲಿಲ್ಲ! ಮಾಡಿದ ಅಡುಗೆಯನ್ನೆಲ್ಲಾ ಮುಂದಿಟ್ಟು ಕೊಂಡು, ಸೊಗಸಾಗಿ ಹರಟೆ ಹೊಡೆಯುತ್ತ ಊಟಮಾಡಿದರೇನೇ ಅವರಿಗೆ ಆನಂದ!

"ಅಕ್ಕಿ ಬಹಳ ಚೆನ್ನಾಗಿದೆಯಲ್ವೆ ಸುಮ.''

ಎಂದು ಷುರು ಮಾಡಿದ ಶಿವಕುಮಾರ.

"ದುಡ್ಡು ಹೇಗಿದೆ! ಒಳ್ಳೊಳ್ಳೆ ಊಟಕ್ಕೆ ರುಚಿ ಹತ್ತಿ ದುಡ್ಡು ಸಿಕ್ಕ ಸಿಕ್ಕ ಹಾಗೆ ಖರ್ಚು ಮಾಡಿದರಾಯಿತು! ಸಾಮಾನ್ಯ ಅಕ್ಕಿ ತನ್ನಿ ಅಂದ್ರೆ,

ನಿಮಗೆ ಕೊಯಮುತ್ತೂರುಸಣ್ಣ, ಜೀರಿಗಿಸಣ್ಣಾನೇ ಆಗಬೇಕು! ದುಡಿದದ್ದೆಲ್ಲಾ ಊಟಕ್ಕೇ ಆದ್ರೆ ಆಯ್ತು, ಬಾಳ್ವೆ!!"

"ಚೆನ್ನಾಗಿ ಊಟಮಾಡಬೇಕು ಸುಮ. ಗುರುವು ಕೊಟ್ಟಷ್ಟನ್ನು ಉಪಯೋಗಿಸಿಕೊಂಡರಾಯ್ತು! ಇರಲಿ, ಬೆಳಗ್ಗೆ ಟಿಫಿನ್ ಏನು ಮಾಡ್ತಿ?"

"ಪೂರಿ ಪಲ್ಲೆ ಮಾಡಬೇಕಂತಿದ್ದೇನೆ; ನಿಮಗೇನಿಷ್ಟ?"

"ನಿನ್ನ ಇಷ್ಟಾನೇ ನನ್ನ ಇಷ್ಟ! ಏನು ಪಲ್ಲೆ?"

"ಆಲೂಗಡ್ಡೆ"

"ಆಲೂಗಡ್ಡೆ ಎಲ್ಲಿವೆಯೇ; ನಾನು ತರಲೇ ಇಲ್ಲನಲ್ಲ! ನೀನಾವಾಗ 'ಮಾರ್ಕೆಟ್ಟಿಗೆ' ಹೋಗಿದ್ದೆ?"

"ಇಲ್ಲ, ಇಲ್ಲೆ ಬಂದಿದ್ವು, ತೊಗೊಂಡೆ"

"ದುಡ್ಡೆಲ್ಲಿತ್ತೆ?"

"ಬೆಳಗ್ಗೆ ನೀವು ಅಂಗಿತೊಟ್ಟುಕೊಳ್ಳುವಾಗ ನಾಲ್ಕಾಣೆ ಉದುರಿಸಿ ಕೊಂಡಿರಲ್ಲಾ, ನೆನಪಿದೆಯೆ? ಪಾಪ, ಸಾಹುಕಾರ್ರು, ಅಂಥ ನಾಲ್ಕಾಣೆಗ ಳೆಷ್ಟೋ!!"

"ಅಲೇ ಕಳ್ಳಿ...." ಎಂದು ಎಡಗಡೆಗೆ ಕುಳಿತಿದ್ದ ಸುಮಳ ಬೆನ್ನ ಮೇಲೆ ಮೆಲ್ಲಗೆ ಗುದ್ದಿದ!

"ಅಪ್ಪಯ್ಯ, ನಾನು ಊಟಮಾಡೋದಿಲ್ಲ ಹೋಗಿ, ಯಾವಾಗ್ಲು ಇದೇನೇ ನಿಮ್ದು!" ಎಂದು ಹಿಂದಕ್ಕೆ ಸರಿದಳು.

"ಇಲ್ಲ, ಇಲ್ಲ, ನನ್ನ ಗಿಣಿ, ಬಾ, ಇನ್ಮೇಲೆ...."

"ಇರಲಿ ಬಿಡಿ; ಇನ್ನೊ ಸ್ವಲ್ಪ ಅನ್ನ ಬಡಿಸಲೆ?"

"ನನಗೆ ಸಾಕೇ ಸಾಕು! ನೀನು ಹಾಕ್ಕೊ"

"ನಿಮಗೆ ಬೇಡವಾದ್ರೆ ನನಗೂ ಬೇಡ!"

"ಛೆ! ಛೆ! ನಿನ್ನ ಹೊಟ್ಟೆ ಎಷ್ಟೇ ಆಗ್ಲಿ ದೊಡ್ಡ...."

"ಇರಲಿ ಬಿಡಿ ಮಾರಾಯ್ರೆ; ಬರೇ...."

ಇಬ್ಬರೂ ಊಟ ಮುಗಿಸಿಕೊಂಡು ಮಲಗುವ ಕೋಣೆಗೆ ಬಂದಾಗ ಆಗಲೇ ಹನ್ನೊಂದುಗಂಟೆ!! ಊಟವಾದಮೇಲೆ ತಾಂಬೂಲ ಹಾಕುತ್ತ

ಕೆಲಹೊತ್ತು ಹರಟೆ ಕೊಚ್ಚಿದರೇನೆ ಸುಮಳಿಗೆ ತೃಪ್ತಿ! ಶಿವಕುಮಾರ ಕೊಂಚ ಓವಿ ಮಲಗಿಕೊಳ್ಳಬೇಕೆಂದರೂ ಸಾಧ್ಯವಾಗುತ್ತಿರಲಿಲ್ಲ

ಇಬ್ಬರು ಮಲಗುವ ಅಚ್ಚುಕಟ್ಟಾದ ಮಂಚ! ಅದು ಅವನ ಮಾವ ಮಾಡಿಸಿಕೊಟ್ಟದ್ದು! ಮಂಚದ ಮಗ್ಗುಲಲ್ಲಿ ಒಂದು ಸ್ಟೂಲು; ಅದರ ಮೇಲೆ ಪುಸ್ತಕಗಳನ್ನು ಇಟ್ಟಿದ್ದಾನೆ. ಹಾಸಿಗೆಯ ಮೇಲೆ ಉರುಳಿಕೊಂಡೇ ಪುಸ್ತಕ ತಿರುವಿಹಾಕತೊಡಗಿದ. ಈ ಹೊತ್ತಿನಲ್ಲಿಯೇ ಕೊಂಚ ಓದೋಣವೆಂದು ಅವನಿಗೆ ಆಸೆ! ಅವನು ಚನ್ನಾಗಿ ಓವಿ, ಬೇಗ ಪಾಸಾಗಿ ಮುಂದುವರಿಯ ಬೇಕೆಂಬ ಆಸೆ ಸುಮಳಿಗೆ ಇತ್ತಾದರೂ, ಈ ಸಮಯದಲ್ಲಿ ಅದನ್ನೆಲ್ಲ ಮರೆತೇ ಬಿಡುತ್ತಿದ್ದಳು! ಅವನ ಬಲಗಡೆ ಮಲಗಿಕೊಂಡಿದ್ದ ಆಕೆ, ಗೊಣಗ ತೊಡಗಿದಳು!

"ನನಗೆ ಕಣ್ಣು ಕುಕ್ಕುತ್ತೆ; ಲೈಟ್ ಆರ್ಸಿ ಸ್ವಾಮಿ!"

"ಹೂಂ, ಶುರುವು ಮಾಡ್ಡೊ, ನಿನ್ನ ಪುರಾಣಾನ! ತುಂಬ ಹೊದ್ಕೊಂಡು ಮಲಿಕ್ಕೊ"

"ಹೊದ್ಕೊಂಡ್ರೆ ಉಬ್ಬಸ ಆಗುತ್ತೆ!"

"ಕೇಳು ಸುಮ, ಸುಮ್ನೆ ತೊಂದರೆ ಕೊಡಬೇಡ!"

"ಹೌದು, ನನಗೆ ಹೊಟ್ಟೇಕಿಚ್ಚು, ನೀವು ಓದುತ್ತೀರಲ್ಲಾಂತ! ನನಗೆ ನಿದ್ರೆ ಬರೋಲ್ಲಾಂದ್ರೆ...."

"ಹಾಗಾದ್ರೆ ನಾನು ಓದಬೇಡ್ವೊ?"

"ಬೇಡಾಂತ ಯಾರಂದ್ರು; ಸಂಜೆ ಸಮಯದಲ್ಲಿ ಚೇಷ್ಟೆ ಮಾಡ್ಕೋಂತ ಇರೋದು! ಈ ಹೊತ್ತಿನಲ್ಲಿ....ತೊಂದ್ರೆ ಕೊಡೋದು"

"ಅಯ್ಯೋ, ಶನಿಯೆ, ಯಾಕೆ ಗೊಣಗೇ ಗೊಣಗುತ್ತೀಯೇ...."

ಇನ್ನೂ ಅವನ ಮಾತು ಪೂರ್ತಿಯಾಗಲಿಲ್ಲ, ಗುಡುಗು ಮಳೆಗೆ ಪ್ರಾರಂಭವಾಗಿಯೇ ಬಿಟ್ಟಿತು! ಸುಮಳ ಕಣ್ಣಲ್ಲಿ ನೀರು ಗಳಗಳ ಇಳಿಯ ತೊಡಗಿದುವು. ಮುಖದ ತುಂಬ ಮುಸುಗು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು....ಸಂಧಾನ ಶುರುವಾಯ್ತು!

"ಇಲ್ಲ ಬಿಡು, ಸುಮ, ಬೇಕಂತ ಅಂದೆ! ಅದ್ಕೆ ಅಳ್ತಿಯಲ್ಲೆ!" ಇನ್ನಮೇಲೆ ನಿನ್ನ ಸಂಗಡ ಮಾತನಾಡೋದೇ ಇಲ್ಲ ಬಿಡು ಮಹರಾಯಳೆ!"

" ಶನಿಯನ್ನೇಕೆ ಮಾಡ್ಕೋಬೇಕಿತ್ತು!...."

" ತಮಾಷೆಗೆ ಅಂದರೆ, ಅದ್ನೆ ದೊಡ್ಡದು ಮಾಡಿದ್ರೆ ಹೇಗೆ ಸುಮ, ಆಗ್ಲಿ ಬಿಡು, ಲೈಟ್ ತೆಗೆದೇ ಬಿಡ್ತೇನೆ" ಎಂದು ಲೈಟ್ ಆರಿಸಿ, ಐದು ಕ್ಯಾಂಡ್ಲಿನ ನೀಲಿ ವರ್ಣದ ದೀಪವನ್ನು ಹಾಕಿದ. ಇದರ ಬೆಳಕು ಬಾಲ ಚಂದ್ರನ ತಣ್ಣನೆಯ ನಸುಬೆಳಕಿನಂತಿತ್ತು! ಈ ಬೆಳಕಿನಲ್ಲಿ ಸ್ವಲ್ಪ ಮುನಿಸಿದ್ದ ಸುಮಳ ಮುಖ ಮತ್ತಷ್ಟೂ ಸೌಂದರ್ಯವಾಗಿತ್ತು.

" ಇಷ್ಟೊಂದು ಕಣ್ಣೀರು, ಅಬ್ಬ! ಒಳ್ಳೆ ಅಸ್ತ್ರ ಕಣೆ ಸುಮ, ನಿಂದು!"

ಎಂದು ಮೆಲ್ಲಗೆ ಕಣ್ಣೀರು ಒರಸಿ, ಕೆನ್ನೆಗಳನ್ನು ಮೃದುವಾಗಿ ಸವರಿ ಸಮಾಧಾನ ಮಾಡಿದ! ಸುಮಳ ಮುನಿಸು ಮಾಯವಾಗಿ ಹೋಯ್ತು!! ಆಕೆ ಮೊದಲೇ ಹರಟೇಮಲ್ಲಿ! ಮತ್ತೆ ಪ್ರಾರಂಭ ಮಾಡಿದಳು! ಶಿವಕುಮಾರ ಸುಮ್ಮನಿದ್ದರೂ ಚುಚ್ಚಿ ಚುಚ್ಚಿ ಮಾತನಾಡಿಸತೊಡಗಿದಳು!

" ಆಲ್ರಿ, ಮೊನ್ನೆ...."

" ಸುಮ್ನೆ ಇರು ಸುಮ, ನನಗೆ ನಿದ್ರೆ ಬರುತ್ತೆ!"

" ಓದುತ್ತಾ ಇದ್ರೆ ನಿದ್ರೆ ಬರುತ್ತಿರಲಿಲ್ಲ. ಪಾಪ! ನನ್ನ ಸಂಗಡ ಮಾತನಾಡಬೇಕೂಂದ್ರೆ ಇಲ್ಲದ ನಿದ್ರೆ ಬರುತ್ತೆ!"

" ನೀನೇ ಹೇಳ್ದಿ, 'ನನಗೆ ನಿದ್ರೆಬರುತ್ತೆ, ಲೈಟ್ ತೆಗೆದು ಬಿಡಿ' ಅಂತ; ಈಗೆಲ್ಲಿ ಹೋಯ್ತು, ಆ ಕಳ್ಳ ನಿದ್ರೆ!....ಅದಿರ್ಲಿ....ಅದೇನು, ಮೊನ್ನೆ...."

" ಮೊನ್ನೆ ಒಂದು ಪದ್ಯ ಬರ್ದಿದ್ರಲ್ಲಾ, ತೋರಿಸ್ಲೇ ಇಲ್ಲಾಲ್ವೆ? ಎಲ್ಲಿ, ಈಗ ಹೇಳಿ....!"

" ಅಯ್ಯೋ ಹುಚ್ಚಿ, ನೆನಸಿಕೊಂಡಾಗ್ಲೆ....!"

" ಸ್ವಲ್ಪ ಹೇಳೀಂದ್ರೆ; ಕವಿವರ್ಯರ ಕೈಹಿಡಿದ ಮೇಲೆ...."

ಎಂದು ಅವನ ಕ್ರಾಪಿನಲ್ಲಿ ಬೆರಳಾಡಿಸತೊಡಗಿದಳು.

" ಆಹಾ, ನಿನ್ನ ಒಗ್ಗರಣೆ ಮಾತುಗಳಿಗೆ........"

ಎಂದುಕೊಳ್ಳುತ್ತ ಸುಮಳ ಹಣೆಯ ಮೇಲೆ ಹಾರಾಡುತ್ತಿದ್ದ ಉಂಗುರು ಗುರುಳನ್ನು ಮೆಲ್ಲಗೆ ಹಿಂದಕ್ಕೆ ತೀಡಿ, ಕೆನ್ನೆಯ ಮೇಲೆ ಮೃದುವಾಗಿ ತಟ್ಟಿದ!

" ಹೇಳೀಂದ್ರೆ, ನಿದ್ರೆ ಬರೋಲ್ಲ........"

"ಹೇಳ್ತೀನೆ ಸ್ವಲ್ಪ ಸುಧಾರಿಸು!....ಗಂಟೆ ಎಷ್ಟು ಗೊತ್ತೋ ಈಗ."

"ಬೇಗ ಹೇಳಿ ಮತ್ತೆ."

"ಹೇಳ್ಲೋ?"

"ಹ್ಞಾಂ, ಹೇಳಿ."

"ಸೂರ್ಯ ಸೃಷ್ಟಿ
ಸೂಕ್ಷ್ಮ ದೃಷ್ಟಿ
ಬಲ್ಲೆಯೇ ಆತ್ಮಶ್ರೇಷ್ಠಿ!
ಇದು ಸಮಷ್ಟಿ
ಶಾಂತಿ ವೃಷ್ಟಿ!
ಬಲ್ಲೆನದ, ಕವಿಯ ದೃಷ್ಟಿ!!"

"ಅಯ್ಯೋ, ಇದು ತಿಳಿಯೋದಿಲ್ಲ ಬಿಡ್ರಿ; ಇದಲ್ರಿ, ಅದೇನೋ ತಾಳ ಹಾಕಿಕೊಳ್ಳುತ್ತ ಬರೀತಿದ್ರಲ್ರಿ! ನಾನು ಬಂದಕೂಡ್ಲೆ ಮುಚ್ಕೊಂಡ್ಬಿಟ್ರಲ್ಲಾ, ಅದು!!"

"ಒಳ್ಳೆ ಹುಡುಗಿ ಕಣೇ ನೀನು, ಈಗ್ಲೆ ಆಗ್ಬೇಕೇನೆ ಎಲ್ಲ!!" ಎನ್ನುತ್ತಲೇ ಹೇಳತೊಡಗಿದ........

"ಪಚ್ಚನೆ ಪಸುರಿನ ಬಯಲಿನ ಮೋಲಿ
ಮೆಚ್ಚಿನ ಮುಂಗುರುಳಿನ ಬಾಲೆ!
ಬೆಳ್ಮುಗಿಲಿನ ಮೇಲ್ ಜೊನ್ನದ ಲೀಲೆ
ಹಾಲ್‌ಗೆನ್ನೆಯ ಮೇಲ್ ನಗೆತೇಲಿ!
ಸುರಮೋಹನ ಸುಂದರ ಸುಮತಾರೆ -
ಮನಮೋಹನ ಬಂಧುರ ಸೀರೆ........!"

ಇಷ್ಟಕ್ಕೆ ನಿಲ್ಲಿಸಿ, "ಚನ್ನಾಗಿಲ್ಲ ಬಿಡು ಸುಮ........" ಎಂದ.
"ಸುಮ್ನೆ ಹೇಳೀಂದ್ರೆ........"

"ಹುಚ್ಚಿ, ಯಾರಾದ್ರು ನಕ್ಕಾರು ಬಿಡು...."

ಎಂದು ನಸುಬೆಳಕಿನಲ್ಲಿ ಹೊಳೆಯುತ್ತಿದ್ದ ಸುಮಳ ಕೆನ್ನೆಗೆ ಒಂದು ಸಲ........ಸ ಬೇಕೆನ್ನುವಷ್ಟರಲ್ಲಿ ಯಾರೋ ಬಾಗಿಲು ತಟ್ಟಿ,

"ಸ್ವಾಮಿ ಶಿವಕುಮಾರಯ್ಯನವರೆ, ಸ್ವಲ್ಪ ಏಳಿ ಸ್ವಾಮಿ."

ಎಂದು ಕಿರುಚಿದರು. ಯಾರಿರಬಹುದೆಂದು ಸಂಶಯದಿಂದ ಕದ ತೆಗೆದ ....ನೆರೆಮನೆಯ ಪಾಪಜ್ಜಿ!

"ಏನಮ್ಮ, ಯಾಕೆ ಇಷ್ಟು ಗಾಬರಿಯಾಗಿದ್ದೀಯಲ್ಲ, ಏನು ಸಮಾಚಾರ?" ಎಂದ.

"ನೋಡಿ ಸ್ವಾಮಿ, ನಮ್ಮ ಮನೆಯಲ್ಲಿ ಕಾದಾಡೋದ್ನ. ಸ್ವಲ್ಪಬಿಡ್ಸಿ, ಬುದ್ಧಿ ಹೇಳಿ ಬನ್ನಿ ಸ್ವಾಮಿ; ನನ್ನ ಮಗ ರಾಮು, ಸೊಸೆ ಸೀತೆ ಜಗಳ ಆಡ್ತಾ ಇದ್ದಾರೆ; ಸ್ವಲ್ಪ ಬುದ್ಧಿ ಹೇಳಿ ಬನ್ನಿ ಸ್ವಾಮಿ; ನನಗಾಗ್ಲೆ ಸಾಕಾಗಿ ಹೋಯ್ತಪ್ಪಾ, ದೇವ್ರೇ!!"

"ಇರ್ಲಿ, ಇರ್ಲಿ, ಸುಧಾರಿಸಬೇಕಮ್ಮ, ಹೊಸ ಗಂಡಾ ಹೆಂಡ್ರು........ ಹಾಗೂ ಹೀಗೂ ಉಂಟು........ರಾಮು ಸೀತೆ ಚನ್ನಾಗಿರಬೇಕಾಗಿತ್ತಲ್ಲ! ಹೀಗೇಕಾಯ್ತು!!"

ಎಂದುಕೊಳ್ಳುತ್ತ ಹೋಗಿ ಸಮಾಧಾನ ಹೇಳಿ ಜಗಳ ತಣ್ಣಗೆ ಮಾಡಿ ಬಂದ.

ಅವನು ಬರುವವರೆಗೆ ಸುಮ ಬಾಗಿಲಲ್ಲೇ ನಿಂತಿದ್ದು, ಬಂದಕೂಡಲೆ ಓಡಿಹೋಗಿ, ಮಂಚದ ಮೇಲೆ ಬಿದ್ದುಬಿದ್ದು ನಗುತ್ತಿದ್ದಳು! ಅವನು ಕದ ಹಾಕಿಕೊಂಡು ಬಂದು,

"ಏ ಹುಚ್ಚಿ, ನೆರೆಮನೆಯ ಸೀತಮ್ಮನ್ನಾದ್ರು ನೋಡಿ ಬುದ್ಧಿ ಕಲಿತುಕೋಬಾರ್ದೇನೆ."

ಎಂದುಕೊಳ್ಳುತ್ತ ಮಂಚದ ಬಳಿಗೆ ಬರುವಷ್ಟರಲ್ಲಿ, ತುಂಬ ಹೊದ್ದು ಕೊಂಡು,

"ನೀವೂ 'ಇಸ್ಪೇಟ್ ರಾಜಾ' ಆದ್ರೆ......."

ಎಂದುಕೊಳ್ಳುತ್ತ ಹೊದಿಕೆಯನ್ನು ಮತ್ತೂ ಬಿಗಿ ಮಾಡಿಕೊಂಡಳು!

"ಒಳ್ಳೆಯದೇ ಆಯ್ತು, ನನಗೂ ನಿದ್ರೆ ಬರುತ್ತೆ!"

ಎಂಮುಕೊಳ್ಳುತ್ತ ಅವನೂ ತುಂಬ ಹೊದ್ದು ಮಲಗಿಬಿಟ್ಟ! ಸುಮ ಸುಮ್ಮನಿರಬೇಕಲ್ಲ!! ಮತ್ತೆ ಪ್ರಾರಂಭಮಾಡಿದಳು.

"ಅಲ್ಲ..........."

"ಏನು ಅಲ್ಲ, ಬೆಲ್ಲ, ನಾಳೆ ನಿಮ್ಮ ತಂದೆಯವರ ಊರಿಗೆ ಹೋಗಿ ಬಿಡು, ರೈಲು ಹತ್ತಿಸುತ್ತೇನೆ."

"ನೀವೂ ಬಂದ್ರೆ....ನಾನೂ...."

"ನನ್ನದೇನಿದೆ ಅಲ್ಲಿ ಕೆಲಸ; ಸದ್ಯಕ್ಕೆ ಶನಿ ತೊಲಗಿದರೆ, ಅಷ್ಟೇ ಸಾಕು! ಓದುವಾಗ ಮದುವೆ ಮಾಡ್ಕೋಬಾರ್ದು ಅಂತ ಹೇಳುತ್ತಾರೆ...."

ಎಂದು ಸುಮ್ಮಸುಮ್ಮನೆ ಅಳಿಸತೊಡಗಿದ. ಸುಮಳ ಕಣ್ಣಲ್ಲಿ ಯಾವಾಗಲೂ ಕಣ್ಣೀರು 'ರೆಡಿ'. ಕೇಳುವುದಿನ್ನೇನು; ಕೆನ್ನೆಯ ಮೇಲೆಲ್ಲ ಕಣ್ಣೀರೇ!! ಮತ್ತೆ ಅವನಿಗೆ ಬಿಟ್ಟದ್ದಲ್ಲ ಸಂಧಾನ ಸಮಾರಂಭ!

"ಇಲ್ಲ ಬಿಡು, ಸುಮ, ಬೇಕಂತ ಅಂದೆ! ನೀನು ಅತ್ರೆ—ಇರ್ಲಿ ಬಿಡೆ, ತಮಾಷೆಗೆ ಅಂದೆ! ನಿನ್ನನ್ನ ಕಳ್ಸಿ ನಾನೆಲ್ಲಿದ್ದೇನು!...."

ಎಂದು ಮೆಲ್ಲಗೆ ಮಕ್ಕಳನ್ನು ತಟ್ಟಿದ ಹಾಗೆ ತಟ್ಟಿ ಸಮಾಧಾನಮಾಡಿದ.

ಇವರಿಬ್ಬರ ಬಾಳುವೆ ಪ್ರಾರಂಭವಾಗಿ ಆರೇ ತಿಂಗಳು; ಹೊಸ ಗಂಡ ಹೆಂಡಿರ ಚೊಚ್ಚಲ ಜೀವನ! ಆದರೂ ಬಹಳ ಅಚ್ಚುಕಟ್ಟಾಗಿ ಸಂಸಾರ ವನ್ನು ಸಾಗಿಸಿಕೊಂಡು ಹೋಗುತ್ತಿದ್ದಾರೆ. ಸುಮ ತಂದೆಯ ಮನೆಯನ್ನೇ ಮರೆತುಬಿಟ್ಟಿದ್ದಾಳೆ. ಶಿವಕುಮಾರ ಅಷ್ಟೊಂದು ಪ್ರೀತಿಯಿಂದ ನೋಡಿ ಕೊಳ್ಳುತ್ತಾನೆ. ಅವನನ್ನು ಬಿಟ್ಟಿರಬೇಕೆಂದರೆ, ಸುಮಗೆ ಪ್ರಾಣಸಂಕಟ!!

ಸುಮ ಮುನಿಸಿಕೊಂಡರೆ, ಸಮಾಧಾನ ಮಾಡುವ ಬಗೆ ಶಿವಕುಮಾರ ನೊಬ್ಬನಿಗೇ ಗೊತ್ತು! ಹಾಗೂ ಹೀಗೂ ಮುನಿಸನ್ನೆಲ್ಲಾ ತಿದ್ದಿದ!........ ನಗಿಸಿದ........

........ಸುಮಾರು ಮುಕ್ಕಾಲು ಗಂಟೆಯಾದ ಮೇಲೆ ಶಿವಕುಮಾರನ ಮುದರಿದ್ದ ಬಲಗೈ ತೋಳಿನ ಮೇಲೆ ತಲೆಯನ್ನಿಟ್ಟು ಹಾಗೆ ನಿದ್ರಿಸತೊಡ ಗಿದಳು.........ಅರೆ ನಿದ್ರೆಯಲ್ಲಿದ್ದ ಸುಮಳ ಮುಖವನ್ನೊಮ್ಮೆ ನೋಡಿ........ ತಲೆಯನ್ನು ಮೆಲ್ಲಗೆ ಸವರಿ, "ಮುದ್ದು ಹುಡುಗಿ, ಸುಮ!!" ಎಂದ....

ಹನ್ನೆರಡೂವರೆ 'ಢಣ್' ಎಂದಿತು!........

ತಾಯಿ - ಮಗು

೧

'ಚಿಕ್ಕಣ್ಣ ಮಲಿಯಮ್ಮನ ಕಟ್ಟೆಯ ಬೇವಿನ ಮರದ ಬುಡದಲ್ಲಿ ಕೂತಿದ್ದ, ಎಂದು ಮೂಲೆ ಮನೆಯ ಜೋರಜ್ಜ ಹೇಳಿದ. ದೊಡ್ಡ ಮಾವಿನ ಮರದ ಏರಿಯ ಮೇಲೆ, ಮಧ್ಯಾಹ್ನ ಒಂದು ಗಂಟೆಯಲ್ಲಿ ತಿರುಗಾಡುತ್ತಿದ್ದನೆಂದು ಗಿರಿಯಪ್ಪಗಳ ಗಂಗವ್ವ ಹೇಳಿದಳು. ಮೂರು ಗಂಟೆ ಸಮಯದಲ್ಲಿ ಹೊಸಕಟ್ಟೆಯ ಕಡೆಗೆ ಓಸುತ್ತಿದ್ದ - ಎಂದು ಚೆನ್ನವ್ವಗಳ ಚನ್ನವೀರಜ್ಜ ಹೇಳಿದ. "ಛೆ! ಛೆ! ಎರಡು ಗಂಟೆ ಸಮಯದಲ್ಲಿ, ಗೌಡರ ಬಾವಿಯ ದಡದ ಮೇಲೆ ಕುಳಿತುಕೊಂಡಿದ್ದನ್ನು ನಾನು ನೋಡಿಬಂದಿದ್ದೇನೆ" ಎಂದು ಶಂಕರಭಟ್ಟರು ತಿಳಿಸಿದರು........ಸಂಜೆ ಆರು ಗಂಟೆ ಸಮಯದಲ್ಲಿ, ಸುಡುಗಾಡು ಬಯಲಿನ ಗಿಡದ ಕೆಳಗೆ ಯಾರೋ ಒಬ್ಬರು ತಲೆ ತಗ್ಗಿಸಿಕೊಂಡು ಕುಳಿತುಕೊಂಡಿದ್ದ ಹಾಗೆ ಕಂಡುಬಂದಿತು—ಎಂದು ಸಿಂಬಳಗಿರಿಯಿಂದ ಬಂದ ನೀಲಪ್ಪ ಹೇಳಿದ.

ಅಂತೂ, ಚಿಕ್ಕಣ್ಣ ಎಲ್ಲಿದ್ದಾನೆಂಬುದು ಯಾರೊಬ್ಬರಿಗೂ ಪತ್ತೆಯಾಗಲಿಲ್ಲ. ಮೂರು ದಿನಗಳಿಂದಲೂ ಊರನ್ನೇ ಸೇರಿರಲಿಲ್ಲ. ಪಾಪ! ಪರದೇಶಿ, ಚಿಕ್ಕ ಹುಡುಗನೆಂದು ಊರಿನವರಿಗೆಲ್ಲಾ ಮರುಕ. ದಾನಪ್ಪಗಳ ಬಾವಿಯ ತಳದಿಂದ ಗುಳ್ಳೆಗಳು ಏಳುತ್ತಿದ್ದವೆಂದೂ ಆ ಮುಂಚೆ 'ದಡಲ್' ಎಂಬ ಶಬ್ದವಾಯಿತೆಂದೂ ಸೂರಶೆಟ್ಟಿ ಸಂಗಣ್ಣ ತಿಳಿಸಿದ ಮೇಲೆ ಊರಿನವರೆಲ್ಲಾ ಆ ಬಾವಿಯನ್ನು ಶೋಧಿಸತೊಡಗಿದ್ದಾರೆ.

೨

ನಾಗರಕಟ್ಟೆ ಒಂದು ದೊಡ್ಡ ಹಳ್ಳಿ. ಆ ಹಳ್ಳಿಯಲ್ಲಿ ಮುದ್ದಪ್ಪಗಳದು ತುಂಬಾ ಶ್ರೀಮಂತ ಹಾಗೂ ಗೌರವಸ್ಥ ಮನೆತನ. ದುರಾದೃಷ್ಟದಿಂದ ಆ ಮನೆತನದ ಇತ್ತೀಚಿನವರು ಜೂಜಾಟ, ಪುಂಡಾಟಿಕೆಗಳಲ್ಲಿ ತೊಡಗಿ ಆಸ್ತಿ

ಯನ್ನೆಲ್ಲಾ ಕಳೆದುಕೊಂಡರು. ಸಾಲ ವಿಪರೀತ ಏರಿತು. ಹೊಲ ಮನೆಗಳೆಲ್ಲ ಸಾಲಕ್ಕೆ ಹೋದುವು. ಆ ಮನೆತನದಲ್ಲಿ ಉಳಿದುಕೊಂಡಿದ್ದ ಒಬ್ಬನೇ ಒಬ್ಬ ಗಿರಿಯಪ್ಪ ಖೂನಿ ಕೇಸೊಂದರಲ್ಲಿ ಸಿಕ್ಕಿಬಿದ್ದು ಆಜೀವ ಕಠಿಣ ಶಿಕ್ಷೆಗೊಳಗಾದ. ಅವನ ಮುತ್ತಿನಂಥ ಹೆಂಡತಿ ಚೆನ್ನಮ್ಮ, ತನ್ನ ಏಳು ವರ್ಷದ ಮಗು, ಚಿಕ್ಕಣ್ಣನೊಡನೆ, ಹಾಗೂ ಹೀಗೂ, ಕೂಲಿನಾಲಿಮಾಡಿಕೊಂಡು, ಗೌರವಸ್ಥಳಾಗಿ ಬಾಳಬಂಡಿಯನ್ನು ಸಾಗಿಸುತ್ತಾ ಒಂದು ವರ್ಷ ತಳ್ಳಿದಳು.

ಚೆನ್ನಮ್ಮನಿಗೆ ಸಾಲಗಾರರ ತಗಾದಿ ಜಾಸ್ತಿಯಾಯಿತು. ಇದ್ದೊಂದು ಮನೆಯನ್ನೂ ಮೈಮೇಲಿದ್ದ ಅಲ್ಪಸ್ವಲ್ಪ ಚಿನ್ನವನ್ನೂ ಸಾಲಗಾರರಿಗೆ ತೆತ್ತು, ಊರ ಮುಂದಿನ ಸತ್ಯಪ್ಪನವರ ಮನೆ ಮುಂದುಗಡೆ ಜಗಲಿಯ ಮೇಲೆ ನೆರಕೆ ಕಟ್ಟಿಕೊಂಡು ವಾಸಮಾಡತೊಡಗಿದಳು.

ಒಂದು ದಿವಸ ಇದ್ದಕ್ಕಿದ್ದ ಹಾಗೆ ಹುಲಿಕೆರೆಯ ಉಗ್ರಪ್ಪನವರು ಸಾಲದ ಪತ್ರಗಳನ್ನು ತೆಗೆದುಕೊಂಡು ಬಂದು, ಈ ಸಲ ಪೂರ್ತಿ ಹಣವನ್ನು ಪಾವತಿ ಮಾಡಿಬಿಡಬೇಕೆಂದು ಹಟ ಹೂಡಿದರು.

" ನಾನೆಲ್ಲಿಂದ ತಂದುಕೊಡಲಿ ಸಾಹುಕಾರ್ರೆ. ಈ ಸಲ ಬಡ್ಡಿಯನ್ನೇ ತೆಗೆದುಕೊಳ್ಳಿ. ಕೂಲಿನಾಲಿ ಮಾಡಿ ಕೊಡುತ್ತೇನೆ."

" ಅದೆಲ್ಲ ಕೂಡದು ಚೆನ್ನಮ್ಮ, ಪೂರ್ತಿ ಕೊಟ್ಟೇ ತೀರಬೇಕು. ಮುನ್ನೂರು ರೂಪಾಯಿ ಅಸಲು; ಇಪ್ಪತ್ತುನಾಲ್ಕು ರೂಪಾಯಿನಂತೆ ಎಪ್ಪತ್ತೆರಡು ರೂಪಾಯಿ ಬಡ್ಡಿ. ಇದಿಷ್ಟನ್ನು ಕೊಟ್ಟೇ ತೀರಬೇಕು "

" ನನ್ನ ಹತ್ತಿರ ಇನ್ನೇನೂ ಇಲ್ಲ ಯಜಮಾನರೆ. ನನ್ನ ತಂದೆಯವರು ಮಾಡಿಸಿಕೊಟ್ಟ ನಾಲ್ಕು ತೊಲದ ಚೈನು ಇದೆ. ಇದನ್ನು ತೆಗೆದುಕೊಂಡು, ದೊಡ್ಡ ಮನಸ್ಸು ಮಾಡಿ ಪೂರೈಸಿಕೊಳ್ಳಿ."

" ಆಗಲಿ, ಮುನ್ನೂರು ರೂಪಾಯಿ ಅಸಲಿಗೆ ಈ ಚೈನು ಇರಲಿ. ಎಪ್ಪತ್ತೆರಡು ರೂಪಾಯಿಗೆ ಬೇರೆ ಪತ್ರ ಬರೆದುಕೊಡಿ. ಅದರ ಬಡ್ಡಿಯ ಹಣಕ್ಕೆ ನಿಮ್ಮ ಹುಡುಗನನ್ನು ನಮ್ಮ ಮನೆಯಲ್ಲಿ ದುಡಿಯಲು ಕಳಿಸಿಕೊಡಿ."

" ಮಗು ಓದುತ್ತಿದ್ದಾನೆ ಯಜಮಾನ್ರೆ. ಚೆನ್ನಾಗಿ ಓದುತಿದ್ದಾನೆ. ಒಳ್ಳೆ ವಿದ್ಯಾವಂತನನ್ನಾಗಿ ಮಾಡಬೇಕೆಂಬ ಆಶೆ ಇದೆ. ಇನ್ನೂ ಎಂಟು ವರ್ಷದ ಮಗು; ಅವನೇನು ಕೆಲಸ ಮಾಡಿಯಾನು...."

" ನಮ್ಮ ಎಮ್ಮೆಗಳನ್ನು ಮೇಯಿಸಿಕೊಂಡು ಬಂದರಷ್ಟೇ ಸಾಕು. ನಾಳೆ ನಮ್ಮ ಆಳನ್ನು ಕಳಿಸಿಕೊಡುತ್ತೇನೆ. ಅವನ ಸಂಗಡ ತಪ್ಪದೆ ಕಳಿಸಿ ಕೊಡಿ. ಇಲ್ಲದಿದ್ದರೆ ಪೂರ್ತಿ ಹಣವನ್ನು ಕೊಟ್ಟುಬಿಡಿ."

ಚೆನ್ನಮ್ಮನಿಗೆ ಮುಂದೆ ಮಾತನಾಡಲಾಗಲಿಲ್ಲ. ಶ್ರೀಮಂತರು ತಪ್ಪದೆ ಕಳಿಸಿಕೊಡಬೇಕೆಂದು ಹೇಳಿ ಹೊರಟುಹೋದರು.

ಚೆನ್ನಮ್ಮನ ಕರುಳು ಕೊಯ್ದುಹೋಯಿತು. ಮೌನವಾಗಿ ಕಣ್ಣೀರು ಕರೆದಳು. ಅತ್ತರೆ ಕೇಳುವವರಾರು ? ತಲೆ ಚಚ್ಚಿಕೊಂಡರೆ ಬಿಡಿಸಿಕೊಳ್ಳು ವವರಾರು ? " ಅಯ್ಯೋ, ದೇವರೆ, ಇನ್ನೆಷ್ಟು ದಿನ ಈ ಸತ್ವಪರೀಕ್ಷೆ! " ಎಂದು ನಿಟ್ಟುಸಿರು ಬಿಟ್ಟಳು.

ಆ ದಿನ ರಾತ್ರಿ ಚೆನ್ನಮ್ಮನಿಗೆ ಬೇಗ ನಿದ್ರೆ ಹತ್ತಲಿಲ್ಲ. ಚಿಕ್ಕಣ್ಣ ಸುಮ್ಮನಿರದೆ,

" ಏಕಮ್ಮ, ನೀನು ನಿದ್ರೆ ಹೋಗಲಿಲ್ಲ ? " ಎಂದ.

" ನೀನು ಮಲಗಿಕೋ ಮಗು, ಬಹಳ ಹೊತ್ತಾಗಿದೆ."

" ನಿದ್ರೆ ಬರೋಲ್ಲಮ್ಮ."

" ಏಕೆ ಮಗು ? "

" ನಾಳೆ ಪರೀಕ್ಷೆಯಿದೆ. ಪಾಠಗಳನ್ನೆಲ್ಲಾ ಮನಸ್ಸಿನಲ್ಲಿಯೇ ನೆನಸಿ ಕೊಳ್ಳುತಿದ್ದೇನೆ. ಚೆನ್ನಾಗಿ ಬರೆದವರಿಗೆ ಬಹುಮಾನ ಕೊಡುತ್ತಾರಂತೆ."

" ನಾಳೆ ನಿಮ್ಮ ಅಜ್ಜನವರ ಊರಿಗೆ ಹೋಗಬೇಕು ಮಗು. ಕರೆಯ ಲಿಕ್ಕೆ ಬರುತ್ತಾರೆ, ಹೋಗಿ ಬಾ !!

" ಯಾರಮ್ಮಾ ನಮ್ಮ ಅಜ್ಜ ! ನನಗೆ ಗೊತ್ತೇಯಿಲ್ಲವಲ್ಲ. ಯಾವೂರಲ್ಲಿ ದ್ದಾರಮ್ಮ ? "

" ಹುಲಿಕೆರೆಯಲ್ಲಿದ್ದಾರೆ. ಇಲ್ಲಿಗೆ ಮೂವತ್ತು ಮೈಲಿ ದೂರವಿದೆ."

" ಪರೀಕ್ಷೆ ಇದೆಯಲ್ಲಮ್ಮ ? "

" ನಿಮ್ಮ ಉಪಾಧ್ಯಾಯರನ್ನು ಆಗಲೇ ಕೇಳಿದ್ದೇನೆ, ಹೋಗಿ ಬಾ ಮಗು."

" ಇಬ್ಬರೂ ಹೋಗಿಬರೋಣ."

" ಬೇಡ, ನಾನು ಆಮೇಲೆ ಬರುತ್ತೇನೆ. ನನಗೆ ಬಹಳ ಕೆಲಸಗಳಿವೆ."

" ಇಷ್ಟು ದಿನ ಅಜ್ಜನನ್ನು ನಾನು ನೋಡಲೇ ಇಲ್ಲವಲ್ಲಮ್ಮ."

ಹೀಗೆಯೇ ಕೆಲಹೊತ್ತು ಮಾತನಾಡಿ ಮಲಗಿಕೊಂಡರು.

ರಾತ್ರಿ ಕಳೆಯಿತು. ಬೆಳಕು ಹರಿಯಿತು. ಮಧ್ಯಾಹ್ನವಾಯಿತು. ಉಗ್ರಪ್ಪನವರ ಆಳು ಬಂದ. ಚೆನ್ನಮ್ಮ ಗಟ್ಟಿ ಮನಸ್ಸು ಮಾಡಿ, ಚಿಕ್ಕಣ್ಣನನ್ನು ಹೊರಡಿಸಿದಳು. ಚಿಕ್ಕಣ್ಣನಿಗೆ ಯಾವುದೊಂದೂ ತಿಳಿಯದು. ಅಜ್ಜನ ಊರಿಗೆ ಹೋಗುತ್ತೇನೆಂಬುದೊಂದೇ ಅವನ ಉತ್ಸಾಹ!

"ನೀನೂ ಬೇಗ ಬಂದುಬಿಡಮ್ಮ."

ಎಂದ ಚಿಕ್ಕಣ್ಣ ಉತ್ಸಾಹದಿಂದ.

"ಆಗಲಿ ಮಗು."

ಎಂದಳು, ಗೊಂಬೆಯಂತೆ ನಿಂತಿದ್ದ ಚೆನ್ನಮ್ಮ.

ಚಿಕ್ಕಣ್ಣ ಮರೆಯಾಗುವವರೆವಿಗೆ ನೋಡುತ್ತಿದ್ದ ಚೆನ್ನಮ್ಮ ದುಃಖವನ್ನು ತಡೆಯಲಾರದೆ, ಒಳಗೆ ಹೋಗಿ, ದೊಪ್ಪನೆ ಬಿದ್ದುಬಿಟ್ಟಳು........ "ಯಾವ ಭಾಗ್ಯಕ್ಕಾಗಿ ನನ್ನ ಮಗುವಿಗೆ ಇಷ್ಟೊಂದು ಸಡಗರ!" ಎಂದು ಬಿಕ್ಕಳಿಸಿ ಅತ್ತಳು.

೩

ಒಂದು ದಿನ, ಎರಡು ದಿನ, ಮೂರು ದಿನ.......ಒಂದು ತಿಂಗಳು, ಎರಡು ತಿಂಗಳು....ಆರು ತಿಂಗಳು ಸರಿದುಹೋದವು ಚೆನ್ನಮ್ಮ ಹಗಲೆಲ್ಲ ಎಡೆಬಿಡದೆ ದುಡಿಯುತ್ತಿದ್ದಾಳೆ. ಯಾವ ಕೆಲಸದಲ್ಲಿ ತೊಡಗಿದ್ದರೂ ಮಗನ ಚಿಂತನೆಯೇ ಚಿಂತನೆ. ಅವನ ಎಲ್ಲ ಯೋಗಕ್ಷೇಮವನ್ನು ದೇವರ ಪಾಲಿಗೆ ಬಿಟ್ಟು, ಯಂತ್ರದಂತೆ ದುಡಿಯತೊಡಗಿದಳು. ಸಾಲವನ್ನೆಲ್ಲ ತೀರಿಸಿ, ಮಗನನ್ನು ಬೇಗ ಮನೆಗೆ ಕರೆತರಬೇಕೆಂಬುದೊಂದೇ ಆಕೆಯ ಆಶೆ.

ಸತ್ಯಪ್ಪನವರ ಮನೆಯ ಜಗುಲಿಯ ಮೇಲೆ ವಸತಿಯನ್ನೇರ್ಪಡಿಸಿಕೊಂಡದ್ದಕ್ಕಾಗಿ ಪ್ರತಿದಿನ ಬೆಳಗ್ಗೆ ಅವರ ಮನೆಯ ದನದ ಅಕ್ಕೆಯನ್ನು ಬಳಿಯಬೇಕಾಗಿತ್ತು. ಹಗಲೆಲ್ಲ ಯಾರದಾದರೂ ಹೊಲಕ್ಕೆ ಹೋಗಿ ಕೂಲಿ ಮಾಡಿಕೊಂಡು ಬರುತ್ತಿದ್ದಳು. ಸಂಜೆ ಸಮಯದಲ್ಲಿ ಯಾರ ಮನೆಯಲ್ಲಾ

ದರೂ ಕುಟ್ಟಿ ಬೀಸುವವುಗಳಿಗೆ ನೆರವಾಗಿ ಏನಾದರೂ ಸಹಾಯ ಪಡೆಯುತ್ತಿದ್ದಳು.

ಚೆನ್ನಮ್ಮ ಹೆಸರಿಗೆ ತಕ್ಕ ಹಾಗೆ ಸುಂದರಳಾಗಿದ್ದಳು. ಇಪ್ಪತ್ತೆರಡು ವರ್ಷ ತುಂಬುಹರಯದ ಆಕೆ ಗ್ರಹಪೀಡಿತ ಚಂದ್ರಮನಂತೆ ಬಡತನದಲ್ಲಿ ತೊಳಲುತ್ತಿದ್ದಾಳೆ. ಹಳೆಯ ಸೀರೆ ಉಟ್ಟಿದ್ದರೂ ಚೆನ್ನಮ್ಮ ಕಣ್ಣಿಗೆ ಅದೆಷ್ಟು ಅಂದ! ಇದಕ್ಕೆ ತಕ್ಕಹಾಗೆ ತುಂಬಾ ಗೌರವಸ್ಥೆಯಾಗಿ ಮರ್ಯಾದೆಯಿಂದ ಜೀವನವನ್ನೊರೆಯುತ್ತಿದ್ದಳು.

ಒಂದು ದಿನ ಮಟಮಟ ಮಧ್ಯಾಹ್ನ, ಶಿವರಾತ್ರಿ ಮುಂದಿನ ಬೇಸಗೆಯ ಉರಿಬಿಸಿಲು; ಗಾಳಿ ಮೌನವಾಗಿದೆ. ಮರದ ಎಲೆಗಳು ಮಿಸುಗುತ್ತಿರಲಿಲ್ಲ. ಹಕ್ಕಿಗಳು ಮರದ ಕೊಂಬೆಗಳ ಮೇಲೆ ಕುಳಿತು ಹಾಗೇ ನಿದ್ರೆಮಾಡುತ್ತಲಿವೆ. ಪ್ರತಿ ಭಾನುವಾರದಂತೆ ಈ ಭಾನುವಾರವೂ ಚೆನ್ನಮ್ಮ ಕಟ್ಟಿಗೆಯನ್ನು ತರಲು ಅಡವಿಗೆ ಹೋಗಿದ್ದಳು. ಬೆಳಗ್ಗೆ ಏನನ್ನೂ ಊಟಮಾಡದೆ ಹೋಗಿದ್ದರಿಂದ ಮಧ್ಯಾಹ್ನದ ವೇಳೆಗೆ ನಿಶ್ಶಕ್ತಳಾಗಿ ಬಿಟ್ಟಿದ್ದಳು. ಆದರೂ ಏದುತ್ತ ಕಟ್ಟಿಗೆಯ ಭಾರಿ ಹೊರೆಯನ್ನು ತಂದು ಊರಿಗೆ ಒಂದು ಮೈಲಿ ದೂರದಲ್ಲಿದ್ದ ಬಾವಿಯೊಂದರ ದಡದ ಮೇಲೆ ಹಾಕಿ "ಉಶ್" ಎಂದು ಉಸಿರುಗರೆದಳು. ಗಂಟಲು ವಿಪರೀತ ಒಣಗಿದ್ದರಿಂದ ನೀರು ಕುಡಿಯಲು ಬಾವಿಗಿಳಿದಳು. ಅದು ಭಾರೀ ದೊಡ್ಡ ಬಾವಿ. ಸುತ್ತ ಮುತ್ತ ಯಾವೊಬ್ಬ ನರಪಿಳ್ಳೆಯೂ ಇರಲಿಲ್ಲ. ಮೆಲ್ಲಗೆ ಆಳವಾದ ಬಾವಿಯನ್ನು ಇಳಿದು ನೀರು ಕುಡಿದು ಗೋಡೆಯನ್ನು ಹಿಡಿದುಕೊಂಡೇ ಹತ್ತ ತೊಡಗಿದಳು; ಅರ್ಧಮೆಟ್ಟಲು ಹತ್ತಿದಮೇಲೆ ಪಿತ್ತ ಉಮ್ಮಳಿಸಿದಂತಾಗಿ ತಲೆತಿರುಗಿ ಬಿದ್ದುಬಿಟ್ಟಳು "ಅಯ್ಯೋ, ನನ್ನ ಮಗು" ಎಂದು ಚೀರಿದಳು ....ಸಮೀಪದಲ್ಲಿ ಯಾರಾದರೂ ಇದ್ದಿದ್ದರೆ!!!

೪

ತಾಯಿಯಿಂದ ಅಗಲಿ ದೂರದ ಊರಿನಲ್ಲಿದ್ದ ಚಿಕ್ಕಣ್ಣ ನಿತ್ಯವೂ ಕಣ್ಣೀರು ಕರೆದು ಸಣ್ಣಾಗಿ ಹೋಗಿದ್ದ. ಅವನ ನಿತ್ಯ ಕೆಲಸಗಳಲ್ಲಿ ಎಮ್ಮೆಗಳನ್ನು ಮೇಯಿಸಿಕೊಂಡು ಬರುವುದು ಮುಖ್ಯವಾದ ಕೆಲಸವಾಗಿತ್ತು.

ಒಂದು ದಿನ ದನಗಳನ್ನು ಕಾಯಲು ಹೋದಾಗ ಚಿಕ್ಕಣ್ಣನಿಗೆ ವಿಪರೀತ ಜ್ವರ ಬಂದು ಒಂದು ಗಿಡದ ಬುಡದಲ್ಲಿ ಮಲಗಿಕೊಂಡುಬಿಟ್ಟ. ಆ ಸಮಯ ದಲ್ಲಿ ಎಮ್ಮೆ ಕರುವೊಂದು ಅಡವಿಯಲ್ಲಿ ತಪ್ಪಿಸಿಕೊಂಡಿತು. ದನಗಳ ಜೊತೆ ಯಲ್ಲಿ ಎಮ್ಮೆಕರು ಬಾರದ್ದರಿಂದ, ಎಂದೂ ಇಲ್ಲದಂತ ಹೊಡೆತಗಳನ್ನು ಅಂದು ಚಿಕ್ಕಣ್ಣ ತಿನ್ನಬೇಕಾಯಿತು. ಕಿರುವಯಸ್ಸಿನ ಚಿಕ್ಕಣ್ಣನಿಗೆ ಜಗತ್ತು ಬೇಸರ ವಾಯಿತು! ಹೇಗಾದರೂ ಮಾಡಿ ತಾಯಿಯ ಬಳಿಗೆ ಹೋಗಬೇಕೆಂದು ನಿರ್ಧರಿಸಿ, ಯಾರಿಗೂ ಹೇಳದಂತೆ ಹುಲಿಕೆರೆಯಿಂದ ಹೊರಟ. ದಾರಿ ಯುದ್ದಕ್ಕೂ ಅವನು ಪಟ್ಟ ಕಷ್ಟಗಳನ್ನು ವರ್ಣಿಸಲು ಯಾವ ಲೇಖನಿಗೆ ಸಾಧ್ಯ!

ಚಿಕ್ಕ ವಯಸ್ಸು! ಜೊತೆಗೆ ಜ್ವರದಿಂದ ಪೀಡಿತನಾಗಿ – ಸಜೀವ ಅಸ್ಥಿ ಪಂಜರದಂತಾಗಿದ್ದಾನೆ. ಯಾರದೋ, ಒಬ್ಬ ಪುಣ್ಯಾತ್ಮರ ಗಾಡಿಯೊಂದನ್ನು ಹತ್ತಿಕೊಂಡು ಬಂದ ಚಿಕ್ಕಣ್ಣ ಊರ ಮುಂದೆ ಇಳಿದು ಕಾಲುಗಳನ್ನು ಎಳೆಯುತ್ತ ಸತ್ಯಪ್ಪನವರ ಮನೆ ಕಡೆಗೆ ಸಾಗಿದ, ಮನೆ ಸಮೀಪಿಸಿದ ಹಾಗೆಲ್ಲ ಕಂಠ ಬಿಗಿದು ಬಂತು. ತನ್ನ ತಾಯಿ ಕಟ್ಟಿಕೊಂಡಿದ್ದ ನೆರಕೆ ಮನೆಯ ಬಾಗಿಲು ಮುಂದೆ ಬಂದು ನಿಂತ! ಒಳಗಡೆ ದೀಪವಿಲ್ಲ! "ಅಮ್ಮಾ! — ಬಾಗಿಲು ತೆಗೆ" ಎಂದು ನಡುಗುವ ಧ್ವನಿಯಲ್ಲಿ ಕೂಗಿದ. ಅಯ್ಯೋ, ಮಗನನ್ನು ಅಪ್ಪಿ ಮುದ್ದಾಡಲು ಇನ್ನೆಲ್ಲಿಯ ತಾಯಿ!! ಮತ್ತೆ ಮತ್ತೆ ಕೂಗಿದ. ಎಲ್ಲವೂ ಮೌನ!

ಸತ್ಯಪ್ಪನವರ ಹೆಂಡತಿ ತಮ್ಮ ಮಾಳಿಗೆ ಮನೆಯಿಂದ ಹೊರಗೆ ಬಂದು "ಯಾರು ಮಗು ನೀನು?" ಎಂದರು. "ನಾನು ಚಿಕ್ಕಣ್ಣ, ಅಮ್ಮ ಎಲ್ಲಿ?" – ಎಂದ. ಸಿದ್ದಮ್ಮನವರಿಗೆ ಮಾತನಾಡಲಾಗಲಿಲ್ಲ. ಸುಮ್ಮನೆ ನಿಂತುಬಿಟ್ಟರು. "ಅಮ್ಮ ಎಲ್ಲಿಗೆ ಹೋಗಿದ್ದಾಳೆ?" ಎಂದು ಮತ್ತೆ ಕೇಳಿದ. "ಆಮೇಲೆ ಹೇಳುತ್ತೇನೆ, ಬಾ ಮಗು ಒಳಗೆ?" ಎಂದು ಸಿದ್ದಮ್ಮನವರು ಒಳಗೆ ಕರೆದುಕೊಂಡು ಹೋಗಿ ಸ್ನಾನ ಮಾಡಿಸಿ ಊಟಕ್ಕೆ ಹಾಕಿದರು.

"ಅಮ್ಮನನ್ನು ಚೆನ್ನಾಗಿ ಬೈದುಬಿಡುತ್ತೇನೆ"
ಎಂದ ಚಿಕ್ಕಣ್ಣ, ಊಟಮಾಡುತ್ತ.
"ಏಕೆ, ಮಗು" ಎಂದರು, ಸಿದ್ದಮ್ಮ.

"ಅಜ್ಜನ ಊರಿಗೆ ಕಳಿಸುತ್ತೇನೆಂದು ಸುಳ್ಳು ಹೇಳಿ...."

ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದ. ಸಿದ್ದಮ್ಮನವರು ಏನೂ ಉತ್ತರ ಕೊಡದಾದರು.

ಊಟದ ನೆಪ ಮುಗಿಯಿತು....ಸುಮ್ಮನೆ ಕುಳಿತುಕೊಂಡಿದ್ದ ಸಿದ್ದಮ್ಮನವರ ಕಣ್ಣಲ್ಲಿ ನೀರು ಘಳಕ್ಕನೆ ಉದುರಿತು. ಚಿಕ್ಕಣ್ಣ ಅವರ ಮುಖವನ್ನು ನೋಡಿದ.

"ನಿಮ್ಮ ತಾಯಿಯನ್ನು ಬಾವಿಯೊಂದು ನುಂಗಿಬಿಟ್ಟಿತು ಮಗು"— ಎಂದು ಮತ್ತಷ್ಟು ದುಃಖಿಸಿದರು. ಮೊದಲೇ ನಿಶ್ಶಕ್ತನಾಗಿದ್ದ ಚಿಕ್ಕಣ್ಣ ಹಾಗೇ ಮೂರ್ಛೆ ಹೋಗಿಬಿಟ್ಟ....ಗಾಳಿ ಹಾಕಿಯಾಯಿತು....ಬೆಳಕು ಹರಿದಾಗ ಅವನ ಕಣ್ಣು ಒದ್ದೆಯಾಗಿಯೇ ಇತ್ತು!!

ಚಿಕ್ಕಣ್ಣನನ್ನು ಕಂಡು ಊರವರೆಲ್ಲಾ ಮರುಗಿದರು. ಅವನು ಯಾರ ಸಂಗಡವು ಮಾತನಾಡಲೊಲ್ಲ. ಎಲ್ಲಿಯೂ ಕ್ಷಣಹೊತ್ತು ಕುಳಿತುಕೊಳ್ಳಲೊಲ್ಲ. ಹಗಲೆಲ್ಲ ದಿಕ್ಕುಗೆಟ್ಟು ತಿರುಗತೊಡಗಿದ. ಮೂರು ದಿನಗಳಿಂದ ಊರನ್ನೇ ಸೇರಿರಲಿಲ್ಲ. ಏನು ತಿಂದುಕೊಂಡಿದ್ದನೋ ಎಲ್ಲಿರುತ್ತಿದ್ದನೋ ಯಾರಿಗೂ ತಿಳಿಯಲಿಲ್ಲ.

೫

ಮಲಿಯಮ್ಮನ ಕಟ್ಟೆಯ ಬೇವಿನ ಮರದ ಬುಡದಲ್ಲಿ ಕೂತಿದ್ದ-ಎಂದು ಮೂಲೆ ಮನೆಯ ಬೋರಜ್ಜ ಹೇಳಿದ...........ಅಂತು ಚಿಕ್ಕಣ್ಣ ಎಲ್ಲಿದ್ದಾನೆಂಬುದು ಯಾರಿಗೂ ಪತ್ತೆಯಾಗಲಿಲ್ಲ........ದಾನಪ್ಪಗಳ ಬಾವಿಯ ತಳದಿಂದ ಗುಳ್ಳೆಗಳು ಏಳುತ್ತಿದ್ದವೆಂದೂ, ಆ ಮುಂಚೆ "ಧಢಲ್" ಎಂಬ ಶಬ್ದವಾಯಿತೆಂದೂ ಸೂರಶೆಟ್ಟಿ ಸಂಗಣ್ಣ ತಿಳಿಸಿದ ಮೇಲೆ ಊರಿನವರೆಲ್ಲಾ ಆ ಬಾವಿಯನ್ನು ಶೋಧಿಸತೊಡಗಿದ್ದಾರೆ.

ಸರಳ ಹೃದಯಿ ಸರೋಜ

ಗೆಳೆಯ ನಾಗಭೂಷಣ,

ನಾನು ಆ ದಿನ ಬರೆದ ಕಾಗದ ನಿನಗೆ ತಲುಪಿರಬಹುದು. ನೀನು ಉತ್ತರ ಬರೆಯುವುದೇ ಅಪರೂಪವಾಯ್ತಲ್ಲ! ಏಕೆ? ಈ ಪತ್ರಕ್ಕೆ ಮಾತ್ರ ಬೇಗ ಉತ್ತರ ಕೊಡಬೇಕು. ನಾಳೆಯೇ ನನಗೆ ತಲುಪಬೇಕು. ಈಗ ನನ್ನ ಮುಂದೆ ಒಂದು ಮಹಾಸಮಸ್ಯೆ ಬಂದು ಕೂತಿದೆ! ಅದನ್ನು ಬಗೆಹರಿಸುವ ಮಾರ್ಗವೇ ತೋಚದಾಗಿದೆ. ನಿನ್ನ ಸಲಹೆಗಾಗಿ ಕಾಯುತ್ತೇನೆ. ಈ ಕಾಗದವನ್ನು ದಯಮಾಡಿ ಯಾರಿಗೂ ತೋರಿಸಬೇಡ.

ನಾನು ಆ ದಿನ ವಿಕ್ಟೋರಿಯಾ ಕಾಲೇಜಿಗೆ ಭಾಷಣ ಮಾಡಲು ಹೋಗದಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ ಎಂದುಕೊಳ್ಳುತ್ತೇನೆ! ಆದರೆ ಏನೇನಾಗಬೇಕೋ ಅದೆಲ್ಲಾ ಆಗುತ್ತದೆ. ಒಂದೊಂದು ಸಲ ವೈಮುರೆತು ವರ್ತಿಸುತ್ತೇವೆ. ನಮ್ಮ ಕೈಯಲ್ಲಿ ಏನೂ ಇಲ್ಲ ತಾನೆ! ಇಷ್ಟು ದಿನಗಳವರೆಗೆ ಹುಡುಗ ಹುಡುಗಿಯರ ಬಗ್ಗೆ ಬರೆದ ಕತೆ, ಕವನ, ಕಾದಂಬರಿಗಳನ್ನು ನಾನು, ಓದುವಾಗ, "ಈ ಬರಹಗಾರರಿಗೆ ಇದನ್ನು ಬಿಟ್ಟರೆ ಬೇರೆ ಏನೂ ಇಲ್ಲಾಂತ ಕಾಣುತ್ತದೆ." ಎಂದು ಅಲ್ಲಗಳೆದುದುಂಟು. ಆದರೆ ಈಗಿನ ನನ್ನ ಸ್ವಂತ ಅನುಭವದಿಂದ, ವಾಸ್ತವ ಜಗತ್ತು ಕತೆ ಕಾದಂಬರಿಗಳಿಗಿಂತ ವಿಪರೀತವಾಗಿದೆಯೆಂಬುದು ಮನವರಿಕೆಯಾಗಿದೆ.

ನಾನು ಈ ಮುಂದೆ ಹೇಳುವ ಘಟನೆ ನಡೆದು ಇಂದಿಗೆ ಆರು ತಿಂಗಳಾಯಿತು. ಅಂದಿನಿಂದ ನಾನೂ ಆ ಹುಡುಗಿಯೂ ಮಾತನಾಡಿಯೇ ಇಲ್ಲ. ನಿಜವಾಗಿಯೂ ಹೆಣ್ಣುಮಕ್ಕಳ ಹೃದಯ ಪವಿತ್ರವಾದದ್ದು ಕಣಯ್ಯ! ಅವರು ಏನಾದರೂ ತಪ್ಪುಹಾದಿಗೆ ಬಿದ್ದರೆ, ಅದಕ್ಕೆ ಗಂಡಸರೇ ಕಾರಣರೆಂದು ಹೇಳಬಹುದು. ಆದರೆ ಎಲ್ಲಾದನ್ನು ಗಂಡಸರ ಮೇಲೆ ಹೊರಿಸುವುದು ತಪ್ಪಾದರೂ ಆಗಬಹುದು!

ನಮ್ಮ ಕಾಲೇಜಿಗೂ ವಿಕ್ಟೋರಿಯಾ ಕಾಲೇಜಿಗೂ ಮೂರು ಮೈಲಿಯಾಗುತ್ತದೆ. ಈ ನಗರದಲ್ಲಿ ನಾಲ್ಕಾರು ಕಾಲೇಜುಗಳಿವೆ. ಸಾಮಾನ್ಯವಾಗಿ ಸಾಹಿತ್ಯ ಮತ್ತು ಆಟಗಾರಿಕೆಯಲ್ಲಿ ಅನುಭವವುಳ್ಳ ವಿದ್ಯಾರ್ಥಿ ಕೊಂಚ ಹೆಸರು ಪಡೆಯುವುದು ಸ್ವಾಭಾವಿಕ! ನಿನಗೆ ತಿಳಿದ ಹಾಗೆ ನಾನು ಆಟಗಾರನೇನೂ ಅಲ್ಲ! ಸಾಹಿತ್ಯ ನನ್ನ ತವರುಮನೆ ತಾನೆ! ಹಿಂದಿನ ವರ್ಷ ನಾನು ಬಿ. ಎ. ಸೀನಿಯರ್ ತರಗತಿಯಲ್ಲಿದ್ದಾಗಲೇ ನನ್ನ ನಾಲ್ಕು ಪುಸ್ತಕಗಳು ಹೊರಗೆ ಬಂದುದು ನಿನಗೆ ಗೊತ್ತೇ ಇದೆ. ಅಂದಿನಿಂದ ನನ್ನ ಹೆಸರು ಅಲ್ಲಲ್ಲಿ ಅವರಿವರ ಬಾಯಿಯಲ್ಲಿ ಓಡಾಡತೊಡಗಿತು. ಇವರ ಜೊತೆಗೆ ನಾನು ಅಲ್ಲಲ್ಲಿ ಆಮಂತ್ರಿತನಾಗಿ ಭಾಷಣಗಳನ್ನು ಮಾಡಿದ್ದುದೂ ಕವನಗಳನ್ನು ಓದಿದ್ದುದೂ ಇದಕ್ಕೆ ಮೆರುಗು ಕೊಟ್ಟಂತಾಯ್ತು. ಎಲ್ಲವೂ ದೇವರಿಚ್ಛೆ ತಾನೆ!

ಜುಲೈ ತಿಂಗಳಲ್ಲಿ ಸತ್ಯಾಶ್ರಯ ಕಾಲೇಜಿನ ಕನ್ನಡ ಸಂಘದವರು ನನ್ನನ್ನು ಸಂಘದ ಪ್ರಾರಂಭ ಭಾಷಣ ಮಾಡಲು ಆಮಂತ್ರಿಸಿದರು; ಒಪ್ಪಿಕೊಂಡೆ. ಅಂದಿನ ನನ್ನ ಭಾಷಣಕ್ಕೆ ವಿಕ್ಟೋರಿಯಾ ಕಾಲೇಜಿನ ವಿದ್ಯಾರ್ಥಿನಿಯರನೇಕರು ಬಂದಿದ್ದರು. ನಾನು ಅಂದು ಆರಿಸಿಕೊಂಡ ವಿಷಯ "ಕನ್ನಡ ಸಂಘಗಳ ಕರ್ತವ್ಯ" ಎಂಬುದು.

--ನನ್ನ ಭಾಷಣ ಉತ್ತಮವಾಗಿಯೇ ಕೊನೆಗೊಂಡಿತು! ಸಭಿಕರೆಲ್ಲಾ ವೇಳೆಯಾದುದರಿಂದ, ಬೇಗ ಬೇಗ ಹೊರಹೊರಟರು. ನಾನು, ಕಾರ್ಯದರ್ಶಿ ಮತ್ತು ಕೆಲವರ ಸಂಗಡ ಕೊಂಚ ಮಾತನಾಡಿ ಹೊರಗೆ ಬರುವುದರೊಳಗೆ ಸಾಮಾನ್ಯವಾಗಿ ಎಲ್ಲರೂ ಹೋಗಿದ್ದರು. ಕಾರ್ಯದರ್ಶಿ, "ಜಟಕಾ ತರಿಸುತ್ತೇನೆ; ಸ್ವಲ್ಪ ತಡೆಯಿರಿ ಸಾರ್" ಎಂದರು. "ಪರವಾಯಿಲ್ಲ ಬಿಡಿ ಮಾರ್ಕೆಟ್ಟಿನವರೆಗೆ ನಡೆದುಕೊಂಡು ಹೋಗಿ ಅಲ್ಲಿಂದ ಬಸ್ಸಿನಲ್ಲಿ ಹೋಗುತ್ತೇನೆ. ನೀವೂ ಬನ್ನಿ ಹೋಗೋಣ" ಎಂದೆ. "ಇಲ್ಲ ಸಾರ್, ಇನ್ನೂ ಸ್ವಲ್ಪ ಕೆಲಸವಿದೆ. ಈ ಹಾಳು ಕಾರ್ಯದರ್ಶಿ ಕೆಲಸ ಹೀಗೇ ಸಾರ್, ಏನು ಮಾಡೋದು" ಎಂದರು. ಸರಿ, ನಾನೊಬ್ಬನೇ ಮಲ್ಲಿಗೆ ಮಾಲೆಯನ್ನು ತೆಗೆದುಕೊಂಡು ಹೊರಟೆ. ಕಾಲೇಜಿನ ಅಂಗಣದಿಂದ ಸ್ವಲ್ಪ ದೂರದಲ್ಲಿ ನನಗಾಗಿ ನಾಲ್ಕು ಜನ ಕಾಲೇಜಿನ ಹುಡುಗಿಯರು ಕಾದು ನಿಂತಿದ್ದರು.

ಅವರ ಪೈಕಿ ಸರೋಜಳೂ ಒಬ್ಬಾಕೆ. ನನಗೆ ಅಪರಿಚಿತ ಮುಖವಲ್ಲವಾದರೂ ಎಂದೆಂದೂ ಮಾತನಾಡಿರಲಿಲ್ಲ. ಸರಿ, ಆ ನಾಲ್ವರೂ ಒಂದೇ ಸಲ "ನಮಸ್ಕಾರ ಸಾರ್" ಎಂದರು. ನಾನೂ "ನಮಸ್ಕಾರ" ಎಂದು ಹೇಳಿ ಮುಂದೆ ಹೊರಟೆ. "ಸ್ವಲ್ಪ ಮಾತನಾಡುವುದಿದೆ ಸಾರ್" ಎಂದರು. "What is the matter?" (ಏನು ಸಮಾಚಾರ?) ಎಂದೆ. "ಏನೂ ಇಲ್ಲ; ಒಂದು ದಿನ ನಮ್ಮ ಕಾಲೇಜಿನ ಕನ್ನಡ ಸಂಘದಾಶ್ರಯದಲ್ಲಿ ಭಾಷಣ ಮಾಡಬೇಕು. ಅಷ್ಟುಮಾತ್ರ ಕೃಪೆ ಮಾಡಿದರೆ!" ಎಂದು ಹೇಳುತ್ತ ಅವರ ಸ್ತ್ರೀಸಹಜವಾದ ಒಯ್ಯಾರವನ್ನು ಮಾಡದೆ ಬಿಡಲಿಲ್ಲ!! "ಇವರೇ ನಮ್ಮ ಕನ್ನಡ ಸಂಘದ ಕಾರ್ಯದರ್ಶಿನಿ" ಎಂದು ಅವರಲ್ಲಿದ್ದ ಒಬ್ಬ ಹುಡುಗಿ ಸರೋಜಳನ್ನು ಪರಿಚಯ ಮಾಡಿಕೊಟ್ಟಳು. ಸರೋಜ ತಕ್ಷಣ ಬಾಯಿ ಹಾಕಿ, "your room is quite near to our house sir!" (ನಿಮ್ಮ ರೂಮು ನಮ್ಮ ಮನೆಗೆ ಸಮೀಪದಲ್ಲಿಯೇ ಇದೆ ಸಾರ್) ಎಂದಳು. ನಾನು, yes, yes, your's is not a new face to me! (ಅಹುದಹುದು ಅಪರಿಚಿತ ಮುಖವೇನೂ ಅಲ್ಲ!) ಎಂದು ಹಿಂದು ಮುಂದು ಯೋಚನೆ ಮಾಡದೆ ಅಂದುಬಿಟ್ಟೆ. ಎಲ್ಲರೂ 'ಖೊಳ್' ಎಂದು ನಕ್ಕು ಬಿಟ್ಟರು. ಇವರ ಸಂಗಡ ಸರಸ ಸರಿಯಲ್ಲವೆಂದು ಯೋಚಿಸಿ, "ಬರ್ತೇನೆ, ನಮಸ್ತೆ" ಎಂದು ಹೊರಟೆ. "ದಯಮಾಡಿ ಬರಬೇಕು ಸಾರ್" ಎಂದು ಮತ್ತೆ ಕೇಳಿದರು—"ಆಗಲಿ, ಅದಕ್ಕೇನು" ಎಂದು ಹೇಳಿ ಹೊರಟು ಬಂದೆ.

ಈ ಸಮಾಚಾರ ನಡೆದದ್ದು ಜುಲೈ ತಿಂಗಳು ೧೫ನೇ ತಾರೀಕು ರಾತ್ರಿ ಎಂಟು ಗಂಟೆ ಸಮಯದಲ್ಲಿ. ೧೬ನೇ ತಾರೀಖು ಸೋಮವಾರ ನನ್ನ ಕೈಗೆ ಒಂದು ಕಾಗದ ಬಂತು. ಅದರ ಮೇಲೆ Local (ಲೋಕಲ್) ಎಂದು ಬರೆದಿದ್ದರಿಂದ ಯಾರದಿರಬಹುದೆಂದು ಕುತೂಹಲದಿಂದ ತೆಗೆದುನೋಡಿದೆ. ಶ್ರೀಮಾನ್ ಚಂದ್ರಶೇಖರಯ್ಯನವರಿಗೆ—ಅನಂತ ವಂದನೆಗಳು.

ನಾವು ಆ ದಿನ ತಮ್ಮನ್ನು ಭಾಷಣ ಮಾಡಲು ಕೇಳಿಕೊಂಡ ಪ್ರಕಾರ, ಗುರುವಾರ ಸಾಯುಂಕಾಲ ೫ ಗಂಟೆಗೆ ನಮ್ಮ ಕಾಲೇಜಿನ ಸಭಾಂಗಣದಲ್ಲಿ

ಕಾರ್ಯಕ್ರಮವನ್ನು ಏರ್ಪಡಿಸಿದ್ದೇವೆ. ನಮ್ಮ ಪ್ರಿನ್ಸಿಪಾಲರೂ ಬಹಳ ಸಂತೋಷಪಟ್ಟರು. ತಾವು ದಯಮಾಡಿ ಒಪ್ಪುತ್ತೀರೆಂದು ನಂಬಿದ್ದೇನೆ.

ಇಂತು, ಸರೋಜ,
ಕಾರ್ಯದರ್ಶಿನಿ,
ಕನ್ನಡ ಸಂಘ.

ಈ ಕಾಗದವನ್ನು ನೋಡಿ ಮನಸ್ಸು ಡೋಲಾಯಮಾನವಾಯ್ತು! ಆದರೆ, ಅನಿವಾರ್ಯ ಪ್ರಸಂಗ! ಒಪ್ಪಿಕೊಳ್ಳಲೇಬೇಕಾಯ್ತು! ತಕ್ಷಣ ಒಂದು ಕಾರ್ಡು ತೆಗೆದುಕೊಂಡು, ಕ್ಲಾಸಿಗೆ ಹೊತ್ತಾದುದರಿಂದ, ನಾಲ್ಕಕ್ಷರ ಗೀಚಿ ನಾನೇ ಟಪಾಲು ಪೆಟ್ಟಿಗೆಯಲ್ಲಿ ಹಾಕಿಬಂದೆ. ಅದರಲ್ಲಿ ಹೆಚ್ಚೇನೂ ಬರೆದಿರಲಿಲ್ಲ.

ಕಾರ್ಯದರ್ಶಿನಿ ಸರೋಜ—ಇವರಿಗೆ,

ತಮ್ಮ ಪತ್ರ ತಲುಪಿತು; ಆಗಲಿ, ಬರುತ್ತೇನೆ.

ಇಂತು,
ಚಂದ್ರಶೇಖರಯ್ಯ.

ಎಂದಿಷ್ಟೇ ಬರೆದದ್ದು.

ಗುರುವಾರ ನಾನಿನ್ನೂ ಕ್ಲಾಸಿನಲ್ಲಿದ್ದ ಹಾಗೆ ಒಂದು ಕಾರು ಬಂತು. ಡ್ರೈವರ್ ನನ್ನನ್ನೇ ಕೇಳಿಕೊಂಡು ಬಂದ. ನಾನು, ಕೂಡಲೆ ಹೊರಗೆ ಬಂದು 'ಏನಯ್ಯಾ' ಎಂದೆ. 'ಸ್ವಾಮಿ, ಬರಬೇಕಂತೆ' ಎಂದು ಹೇಳುತ್ತಾ ಒಂದು ಚೀಟಿ ಕೊಟ್ಟ. ನೋಡಿದೆ—

ಶ್ರೀಮಾನ್ ಚಂದ್ರಶೇಖರಯ್ಯನವರಿಗೆ, ನಮಸ್ಕಾರಗಳು.

ನಮ್ಮ ಕಾರನ್ನೇ ಕಳಿಸಿದ್ದೇನೆ. ಬೇಗ ಬರುವಿರೆಂದು ನಂಬಿದ್ದೇನೆ.

ಇಂತು ತಮ್ಮ
ಸರೋಜ.

ಎಂದು ಮಾತ್ರ ಬರೆಯಲಾಗಿತ್ತು.

ಸರಿ, ನನ್ನ ಸ್ನೇಹಿತರಿಬ್ಬರನ್ನು ಕರೆದುಕೊಂಡು, ಕಾರಿನಲ್ಲಿ ಹೊರಟೆ. ವಿಕ್ಟೋರಿಯಾ ಕಾಲೇಜಿನಲ್ಲಿ ಆಗಲೆ ಸಭೆ ಸೇರಿತ್ತು. ಹೋದ ಸ್ವಲ್ಪ ಹೊತ್ತಿನಲ್ಲೇ ಕಾರ್ಯಕ್ರಮ ಪ್ರಾರಂಭವಾಯ್ತು. ಪ್ರಿನ್ಸಿಪಾಲ್ ಶಾರದಮ್ಮನವರೇ ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದ ಕೂಡಲೆ, ಅಧ್ಯಕ್ಷಿಣಿಯರು, ಕಾರ್ಯಕ್ರಮದ ಪಟ್ಟಿಯ ಕಡೆ ನೋಡಿ, "ಎರಡನೆ 'ಐಟಂ' ಪ್ರಕಾರ ಭಾಷಣಕಾರರ ಪರಿಚಯ—ಸರೋಜ ಅವರಿಂದ" ಎಂದು ಓದಿದರು. ಕೂಡಲೆ ಸರೋಜ ಚಕ್ಕನೆ ಹಾರಿಬಂದು, ಮಾತು ಶುರುವು ಮಾಡುವುದಕ್ಕೆ ಮುಂಚೆ, ನಾನು "ನಾಟ್ ನೆಸೆಸರಿ!" ಎಂದೆ. ಕಣ್ಣುತುಂಬ ಕಪ್ಪು ಬಳಿದುಕೊಂಡು, ಮುಖಕ್ಕೆಲ್ಲ ಪೌಡರ್ ಹಾಕಿಕೊಂಡ ಡಬ್ಬಲ್ ಜಡೆಯ ಸಿಬುರಿನಂಥ ಹುಡುಗಿ ಎದ್ದು, "ನೊ, ನೊ, ಸರ್, ಇಟ್ ಈಸ್ ನೆಸೆಸರಿ" ಎಂದಳು. ಎಲ್ಲರೂ ಚಪ್ಪಾಳೆ ಹೊಡೆದು ನಕ್ಕು ನಕ್ಕು ಬಿದ್ದರು. ಸರೋಜ ಸೆರಗಿನಲ್ಲೇ ನಗುತ್ತಿದ್ದಳು. ಇನ್ನೇನು, ತೆಪ್ಪಗಾದೆ. ಪರಿಚಯ ಭಾಷಣ ಪ್ರಾರಂಭವಾಯ್ತು. ಇಷ್ಟೆಲ್ಲ ವಿಶದವಾಗಿ ಬರೆಯುತ್ತಿರುವುದಕ್ಕೆ ನಿನಗೆ ಆಶ್ಚರ್ಯವಾಗಬಹುದು. ಪತ್ರ ಇಷ್ಟೊಂದು ಉದ್ದವಾಯ್ತೆಂದರೆ ಯಾರಾದರೂ ಆಶ್ಚರ್ಯಪಡುವ ಮಾತೇ ಸರಿ. ಆದರೆ, ಏನು ಮಾಡಹೋಗಿ ಏನು ಆಗುತ್ತದೆ ಎಂಬುದನ್ನು ತಿಳಿಸಬೇಕೆಂದೇ ಇಷ್ಟು ದೀರ್ಘ ಪತ್ರ ಬರೆಯುತ್ತಲಿದ್ದೇನೆ.

ಸರೋಜ ಪರಿಚಯ ಭಾಷಣ ಪ್ರಾರಂಭಮಾಡಿ,

"ಅಧ್ಯಕ್ಷರೆ, ಹಾಗೂ ಸಹೋದರಿಯರೆ,

ಈ ದಿನದ ನಮ್ಮ ಅತಿಥಿಗಳನ್ನು ಪರಿಚಯ ಮಾಡಿಕೊಡುವುದೆಂದರೆ ಸೂರ್ಯನನ್ನು ತೋರಿಸಿದ ಹಾಗೆ! ಶ್ರೀಮಾನ್ ಚಂದ್ರಶೇಖರಯ್ಯನವರ ಹೆಸರು ಸಾಹಿತ್ಯಾಭಿರುಚಿಯುಳ್ಳ ಪ್ರತಿಯೊಬ್ಬರಿಗೂ ಗೊತ್ತು. ಈಗ ಶ್ರೀಯುತರು ಸೇಂಟ್ ಫಿಲಾಮಿನಾ ಕಾಲೇಜಿನಲ್ಲಿ ಎಂ. ಎ. ಜೂನಿಯರ್ ತರಗತಿಯಲ್ಲಿ ಅಭ್ಯಾಸ ಮಾಡುತ್ತಲಿದ್ದಾರೆ. ಇವರ ಸಾಹಿತ್ಯ ಕೃತಿಗಳ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಇವರ ಆ ಕೃತಿಗಳೇ ಇವರನ್ನು ಈ ದಿನ ಇಲ್ಲಿಗೆ ಬರುವಂತೆ ಮಾಡಿವೆ; ಉತ್ತಮ ವಾಗ್ಮಿಗಳೂ ಅಹುದು! ತುಂಬಾ ಸರಳಜೀವಿಗಳು. ಇವರ ಕೃತಿಗಳಲ್ಲಿ ಹೆಣ್ಣುಮಕ್ಕಳಿಗೆ

ತುಂಬಾ ಗೌರವವನ್ನು ಕೊಟ್ಟುಕೊಂಡು ಬಂದಿರುವುದನ್ನು ನೀವು ಕಾಣ ಬಹುದು. ಇವರ ದೃಷ್ಟಿಪಥದಲ್ಲಿ ನೀವುಗಳೆಲ್ಲಾ ಸಹೋದರಿಯರಂತೆ....'' ಎಂದ ಕೂಡಲೆ ಚಪ್ಪಾಳೆಯೇ ಚಪ್ಪಾಳೆ. ಅಷ್ಟರಲ್ಲಿ ಒಬ್ಬ ಕಿಡಿಗೇಡಿ ಹುಡುಗಿ "ನೀವು'' ಎಂದು ಒಂದು ಮಾತಿನ ಚೂ ಬಿಟ್ಟಳು. ಮತ್ತಷ್ಟೂ ಚಪ್ಪಾಳೆ! ಕೂಡಲೆ ಅಧ್ಯಕ್ಷಿಣಿಯರು 'ಸೈಲೆನ್ಸ್' ಎಂದು ಗಲಾಟೆಯನ್ನು ಕಡಿಮೆ ಮಾಡಿದರು. ಹುಡುಗಿಯರು ನಗಲಿಕ್ಕೆ ಶುರು ಮಾಡಿದರೆ ತೀರಿತು, ಮೈ ಮರೆತುಬಿಡುತ್ತಾರೆ! ಅಷ್ಟರಲ್ಲೇ ಸರೋಜ ನನ್ನ ಕಡೆ ನೋಡಿದ್ದರಿಂದ 'ಸಾಕು' ಎಂದು ಸನ್ನೆ ಮಾಡಿದೆ. ಮತ್ತೆ ಪ್ರಾರಂಭ ಮಾಡಿ, "ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಅವರ ಭಾಷಣ ಶಕ್ತಿಯನ್ನು ಇಷ್ಟರಲ್ಲೇ ನೀವುಗಳೆಲ್ಲಾ ಕಾಣುತ್ತೀರಿ........'' ಎಂದು ಮುಂತಾಗಿ ಹೇಳಿ ಮುಗಿಸಿದಳು. ನನ್ನ ಗೆಳೆಯರಿಬ್ಬರಿಗೆ ನಗೆ ಎಲ್ಲೆಲ್ಲಿಯೂ ನಿಲ್ಲಲೊಲ್ಲದು. ಅವರ ನಗೆ ಬಹಳ ಬೆಲೆಯುಳ್ಳದ್ದೋ ಎನ್ನುವ ಹಾಗೆ ಕರವಸ್ತ್ರಗಳಲ್ಲೇ ನಗುತ್ತಿದ್ದರು.

ನನ್ನ ಅಂದಿನ ವಿಷಯ, "ಸ್ತ್ರೀ ವಿದ್ಯಾಭ್ಯಾಸದ ಮುಖ ಎತ್ತ ತಿರುಗಬೇಕು'' ಎಂದು. ಅಂದು ಬಹಳ ಉತ್ತಮವಾಗಿ ಮಾತನಾಡಿದೆ. ಸುಮಾರು ಒಂದೂಮುಕ್ಕಾಲು ಗಂಟೆ ಮಾತನಾಡಿರಬಹುದು.

ಸಭೆ ಮುಗಿದ ಕೂಡಲೆ, ಪ್ರಿನ್ಸಿಪಾಲ್ ಶಾರದಮ್ಮನವರು "ಬನ್ನಿ, ನಮ್ಮ ಲೈಬ್ರರಿ, ಲೆಬೊರೇಟರಿ ಮೊದಲಾದುವುಗಳನ್ನು ನೋಡಿಕೊಂಡು ಹೋಗಿ'' ಎಂದು ಹೇಳಿ ಅವರ ಆಫೀಸುರೂಮಿಗೆ ಕರೆದುಕೊಂಡು ಹೋದರು. ಅಷ್ಟರಲ್ಲಿ ನನ್ನ ಗೆಳೆಯರಿಬ್ಬರೂ ಹೊರಟೇಹೋಗಿದ್ದರು!! ನಾವು ಕಾಲೇಜ ನ್ನೆಲ್ಲಾ ಸುತ್ತಿಕೊಂಡು ಬರುವುದರೊಳಗೆ "ಟಿಫಿನ್'' ಬಂದಿತ್ತು. ಎಲ್ಲ ಸರೋಜಳದೇ ಕಾರುಭಾರ. ತಿಂಡಿ ತಿನ್ನುವುದಾದಕೂಡಲೆ, ತಕ್ಷಣ, ಸರೋಜ, ನನ್ನ ಕಡೆ ಬಂದು,"ನಿಮಗೆ ಕಾಫೀನೋ ಟೀಯೋ ?" ಎಂದಳು. "ಯಾವುದಿದೆಯೋ ಅದು" ಎಂದೆ. ಸರೋಜಳ ಕೆನ್ನೆಯ ಮೇಲೆ ಒಂದು ನಗೆಯ ಸೆಳಕು, ಹರಿದುಹೊಯ್ತು! ಹೀಗೆಲ್ಲಾ ಬರೆಯುತ್ತೇನೆಂದು ಬೇರೆ ಭಾವಿಸಬೇಡ ನಾಗಭೂಷಣ್ !!

ಸರಿ, ನಾವು ಮನೆಗೆ ಹೊಂಟಾಗ ರಾತ್ರಿ ಎಂಟು ಗಂಟೆ! ಹೊರಗೆ ಬಂದಕೂಡಲೆ, ಪ್ರಿನ್ಸಿಪಾಲ್ ಶಾರದಮ್ಮನವರು, "ನೀವಿರುವುದೆಲ್ಲಿ? ಮನೆ ಇಲ್ಲಿಗೆ ದೂರವಾಗುತ್ತದೆಯೋ ಹೇಗೋ!!" ಎಂದರು.

"ಅಹುದು, ನಾನಿರುವುದು ಬಸವನಗುಡಿಯ ಕೊನೆಯ ಭಾಗದಲ್ಲಿ. ಇಲ್ಲಿಗೆ ಸುಮಾರು ಐದು ಮೈಲಿಯಾಗುತ್ತೆ." ಎಂದೆ.

"ಹಾಗಾದರೆ, ಬಹಳ ದೂರವಾಯ್ತಲ್ಲ!" ಎಂದರು.

"ಪರವಾಯಿಲ್ಲ, ಸಿಟಿ ಬಸ್‌ಗಳಿವೆ; ಹೋಗ್ತೇನೆ" ಎಂದೆ. ಸರೋಜ ಮಧ್ಯದಲ್ಲಿಯೇ ಬಾಯಿಹಾಕಿ,

"ಇಲ್ಲ ಮದರ್, ಇವರು ನಮ್ಮ ಮನೆಗೆ ಸಮೀಪದಲ್ಲಿಯೇ ಇದ್ದಾರೆ. ಹೇಗೂ ನಮ್ಮ ಕಾರು ಇನ್ನೂ ಇಲ್ಲೇ ಇದೆ. ಅದರಲ್ಲಿಯೇ ಬರಬಹುದಲ್ಲ." ಎಂದು, ನನ್ನ ಕಡೆಗೆ ತಿರುಗಿ, "ವೈ ಸರ್, ಯು ಕೆನ್ ಕಮ್ ಇನ್ ಅವರ್ ಕಾರ್" ಎಂದಳು. "ಆಗಲಿ ಅದಕ್ಕೇನು!" ಎಂದೆ.

ಅಂತು, ಕಡೆಗೆ ಸರೋಜಳ ಕಾರಿನಲ್ಲಿಯೇ ಹೊರಟೆ. ಕಾರು ಹೊರಟ ಕೂಡಲೆ, ಸರೋಜಳ ಗೆಳತಿಯರೆಲ್ಲ, "ಹಲೋ, ಸರೋಜ, ವಿಷ್ ಯು ಸಕ್‌ಸೆಸ್" ಎಂದು ಕೈಬೀಸಿದರು.

ನಾನು ಡ್ರೈವರನ ಪಕ್ಕದ ಸೀಟಿನಲ್ಲಿ ಕುಳಿತೆ. ಸರೋಜ ಹಿಂದಿನ ಸೀಟಿನಲ್ಲಿಯೇ ಕುಳಿತಳು. ಅರ್ಧ ದಾರಿ ಹೋಗುವವರೆಗೆ ನಾವು 'ತುಟಿ ಪಿಟಕ್' ಎನ್ನಲಿಲ್ಲ. ಆಮೇಲೆ ಸರೋಜ ಮಾತಾನಾಡಿಯೇಬಿಟ್ಟಳು.

"ನಿಮ್ಮ ಭಾಷಣ ಬಹಳ ಚೆನ್ನಾಗಿತ್ತು!" ಎಂದಳು.

"ಸಂತೋಷ" ಎಂದೆ.

"ಮಾತಿನಂತೆ ನಡೆಯುವುದು ಕಷ್ಟ ಎಂದುಕೊಳ್ಳುತ್ತೇನೆ."

"ಅಹುದು, ನಿಜ."

"ನೀವು ಇದಕ್ಕೆ ಹೊರತು ಎಂದುಕೊಳ್ಳುತ್ತೇನೆ."

"ನೀವು ಮಾತನಾಡುವುದು ಅರ್ಥವಾಗುತ್ತಿಲ್ಲ!"

"ನಿಮ್ಮ ಮಾತಿಗೆ ಬೆಲೆ ಇದೆಯೆಂದು ಭಾವಿಸಿದ್ದೇನೆ!"

"ಅಹುದು! ಏಕೆ?"

"ಹಾಗಾದರೆ ನನಗೆ ನಿರಾಶೆಯಾಗಲಾರದು" ಎಂದಳು ಸರೋಜ. ನನಗೇಕೋ ಕೊಂಚ ಬಾಯಿ ಬಿಗಿ ಹಿಡಿಯಬೇಕೆಂದೆನಿಸಿತು. ಮಾತು ಕಡಿಮೆ ಮಾಡಿದೆ. ಅಷ್ಟರಲ್ಲಿ ಕಾರು ಮನೆಯನ್ನು ಸಮೀಪಿಸಿತು.

"ನಾನು ಇಲ್ಲೇ ಇಳಿದು ರೂಮಿಗೆ ಹೋಗಬಹುದಲ್ಲ! ಸಮೀಪ ವಾಗುತ್ತೆ" ಎಂದೆ.

"ಆಗಬಹುದು; ಈ ನನ್ನ ಲೇಖನಗಳನ್ನು ನೋಡಿಕೊಡಿ" ಎಂದು ನಾನು ಇಳಿದಕೂಡಲೆ ಕೈಗೊಂದು ಪುಸ್ತಕವನ್ನು ಕೊಟ್ಟಳು. ನನ್ನ ಕೈಲಿದ್ದ ಮಲ್ಲಿಗೆ ಮಾಲೆಯನ್ನು, ರೂಮಿಗೆ ತೆಗೆದುಕೊಂಡುಹೋದರೆ ಉಪಯೋಗವಿಲ್ಲ ವೆಂದು ತಿಳಿದು, "ಈ ಮಾಲೆಯನ್ನು ತೆಗೆದುಕೊಳ್ಳಿ" ಎಂದೆ.

"ಏಕೆ, ರೂಮಿಗೆ ತೆಗೆದುಕೊಂಡುಹೋಗಿ" ಎಂದಳು.

"ರೂಮಿಗೆ ತೆಗೆದುಕೊಂಡುಹೋದರೆ ಕೆಟ್ಟುಹೋಗುತ್ತೆ" ಎಂದೆ.

"ಹಾಗಾದರೆ ನಿಮ್ಮ ಹೂಮಾಲೆಗಳನ್ನು ಉಪಯೋಗಿಸಲು ಒಬ್ಬರು ಬೇಕು" ಎಂದಳು.

"I don't understand. I think you are a logic Student"

"I hope, this garland has got some significance !"

"ಗುಡ್‌ನೈಟ್" ಎಂದು ಹೇಳಿ ಹೊರಟುಬಿಟ್ಟೆ.

ಗೆಳೆಯ ನಾಗಭೂಷಣ, ಇದೆಲ್ಲ ನಿನಗೆ 'ಕಲ್ಪನೆ' ಎನ್ನಿಸಬಹುದು. ಆದರೆ, ಇದು ನಿಜವಾದ ಸಂಗತಿ. ಆದಕ್ಕಾಗಿಯೇ ಇಷ್ಟು ವಿಶದವಾಗಿ ಬರೆಯುತ್ತಿದ್ದೇನೆ.

ರೂಮಿಗೆ ಬಂದಕೂಡಲೆ ಸರೋಜ ಕೊಟ್ಟ ಕೈಬರಹದ ಪುಸ್ತಕವನ್ನು ತೆಗೆದೆ. ನನಗಾಶ್ಚರ್ಯವಾಯ್ತು! ತನ್ನ ಗೆಳತಿಯರ ಸಂಗಡ ತೆಗೆಸಿಕೊಂಡ ಫೋಟೋವನ್ನು ಪುಸ್ತಕದ ಮೊದಲನೆಯ ಪುಟದಲ್ಲಿ ಅಂಟಿಸಿದ್ದಳು. ನಾಲ್ಕಾರು ಸಲ ದಿಟ್ಟಿಸಿ ನೋಡಿದೆ! ಹಾಗೇಕೆ ನೋಡಿದೆನೆಂದು ನನಗೇ ಅರ್ಥವಾಗುತ್ತಿಲ್ಲ! ಸರಿ, ಆ ಎಲ್ಲಾ ಕೃತಿಗಳನ್ನು ಓದಿದೆ. ಅದರಲ್ಲಿ ಏಕೀಕರಣದ ಬಗ್ಗೆ ಬರೆದ ಒಂದು 'ಏಕಾಂಕ' ಬಹಳ ಚೆನ್ನಾಗಿತ್ತು. ಕೆಲವು 'ಕಲ್ಪನಾ' ದಿನಚರಿಗಳು ಹೃದಯಂಗಮವಾಗಿದ್ದವು............

ಸರೋಜಳ ಅಣ್ಣ, 'ಪ್ರಭು,' ದೆಹಲಿಯಲ್ಲಿ ಒಂದು ದೊಡ್ಡ ಹುದ್ದೆಯಲ್ಲಿದ್ದಾನೆ. ಅವನಿಗೂ ನನಗೂ ಒಂದು ಬಗೆಯ ಗೆಳೆತನ. ಆದರೆ, ನಾನು ಅವರ ಮನೆಗೆ ಎಂದೂ ಹೋಗಿರಲಿಲ್ಲ. ಅವನಿಗೂ ಸಾಹಿತ್ಯದಲ್ಲಿ ತುಂಬಾ ಅಭಿರುಚಿ ಅದಕ್ಕಾಗಿ ಅವನಿಗೆ ನನ್ನ ಮೇಲೆ ಇಲ್ಲದ ಪ್ರೀತಿ! ಅಲ್ಲದೆ, ಅವನು ಬಹಳ ವಿಚಾರವಂತ.

ಪ್ರಭು ತನ್ನ ಹೆಂಡತಿ ಸುಶೀಲಮ್ಮನ ಸಂಗಡ ಒಂದು ತಿಂಗಳ ಹಿಂದೆ ಬಂದಿದ್ದ. ಸರೋಜ ತನ್ನ ಅತ್ತಿಗೆಯ (ಸುಶೀಲಮ್ಮನ) ಮೂಲಕ ತನ್ನ ಅಣ್ಣನಿಗೆ ತನ್ನ ಬಯಕೆಯನ್ನು ತಿಳಿಸಿದ್ದಳೆಂದು ನನಗೆ ಆಮೇಲೆ ತಿಳಿದು ಬಂತು. ಪ್ರಭು ಪ್ರತಿದಿನ ನನ್ನ ರೂಮಿಗೆ ಬರುತ್ತಿದ್ದಂತೆಯೇ ಒಂದು ದಿನ ಬಂದ. ನಾನು ನೆಹರೂ ಜೀವನ ಚರಿತ್ರೆಯನ್ನು ಓದುತ್ತಾ ಕುಳಿತಿದ್ದೆ.

"ನಮಸ್ತೆ, ಶೇಖರ್!" ಎಂದ.

"ನಮಸ್ತೆ, ನಮಸ್ತೆ! ಅಲ್ಲವಯ್ಯಾ, ನಿನ್ನೆ ಬರ್ತೀನೆಂದು ಹೇಳಿದ ಆಸಾಮಿ ಬರಲೇಬಾರ್ದೋ!" ಎಂದೆ.

"ಏನೋ, ಬರಲಿಕ್ಕೇ ಆಗಲಿಲ್ಲ ಬಿಡು! ಮೊನ್ನೆ ಇಲ್ಲಿಂದ ಹೋದೆ ನಲ್ಲಾ ಆಲಾಗಾಯ್ತು ಯಾವುದೋ ಒಂದು ವಿಷಯದಲ್ಲಿ ಮಾತುಕತೆ ನಡೆಯಿತು................"

"ಅದೇನಯ್ಯಾ ಅಂಥಾದ್ದು 'ಕಾಶ್ಮೀರದ' ಸಮಸ್ಯೆ!"

"ಹೀಗೇ ಇರುತ್ತಲ್ಲ ಪ್ರಪಂಚ! ಜೀವನದಲ್ಲಿ ಆಸೆ, ಆಕಾಂಕ್ಷೆ, ಬಯಕೆ ಅಂತ ಏನೇನೋ ಇವೆಯಲ್ಲ! ನಿನಗೆ ಹೇಳಬೇಕೇ ಸಾಹಿತಿಗೆ!!"

"ಅದೇನು ಹೇಳಬಾರದೇ!—ಯಾರಿಗೆ ಬಯಕೆ? ಗರ್ಭಿಣಿ ಸ್ತ್ರೀಯರಿಗೆ ಬಯಕೆ ಆಗುತ್ತೇಂತ ಕೇಳಿದ್ದೇವೆ!............ಈಗ............"
ಎನ್ನುತ್ತಿದ್ದ ಹಾಗೆ ಮಧ್ಯದಲ್ಲಿ ಬಾಯಿಹಾಕಿ,

"ಇರಲಿ ಬಿಡು. ಆ ಪುರಾಣ ಈಗೇಕೆ!........ನಮ್ಮ ಸರೋಜ ಕೆಲವು ಕತೆ, ಲೇಖನ, ನಾಟಕಗಳನ್ನು ಬರೆದಿದ್ದಾಳೆ ನೋಡಿದ್ದೀಯಾ? ಹೇಗಿವೆ? ...."

"ನಾನು ನೋಡಿಲ್ಲ!" ಎಂದು ನಕ್ಕೆ.

"ಅಬ್ಬ! ನನಗೇ ನಾಮ ಹಾಕುತ್ತೀಯಲ್ಲ! ಸರೋಜಾನೇ ಹೇಳಿದಳು ಶೇಖರು ಕಡೆ ಕೊಟ್ಟದ್ದೆ – ಅಂತ."

"ಚೆನ್ನಾಗಿವೆ; ಪರವಾಯಿಲ್ಲ. ಒಳ್ಳೆ ಬರಹಗಾತಿಯಾಗುತ್ತಾಳೆ ಸರೋಜ. ಸ್ವಲ್ಪ ಸಲಹೆ ಕೊಡುವವರು ಬೇಕು – ಅಷ್ಟೆ!"

"ಸಲಹೆ ಕೊಡುವವರು ಸಿಕ್ಕಬೇಕಲ್ಲ!"

"ಹುಡುಕಿದರೆ ಸಿಕ್ಕೇ ಸಿಕ್ಕುತ್ತಾರೆ. ಒಳ್ಳೆ ಪುಸ್ತಕಗಳನ್ನೋದಿದರೆ ತಾನಾಗಿಯೇ ಬರುತ್ತೆ. ಯಾರೂ ಕಲಿಸಬೇಕಾಗಿಲ್ಲ."

"ಇನ್ನೇನು ಈ ವರ್ಷ ಬಿ. ಎ. ಮುಗಿಯುತ್ತೆ. ಲಗ್ನ ಮಾಡಿ ಬಿಡಬೇಕು."

"ಹೌದೌದು, ಸುಮ್ಮನೆ ಬಿಡುವುದರಿಂದ ಪ್ರಯೋಜನವಿಲ್ಲ. ನಮ್ಮ ತಂಗಿ ಕೂಡ ಈ ವರ್ಷ ಎಸ್. ಎಸ್. ಎಲ್. ಸಿ. ಮುಗಿಸುತ್ತಾಳೆ. ಲಗ್ನ ಮಾಡಿಬಿಡುತ್ತೇವೆ. ಹೆಚ್ಚು ಕಾಲ ಬಿಡುವುದೊಳ್ಳೆಯದಲ್ಲ!!"

"ನಾನು ದೆಹಲಿಗೆ ಹೋಗುವುದರೊಳಗೆ ಇತ್ಯರ್ಥಮಾಡಿ ಹೋಗಬೇಕಾಗಿದೆ ನಮ್ಮ ತಂದೆ ನನ್ನ ಮೇಲೆ ಭಾರ ಹಾಕಿದ್ದಾರೆ. ನಮ್ಮ ತಾಯಿ ಇದ್ದಿದ್ದರೆ ನಮಗೆ ಇಷ್ಟೆಲ್ಲ ಯೋಚನೆ ಇರುತ್ತಿರಲಿಲ್ಲ!"

"ಹಿಂದಿನದನ್ನು ಬಿಟ್ಟು, ಮುಂದೆ ಮಾಡಬೇಕಾದುದನ್ನು ಯೋಚನೆ ಮಾಡಬೇಕು. ನಿನಗೇನು ವ್ಯವಹಾರಜ್ಞಾನವಿಲ್ಲವೆ! ಅಂತು ಒಳ್ಳೆ ವರನನ್ನು ನೋಡಯ್ಯ, ಪಾಪ, ಬೆಣ್ಣೆಯಂಥ ಹುಡುಗಿ!"

"ಜುಲೈ ತಿಂಗಳಲ್ಲಿ ಅವರ ಕಾಲೇಜಿಗೆ ಪ್ರಾರಂಭ ಭಾಷಣ ಮಾಡಲು ಹೋಗಿದ್ದೆಯಂತೆ! ಹೌದೆ?"

"ಅದನ್ಯಾರಯ್ಯ, ಹೇಳಿದ್ದು ನಿನಗೆ?"

"ಇನ್ನಾರು, ಸರೋಜ! ನನ್ನ ಸಂಗಡ ಮಾತನಾಡುವುದೆಂದರೆ ಆಕೆಗೆ ಬಹಳ ಸಲಿಗೆ. ಅವರ ಕಾಲೇಜಿನ ಸುದ್ದಿಯನ್ನೆಲ್ಲಾ ಹೇಳುತ್ತಾಳೆ!"

"................................"

"ನೀನು ಬೇರೇನೂ ಭಾವಿಸದಿದ್ದರೆ ಒಂದು ಮಾತು ಕೇಳುತ್ತೇನೆ, ಶೇಖರ್!"

"ನನ್ನ ಸಂಗಡ ಮಾತನಾಡಲು ಸಂಕೋಚಪಡಬೇಕೆ?"

"ನನ್ನ ಸರೋಜನನ್ನ........ ..ನೀನು ಒಪ್ಪಿದರೆ........!"

"................................"

"ಏಕೆ? ಸುಮ್ಮನಾದೆ? ಮನಸ್ಸಿಗೇನೂ ತಿಳಿದುಕೊಳ್ಳಬೇಡ"

"ಛೇ! ಛೇ! ಅದೆಂಥ ಮಾತು? ನನ್ನ ತಂಗಿಯ ಬಗ್ಗೆ ನನಗೂ ಹೀಗೆಯೇ ಕಾಳಜಿಯಿದೆ ಪ್ರಭು! ಅಣ್ಣನಾದ ಪ್ರತಿಯೊಬ್ಬನೂ ಅವರವರ ತಂಗಿಯರ ಕ್ಷೇಮಚಿಂತನೆ ಮಾಡುವುದು ಕರ್ತವ್ಯ!"

"................................"

"ಅದಕ್ಕೇನು, ಮಾತನಾಡು ಪ್ರಭು! ಆದರೆ ನಿನಗೆ ನಿರಾಶೆಯನ್ನುಂಟು ಮಾಡಬೇಕಾಯ್ತಲ್ಲಾ ಎಂದು ಮನಸ್ಸಿಗೆ ವ್ಯಥೆ– ಅಷ್ಟೆ!"

"ಏಕೆ?"

"ನಾನು ಹನ್ನೆರಡು ವರ್ಷದವನಿದ್ದಾಗಲೇ ನನಗೆ ಲಗ್ನಮಾಡಿ ಬಿಟ್ಟಿದ್ದಾರೆ ಪ್ರಭು!!" ಅದನ್ನೆಲ್ಲ ಈಗ ನೆನಸಿಕೊಂಡೇನು ಫಲ! ನನ್ನಂತೆ ಎಷ್ಟು ಜನ ತರುಣರು ಬಾಲ್ಯವಿವಾಹ ಮಾಡಿಕೊಂಡಿದ್ದಾರೆಯೋ ಯಾರಿಗೆ ಗೊತ್ತು, ಆದದ್ದಾಯ್ತು! ಕೆರೆಯ ಹಿಂದಕ್ಕೆ ಹೋದ ನೀರು ಕೆರೆಗೆ ಬಂದೀತೆ! ಅಂತು ಸರೋಜಗೆ ಒಳ್ಳೆ ವರನನ್ನು ನೋಡುವ ಭಾರ ನಿನ್ನ ಪಾಲಿಗಿದೆ."

"ನಾನು ಕೇಳಿದ್ದಕ್ಕೆ ಕ್ಷಮಿಸು ಶೇಖರ್."

"ಛೇ! ಛೇ! ಅದಕ್ಕೇನು ಪ್ರಭು! ಎಳ್ಳಷ್ಟೂ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಇದೆಲ್ಲ ಲೋಕವ್ಯವಹಾರ.!"

"ಸರಿ, ಸ್ವಲ್ಪ ತಿರುಗಾಡಿಕೊಂಡು ಬರೋಣ ನಡೆ ಶೇಖರ್."

"ಅಹುದು, ಕೊಂಚ ತಿರುಗಾಡಿಕೊಂಡು ಬರೋಣ ನಡೆ. ಲಾಲ್ ಬಾಗಿನ ಕಡೆಹೋಗಿ ಸೃಷ್ಟಿ ಸೌಂದರ್ಯವನ್ನು ನೋಡಿ, ಈ ತಾಪತ್ರಯದ ಜಗತ್ತನ್ನು ಕೊಂಚಹೊತ್ತು ಮರೆಯೋಣ!" ಎಂದು ನಾನು ಹೇಳಿದ ಕೂಡಲೆ ರೂಮು ಬಿಟ್ಟು ಹೊರಟೆವು. ....

ಇದಾದ ಮೂರು ದಿನಗಳಲ್ಲಿ ಪ್ರಭು, ರಜೆ ಮುಗಿದುದರಿಂದ, ದೆಹಲಿಗೆ ಹೊರಟುಹೋದ. ಮನೆಯಲ್ಲಿ ಉಳಿದವರು ಮೂವರೆ. ಸರೋಜ, ಆಕೆಯ ಅತ್ತೆ ಮತ್ತು ತಂದೆ ಶಾಂತವೀರಪ್ಪನವರು. ಮನೆಯಲ್ಲಿ ಆಳುಕಾಳು

ಗಳಿಗೇನೂ ಕಡಿಮೆ ಇಲ್ಲ. ಶಾಂತವೀರಪ್ಪನವರು ಈ ಜಿಲ್ಲೆಯ ಡಿ. ಸಿ. ಆಗಿದ್ದಾರೆ!

ನಾನು—ಪ್ರಭು ಅಂದು ಮಾತನಾಡಿದ್ದ ವಿಷಯವನ್ನೆಲ್ಲಾ ಅವನು ಮನೆಯಲ್ಲಿ ತಿಳಿಸಿದ ಅಂತ ಕಾಣುತ್ತೆ. ಅವನು ಹೋಗಿ ಇಂದಿಗೆ ಇಪ್ಪತ್ತು ದಿನಗಳಾದುವು. ಅಂದಿನಿಂದ ಸರೋಜ ಹಾಸಿಗೆ ಹಿಡಿದಿದ್ದಾಳಂತೆ! ಶಾಂತ ವೀರಪ್ಪನವರಿಗೆ ಒಂದೂ ತೋಚದಾಗಿದೆಯಂತೆ! ನಿನ್ನೆಯಿಂದ.ಗಂಜಿಯನ್ನೂ ಕುಡಿದಿಲ್ಲವಂತೆ! ಈ ದಿನ ಬೆಳಗ್ಗೆ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದ್ದಾರೆ. ಡಾಕ್ಟರು, 'ಹೃದಯ ತೀರಾ ನಿಶ್ಯಕ್ತವಾಗಿದೆ, ಚೇತರಿಸಿಕೊಳ್ಳುವುದು ಕಷ್ಟ' ಎಂದು ಹೇಳಿದರಂತೆ. ಸರೋಜಳ ಅತ್ತೆ ಪ್ರಭುವಿಗೆ ತಂತಿ ಕೊಡಲು, ಕಣ್ಣೀರು ಕರೆಯುತ್ತಾ, ನನಗೆ ತಿಳಿಸಿದರು. ಈಗತಾನೆ 'ವಯರ್' ಮಾಡಿ ಬಂದು ನಿನಗಾಗಿ ಈ ಕಾಗದವನ್ನು ಬರೆಯುತ್ತ ಕುಳಿತೆ. ಕಾಗದ ತುಂಬಾ ಉದ್ದವಾಯ್ತು! ಮಾಡುವುದೇನು! ಎಂಥಾ ಸನ್ನಿವೇಶ ಬಂದೊದಗಿದೆ ಯಲ್ಲ ನಾಗಭೂಷಣ್! ಸರೋಜಳ ಫೋಟೋ ಇನ್ನೂ ನನ್ನ ಮೇಜಿನ ಮೇಲೆಯೇ ಇದೆ ನಾಗಭೂಷಣ್!........ಏನು ಮಾಡಲಿ ನಾಗಭೂಷಣ್! ....

ಇಂತು, ದಿಕ್ಕುತೋಚದ,

ಚಂದ್ರಶೇಖರ್.

ಒಲಿದು ಬಂದ ಸರಸ್ವತಿ

೧

" ಆನಂದ್, ಆನಂದ್ ! "

" ಓ, ಹೋ, ನಮಸ್ಕಾರ, ಬಾರಯ್ಯ ಶಂಕರ್ "

" ಅಲ್ಲ, ನೀನು ರೂಮು ಬದಲಾಯಿಸಿದುದನ್ನು ತಿಳಿಸಲೇ ಇಲ್ಲವಲ್ಲ."

" ತಿಳಿಸುವುದರ ಅವಶ್ಯಕತೆಯಾದರೂ ಏನು ಅಂತ ಬಿಟ್ಟೆ, ಅಷ್ಟೆ ! "

" ನನ್ನ ರೂಮಿನಲ್ಲೆ ಸ್ಥಳ ಕೊಡುತ್ತಿದ್ದೆನಲ್ಲ, ಏಕೆ ಬರಬಾರದಾಗಿತ್ತು? ಪರಸ್ಥಳದ ಗೆಳೆಯರಿಗೆ ಅಷ್ಟಾದರೂ ಅನುಕೂಲ ಮಾಡಿಕೊಡದಿದ್ದರೆ ಗೆಳೆಯರು ಅಂತ ಇರಬೇಕೇಕೆ ? "

" ಇರಲಿ ಬಿಡು, ಸದ್ಯಕ್ಕೆ ರೂಮು ಸಿಕ್ಕಿದೆಯಲ್ಲ. ಚನ್ನಾಗಿದೆ; ಎಲ್ಲಾ ಅನುಕೂಲಗಳಿವೆ."

" ಒಬ್ಬನೇ ಇರಲಿಕ್ಕೆ ಬೇಜಾರ ಅಷ್ಟೆ !! "

" ಪುಸ್ತಕಗಳಿವೆಯಲ್ಲ ! "

ಇಬ್ಬರೂ ಕೊಂಚಹೊತ್ತು ಮಾತನಾಡಿದ ಮೇಲೆ, ಶಂಕರನು, —

" ಸರಿ - ನಾನು ಬರುತ್ತೇನೆ; ಹೊತ್ತಾಯ್ತು. ನೆರೆ ಹೊರೆ ಚೆನ್ನಾಗಿದೆ ತಾನೆ ? " ಎಂದ.

" ಪರವಾಯಿಲ್ಲ "

" ಬರ್ತೇನೆ, ಓದುವುದನ್ನು ಕೊಂಚ ಕಡಿಮೆ ಮಾಡಿ, ಆರೋಗ್ಯವನ್ನು ಸರಿಯಾಗಿಟ್ಟುಕೋ. ಸಾಹಿತಿಗಳೆಂಬುವವರೆಲ್ಲ ಹೀಗೇ ಅಂತ ಕಾಣುತ್ತೆ "

" ಹಾಗೇ ಕದ ಮುಂದಕ್ಕೆ ಬಿಟ್ಟು ಹೋಗಯ್ಯ, ದಯಮಾಡಿ "

ಸ್ವಲ್ಪದೂರ ಹೋಗಿ ಹಿಂದಕ್ಕೆ ಬಂದು, ಕೆಳದನಿಯಲ್ಲಿ,

"ಆನಂದ್, ಒಂದು ಮಾತು, ಈ ಮನೆಯಲ್ಲಿ ಕಾಲೇಜು ವಿದ್ಯಾರ್ಥಿನಿಯರಿದ್ದಂತೆ ಕಾಣುತ್ತೆ. ಸ್ವಲ್ಪ ಜಾಗರೂಕತೆಯಿಂದಿರು."

"ಆ ಮಾತನ್ನು ನನಗೆ ಹೇಳಬೇಕಾಗಿಲ್ಲ ಶಂಕರ್! ಅವರು ಅವರ ಪಾಡಿಗೆ ಇರುತ್ತಾರೆ. ನನಗೇನು ತೊಂದರೆ! ಹೀಗೆ ಇಲ್ಲದ ಕಲ್ಪನೆ ಮಾಡುವುದು ಸರಿಯಲ್ಲ. ಹೆಣ್ಣುಮಕ್ಕಳೆಂದರೆ ಮರ್ಯಾದೆ ಬಿಟ್ಟವರು ಎಂದು ತಿಳಿದಿದ್ದೀಯೋ ಹೇಗೆ!"

"ಛೆ! ಛೆ! ನಿನ್ನ ಸಂಗಡ ಮಾತನಾಡುವುದೇ ಕಷ್ಟ ಮಹರಾಯ! ಲೋಕಾಭಿರಾಮವಾಗಿ ಒಂದು ಮಾತು ಹೇಳಿದೆ, ಅಷ್ಟೆ!"

"ಒಳ್ಳೆಯದೆ, ಸಂತೋಷ ಶಂಕರ್, Thanks"

ಶಂಕರ್ ಹೊರಟುಹೋದ. ಆನಂದಕುಮಾರ್ ಯೋಚನಾಮಗ್ನನಾದ. ತನ್ನ ವಿದ್ಯಾರ್ಥಿ ಜೀವನ ಪ್ರಾರಂಭವಾದಂದಿನಿಂದ ಬಂದ ತೊಂದರೆಗಳನ್ನೆಲ್ಲಾ ನೆನಸಿಕೊಂಡ.

'ಅಲ್ಲಾ, ಶಂಕರ್, ಸ್ವಲ್ಪ ಹುಷಾರಾಗಿರು ಎಂದು ಹೇಳಿದನಲ್ಲಾ! ಏಕಿರಬಹುದು? ಏನಿರಬಹುದು!! ನಾನು ಮಾತ್ರ ಸರಿಯಾಗಿದ್ದರಾಯ್ತು! ನನ್ನ ಅಭ್ಯಾಸವಾಯ್ತು, ನಾನಾಯ್ತು! ಬೇರೆಯವರ ಗೊಡವೆಯೇಕೆ! ಅಂತು ಕಾಲಕ್ಕೆ ತಕ್ಕಂತೆ ಜಾಗರೂಕನಾಗಿರುವುದೇ ಮೇಲು. 'ಬಲಿ ಇಲ್ಲದ ಕಾಲಕ್ಕೆ ಬದನೆಕಾಯಿ ದೆವ್ವ ಆಗುವುದೂ ಉಂಟು!!'

೨

ನಾಲ್ಕಾರು ದಿನಗಳು ಕಳೆದುವು. ಮನೆಯ ಯಜಮಾನರಲ್ಲಿ ಹೆಚ್ಚಿನ ಪರಿಚಯವೂ ಬೆಳೆಯಿತು. ಯಜಮಾನರು ತುಂಬಾ ಮೃದು. ಒಂದು ದಿನ ರೂಮಿಗೆ ಬಂದರು.

"ಓಹೋ, ಬನ್ನಿ ಸ್ವಾಮಿ, ಬನ್ನಿ ಈ ಕಡೆ, ಚಾಪೆಮೇಲೆ ಕೂತುಕೊಳ್ಳಿ"

"ಪರವಾಯಿಲ್ಲ, ಇರಲಿ ಬಿಡಿ, ನಿಮಗೇನೋ ಸ್ವಲ್ಪ ಕಾಯಿಲೆಯಂತೆ ಆಹುದೋ?"

"ಏನೂ ಇಲ್ಲ, ಸ್ವಲ್ಪ ಹೊಟ್ಟೆನೋವಾಗಿತ್ತು; ಈಗ ಪರವಾಯಿಲ್ಲ!!"

"ಇಲ್ಲಿಗೆ ಬಂದಲಾಗಾಯ್ತು ಹೀಗೇ ಬಳಲುತ್ತಿದ್ದೀರಂತೆ; ನಮ್ಮ ಸರಸ್ವತಿ ಹೇಳಿದಳು. ಈಗ ಎರಡು ವರ್ಷಗಳಿಂದಲೂ ನಿಮ್ಮನ್ನು

ನೋಡಿದ್ದಾಳಂತೆ ಅದೇನೋ ಅಖಿಲ ಕರ್ನಾಟಕ ಕವಿತಾ ಸ್ಪರ್ಧೆಯಲ್ಲಿ, ಹಿಂದಿನ ವರ್ಷ, ಮೊದಲನೆ ಬಹುಮಾನ ನಿಮಗಂತೆ ಬಂದದ್ದು. ಆಗ ನನ್ನ ಮಗಳಿಗೆ ಮೂರನೆ ಬಹುಮಾನ ಬಂದಿದೆ.''

''ಅಹುದು, ನಿಜ, ನನಗೆ ಮೊದಲನೆ ಬಹುಮಾನ ಬಂದಾಗ ಮೂರನೆ ಬಹುಮಾನ ಒಬ್ಬ ಸಹೋದರಿಯವರಿಗೆ ಅಂತ ಹೇಳಿದರು. ಇದೇ ಬೆಂಗಳೂರಿನಲ್ಲೇ ಬಹುಮಾನ ಹಂಚಿದ್ದು. ಆ ಬಹುಮಾನ ವಿಸಿಯೋಗ ಸಮಾರಂಭಕ್ಕೆ ಅವರು ಬರಲಿಲ್ಲ. ನನಗೂ ಹೆಸರು ಮರೆತುಹೋಗಿದೆ.''

''ಸರಸ್ವತಿ ಅಂತ; ಈಗ ಬಿ. ಎ. ಜೂನಿಯರ್‌ನಲ್ಲಿದ್ದಾಳೆ.''

''ಸರಸ್ವತಿ ಅಂತ ಹೆಸರು; ಪರವಾಯಿಲ್ಲ, ಚೆನ್ನಾಗಿ ಬರೆಯುತ್ತಾರೆ. ನಾನು ಅಲ್ಲಲ್ಲಿ ಪತ್ರಿಕೆಗಳಲ್ಲಿ ಅವರ ಕೃತಿಗಳನ್ನು ನೋಡುತ್ತಿರುತ್ತೇನೆ. ಚಿಂತೆ ಇಲ್ಲ; ಒಳ್ಳೆ ಬರಹಗಾತಿಯಾಗುತ್ತಾರೆ.''

''ನನಗೆ ಗೊತ್ತಿರಲಿಲ್ಲ, ನನ್ನ ಮಗಳೇ ಹೇಳಿದ್ದು, ನಿಮಗೆ ಏನೋ ಕಾಯಿಲೆ, ಬಂದಾಗಿನಿಂದ ಪೇಚಾಡುತ್ತಿದ್ದಾರೆ— ಅಂತ.''

''ನಿಜ; . ಈಗ ಕಡಿಮೆಯಾಗಿದೆ. ದೊಡ್ಡದೇನೂ ಅಲ್ಲ; ಕೊಂಚ ಹೊಟ್ಟೆನೋವು, ಅಷ್ಟೆ.''

''ಅದೆ, ಏನಾದ್ರು ಸಹಾಯ ಬೇಕಾದ್ರೆ, ನಮ್ಮ ಮನೆಯಲ್ಲಿ ಕೇಳಿ ಮಾಡಿಸಿಕೊಳ್ಳಿ. ಪರಸ್ಥಳ, ಪಾಪ! ಅದರಲ್ಲೂ ಎಂ. ಎ. ತರಗತಿಯ ವಿದ್ಯಾರ್ಥಿಗಳೆಂದರೆ ಸ್ವಲ್ಪವಾದರೂ ಅನುಕೂಲಗಳು ಬೇಡವೆ! ನೀವು ಬಡತನದಲ್ಲೇ ಎಂ. ಎ. ವರೆಗೆ ಬಂದಿರುವುದು ಬಹಳ ಹೆಚ್ಚು. ಹೋಗಲಿ, ನೀವು ಇರುವವರೆಗೆ ಬಾಡಿಗೆ ಗೀಡಿಗೆ ಏನೂ ಕೊಡಬೇಡಿ; ಚನ್ನಾಗಿ ಓದಿ ಪಾಸು ಮಾಡಿಕೊಳ್ಳಿ ಸಾಕು. ನಮಗೆ ಎಲ್ಲಾ ಅನುಕೂಲವಿದೆ. ಆದರೆ ಒಬ್ಬ ಗಂಡು ಮಗ ಆಗಲಿಲ್ಲ. ಏನು ಮಾಡುವುದು! ನಮ್ಮ ಸರಸ್ವತಿಯೇ ನಮಗೆ ಸರ್ವಸ್ವ!''

''ಅವರನ್ನೇ ಗಂಡು ಮಗುವೆಂದು ಭಾವಿಸಿಕೊಂಡರಾಯಿತು. ಗಂಡು ಮಕ್ಕಳಿಂದ ಬರುವ ಭಾಗ್ಯವಾದರೂ ಅಷ್ಟರಲ್ಲಿಯೇ ಇದೆ.''

''ಆಗಲೆ ಹತ್ತು ಗಂಟೆ, ಮಲಗಿಕೊಳ್ಳಿ. ಬೆಳಗ್ಗೆ ಏನಾದರೂ ಮಾಡಿಸಿ ಕೊಡಲೇ?''

“ಛೆ! ಛೆ! ಅನುಕೂಲವಿದೆ ಯಜಮಾನ್ರೆ. ನಾನು ಊಟಮಾಡು ತ್ತಿರುವುದು, ಕಪಿಲೇಶ್ವರ ದೇವಸ್ಥಾನವಿದೆಯಲ್ಲಾ—ಅದರ ಪಕ್ಕದಲ್ಲಿರುವ ಹಾಸ್ಟಲಿನಲ್ಲಿ. ತೊಂದರೆಯೇನೂ ಇಲ್ಲ!”

“ಹಾಗಾದ್ರೆ ಬರ್ತೇನೆ, ಮಲಕ್ಕೊಳ್ಳಿ.”

“ನಮ್ಮ ತಂದೆಯವರೂ ಹೀಗೆ. ಬೇರೆಯವರನ್ನ ಕಂಡರೆ ಬಹಳ ಪ್ರೀತಿ ಮಾಡುತ್ತಿದ್ದರು.”

“ಈಗ ನಿಮ್ಮ ತಂದೆ ಇಲ್ವೆ!?”

“ತಂದೆ, ತಾಯಿ ಇಬ್ಬರೂ ಇಲ್ಲ; ಅಣ್ಣತಮ್ಮಂದಿರೂ ಇಲ್ಲ. ಒಬ್ಬ ಚಿಕ್ಕ ತಂಗಿ ಇದ್ದಾಳೆ; ಒಬ್ಬ ಬಂಧುಗಳ ಮನೆಯಲ್ಲಿ ಬಿಟ್ಟಿದ್ದೇನೆ. ಇರಲಿ, ನಿಮಗೆ ಹೊತ್ತಾಯ್ತು ಹೋಗಿಬನ್ನಿ ಯಜಮಾನ್ರೆ.”

“ಪಾಪ! ಕಷ್ಟ!!”

ಎಂದು ಯಜಮಾನರು ತೆರಳಿದರು.

೩

ಆನಂದ ಭಾವಜೀವಿ. ವಿದ್ಯಾರ್ಥಿದೆಶೆಯಲ್ಲಿ ಮೊದಲಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಅವನಿಗೆ ಅಪಾರ ತೊಂದರೆಗಳು ಬಂದೊದ ಗಿದ್ದವು. ಅವುಗಳಿಗೆಲ್ಲಾ ಎಳ್ಳಷ್ಟೂ ಜಗ್ಗದೆ, ಸಾಹಸಮಯಿಯಾಗಿ ಅಭ್ಯಾಸವನ್ನು ಸಾಗಿಸಿದ. ಕೇವಲ ಭಾವಜೀವಿಯಾಗಿರದೆ, ರಾಷ್ಟ್ರಕಾರ್ಯದ ಕಡೆ ಕರೆ ಬಂದಾಗ ಪ್ರಾಣದ ಮೇಲೆ ಹಂಗುದೊರೆದು ಹೋರಾಡಿದ ನಿದರ್ಶನಗಳು ಬೇಕಾದಷ್ಟಿವೆ. ನಲವತ್ತೆರಡನೆ ಇಸವಿಯ ರಾಷ್ಟ್ರೀಯ ಆಂಧೋಳನದಲ್ಲಿ ಅವನು ಮಾಡಿದ ಸಾಹಸವನ್ನು ನೆನೆದುಕೊಂಡರೆ, ಮೈ ‘ಜುಂ’ ಎನ್ನುತ್ತದೆ. ಅವನು ರಾಷ್ಟ್ರದ ಮಹಾನಾಯಕರ ಕರೆಗೆ ಓಗೊಟ್ಟು ತನ್ನ ಅಭ್ಯಾಸವನ್ನು ಗಮನಿಸದೆ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದ ಪ್ರಖರತೆಯನ್ನು ಕವಿಹೃದಯಿಯಾದ ಆನಂದನಲ್ಲಿ ಇಂದು ಕಾಣಲಾಗುವುದಿಲ್ಲ!! ಪೂಜ್ಯ ಬಾಪೂಜಿಯ ತತ್ವಗಳನ್ನು ಅಕ್ಷರಶಃ ಅನುಸರಿಸಿ, ಹೋರಾಟದಲ್ಲಿ ಭಾಗಿಯಾಗಿ, ಭಾರತಕ್ಕೆ ಸ್ವಾತಂತ್ರ್ಯ ಗಳಿಸಿ ಕೊಟ್ಟ ವೀರರಲ್ಲೊಬ್ಬನಾದ ಆನಂದ ಇಂದು ಜಿಗುಪ್ಸೆಗೊಂಡು ಸಾಹಿತ್ಯ

ಲೋಕದಲ್ಲಿ ಮಾತ್ರ ವಿಹರಿಸುತ್ತಿದ್ದಾನೆ. ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಪವಿತ್ರ ಸಂಸ್ಥೆಯಲ್ಲಿ ನಡೆಯುತ್ತಿರುವ ರಾಷ್ಟ್ರಘಾತುಕ ಕಾರ್ಯಗಳನ್ನು ಕಂಡು ಜಿಗುಪ್ಸೆಗೊಂಡಿದ್ದಾನೆ. ಅಂದು ರಾಷ್ಟ್ರದ ಉನ್ನತಿಗಾಗಿ ನಿಸ್ವಾರ್ಥತೆಯಿಂದ ಶಿಸ್ತಿನ ಸೈನಿಕರಂತೆ ಗಾಂಧೀಜಿಯ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಹೋರಾಟ ನಡೆಸಿದ ಅನೇಕ ನಾಯಕರಿಂದು ಸ್ವಾರ್ಥಲಾಲಸೆಗೆ ತಿರುಗಿರುವುದು ಆನಂದನ ಕರುಳನ್ನು ಕೊರೆಯುತ್ತಲಿದೆ.

ಇಂದು ಆನಂದನ ಜೀವನವೇ ಬದಲಾಯಿಸಿದೆ. ತನ್ನ ರೂಮಿನಲ್ಲಿ ಹಾಕಿಕೊಂಡಿರುವ ಗಾಂಧೀಜಿ, ನೆಹರು, ರಾಜೇಂದ್ರ ಪ್ರಸಾದ್, ನೇತಾಜಿ ಮೊದಲಾದ ರಾಷ್ಟ್ರಪುರುಷರ ಭಾವಚಿತ್ರಗಳ ಮುಂದೆ ನಿಂತು ತನ್ಮಯನಾಗಿ—ಅವರ ಹೆಸರಿನಲ್ಲಿ, ಅನೇಕ ಸ್ವಾರ್ಥಸಾಧಕರು ಕಾಂಗ್ರೆಸ್ ಸಂಸ್ಥೆಯ ಪವಿತ್ರ ರಚನಾತ್ಮಕ ಕಾರ್ಯಕ್ಕೆ ತಿಲಾಂಜಲಿಯನ್ನಿತ್ತು ಅಧಿಕಾರ ಲಾಲಸೆಯಿಂದ ಬಡಿದಾಡುವುದನ್ನು ನೆನೆದು ಒಮ್ಮೊಮ್ಮೆ ಕಂಬನಿ ಕರೆಯುತ್ತಾನೆ.

ಈಗ ಅವನು ಸಾಹಿತ್ಯಲೋಕಕ್ಕೆ ತಿರುಗಿದ್ದಾನೆ. ಅಂತೆಯೇ ಅವನು, ರಾಷ್ಟ್ರನಾಯಕರ ಭಾವಚಿತ್ರಗಳ ಜೊತೆಗೆ ವಿಶ್ವಸಾಹಿತಿಗಳಾದ, ರವೀಂದ್ರ ನಾಥಟಾಗೂರ್, ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್ ಮೊದಲಾದವರ ಭಾವ ಚಿತ್ರಗಳನ್ನೂ ಹಾಕಿಕೊಂಡಿದ್ದಾನೆ. ಕ್ರಾಂತಿಕಾರಿಣಿಯರಾಗಿದ್ದ ಭಾರತದ ವೀರನಾರಿಯರನೇಕರ ಭಾವಚಿತ್ರಗಳು ಅವನ ಕೊಟಡಿಯಲ್ಲಿ ಸ್ಥಾನ ಪಡೆದಿವೆ. ಅಂತು ಆನಂದ ಈಗ ಸಾಹಿತಿ; ಅವನು ವಿಹರಿಸುತ್ತಿರುವುದು ಸಾಹಿತ್ಯಲೋಕದಲ್ಲಿ.

೪

ಒಂದು ದಿನ, ಭಾವನಾಪ್ರಪಂಚದಲ್ಲಿ ವಿಹರಿಸುತ್ತಿದ್ದ ಆನಂದನ ಮನಸ್ಸಿನ ಕಣ್ಣುಗಳ ಮುಂದೆ ವಿವಿಧ ಚಿತ್ರಗಳು ಹಾದುಹೋಗತೊಡಗಿದವು. ತನ್ನಷ್ಟಕ್ಕೆ ತಾನೇ ಅಂದುಕೊಳ್ಳತೊಡಗಿದ—

‘ಸರಿ, ಈ ಹೊತ್ತು ಏನಾದರೂ ಒಂದು ಪದ್ಯ ಬರೆಯೋಣ. ವಿಷಯ? ಹ್ಞಾಂ, ಅದೆ, ಈಗ ಒಂದು ತಿಂಗಳ ಹಿಂದೆ ಯೋಚಿಸಿದ್ದೆನಲ್ಲಾ ಅದನ್ನೇ ಬರೆದರಾಯ್ತು. ಯಾರೋ ಒಬ್ಬರು ಯಾರೋ ಒಬ್ಬರ ಯೋಚನೆ

ಮಾಡುತ್ತ ಒಂದು ಮರದಡಿಯಲ್ಲಿ ಕುಳಿತಿರಬೇಕು; ಅಂದರೆ, ಹೆಣ್ಣು! ಈ ಪದ್ಯದ ಮಿಡಿತ, ಆಕೆಯ ಹೃದಯದಲ್ಲಿ, ತಾನು ಯಾರ ಯೋಚನೆಯಲ್ಲಿದ್ದಾಳೆಯೋ, ಆ ವ್ಯಕ್ತಿಯೇ ಬಂದು ನುಡಿಯುತ್ತಿರುವಂತಿರಬೇಕು. ಅಹುದು ಬಹಳ ಚೆನ್ನಾಗಿರುತ್ತೆ............ಸರಿ, ಹೀಗಿರಲಿ,—

ಯಾಕಿಂತ ಚಿಂತಿ ಲಲನಾ
ಮನದಾಗೆ ತಾನ ತನನಾ!!

ನುಡಿಯುವುದು ಹಕ್ಕಿ ಮಿನುಗುವುದು ಚುಕ್ಕಿ
ಬಡಿಯುವುದು ಭಾವ ರೆಕ್ಕಿ!

ಉಷೆಯೊಳಗೆ ತಾರೆ, ಭೃಂಗಕ್ಕೆ ತೋರೆ
ಜೇಂಗೊಡವು ಧಾರೆ ಧಾರೆ!

ಕಂಪಾದ ಹೂವು, ತಂಪಾದ ಮಾವು
ಆಗೋಣ ಬಾರ ನಾವು!

ಮಾಮರದ ಹಣ್ಣು ಗಿಳಿಗಾಯ್ತು 'ಉಣ್ಣು'
ನಮಗಿನ್ನು ಸರಿಯದಾರು!

ಅಷ್ಟರಲ್ಲಿ ಮನೆಯ ಯಜಮಾನರು ಬಂದು, 'ಆನಂದಕುಮಾರಯ್ಯನವರೇ'—ಎಂದು ಕೂಗಿದರು. ಆನಂದಕುಮಾರ್ ಕೂಡಲೆ ಹೊರಗೆ ಬಂದು,

"ಏನು ಯಜಮಾನರೆ, ಬನ್ನಿ" – ಎಂದ.

"ಏನೂ ಇಲ್ಲ ಬನ್ನಿ. ಸ್ವಲ್ಪ ತಿಂಡಿ ತೆಗೆದುಕೊಳ್ಳೋಣ."

"ಪರವಾಯಿಲ್ಲ ಯಜಮಾನರೆ, ನಿಮ್ಮದು ಆಗಲಿ. ಸ್ವಲ್ಪ ಬರೆಯುವುದಿದೆ ಪೂರೈಸಿ ಬರುತ್ತೇನೆ........"

'ಪರವಾಯಿಲ್ಲ ಬನ್ನಿಯಪ್ಪ, ಹಗಲೆಲ್ಲಾ ಬರೀತಾ ಇರ್ತೀರಿ! ....'

ಎಂದುಕೊಳ್ಳುತ್ತ ಯಜಮಾನರು ಒಳಗೆ ನಡೆದರು. ಆನಂದಕುಮಾರ್ ರೂಮಿನ ಬಾಗಿಲು ಮುಚ್ಚಿಕೊಂಡು, ಯಜಮಾನರ ಹಿಂದೆ ಹೋದ.

ಯಜಮಾನರು ಹಳೆಯ ಸಂಪ್ರದಾಯದವರಾದರೂ, ಮನೆಯಲ್ಲಿ ಕುರ್ಚಿ, ಮೇಜು ಮೊದಲಾದುವುಗಳನ್ನು ಒಳ್ಳೆ ಅಚ್ಚುಕಟ್ಟಾಗಿ ಇರಿಸಿದ್ದರು. ಸೋಫಾಗಳೂ ಇದ್ದುವು. ಡಬಲ್ ಸೋಫಾದ ಮೇಲೆ ಆನಂದಕುಮಾರ್ ಮತ್ತು ಯಜಮಾನರು ಕುಳಿತುಕೊಂಡರು. ಸರಸ್ವತಿಯು ಒಳಗಿನಿಂದ ತಿಂಡಿಯ ತಟ್ಟೆಗಳನ್ನು ತಂದು, ಅವರ ಮುಂದುಗಡೆಯಿದ್ದ ಸ್ಟೂಲುಗಳ ಮೇಲಿರಿಸಿ ಒಳಗೆ ಹೋದಳು.

"ನೀನೂ ತೆಗೆದುಕೊಳ್ಳಮ್ಮ."

ಎಂದರು ಯಜಮಾನರು. ಸರಸ್ವತಿ ತಾನೊಂದು ತಟ್ಟೆಯಲ್ಲಿ ತಿಂಡಿ ತೆಗೆದುಕೊಂಡು ಬಂದು, ಸಿಂಗಲ್ ಸೋಫಾದ ಮೇಲೆ ಕುಳಿತುಕೊಂಡಳು. ವಿದ್ಯಾವಂತರನ್ನು–ಅದಕ್ಕಿಂತಲೂ ಗುಣವಂತರನ್ನು–ಪಂಚಪ್ರಾಣದಂತೆ ಕಾಣುತ್ತಿದ್ದ ಯಜಮಾನರು ಮಾತಿಗೆ ಶುರುವು ಮಾಡಿದರು.

"ನೀವು ಬಹಳ ಸಂಕೋಚ ಸ್ವಭಾವದವರಪ್ಪ......."

"ಹಾಗೇನೂ ಇಲ್ಲ. ಈಗ ತಾನೆ ಟಿಫಿನ್ ತೆಗೆದುಕೊಂಡು ಬಂದಿದ್ದೆ. ಅದಕ್ಕಾಗಿ........"

"ಊಟ ಆಗಿಲ್ಲ ತಾನೆ!...."

ಎಂದು ಸರಸ್ವತಿ ಮಧ್ಯದಲ್ಲಿ ಬಾಯಿಹಾಕಿದಳು.

"ಇಷ್ಟೊತ್ತಿಗಾಗಲೆ ಅದೆಂಥ ಊಟ....ಅದರಲ್ಲೂ ಈ ದಿನ ಭಾನುವಾರವಾದ್ದರಿಂದ ನಮ್ಮ ಹಾಸ್ಟಲಿನಲ್ಲಿ ಊಟ ಕೊಂಚ ತಡ...."

"ಇವತ್ತು ಇಲ್ಲೇ ಊಟಮಾಡಿ" ಎಂದಳು.

"ಅಹುದು ಹಾಗೇ ಮಾಡಿ."

ಎಂದರು ಯಜಮಾನರು, ತಿಂಡಿಯನ್ನು ಪೂರೈಸಿ ತಟ್ಟೆಯನ್ನು ಸ್ಟೂಲಿನ ಮೇಲಿಡುತ್ತ. ಅಷ್ಟರಲ್ಲಿ ಹೊರಗಡೆ ಯಾರೋ ಬಂದಿದ್ದರಿಂದ ಅವರ ಸಂಗಡ ಮಾತನಾಡಲು ಯಜಮಾನರು ಹೋದರು. ಸರಸ್ವತಿಯ ತಾಯಿ ಒಳಬಾಗಿಲಿನಲ್ಲಿ ಕುಳಿತುಕೊಂಡು, ಅವರೆಕಾಯಿ ಸುಲಿಯುತ್ತಿದ್ದರು. ಸರಸ್ವತಿಯು ಕಾಫಿಯನ್ನು ತೆಗೆದುಕೊಂಡುಬಂದು, ಆನಂದಕುಮಾರನಿಗೊಂದು ಲೋಟದಲ್ಲಿ ಕೊಟ್ಟು, ತಾನೂ ಕುಡಿಯುತ್ತ ಕುಳಿತುಕೊಂಡು,

"ಅಖಿಲ ಕರ್ನಾಟಕ ಕವಿತಾ ಸ್ಪರ್ಧೆಯಲ್ಲಿ ಬಹುಮಾನ ವಿನಿಯೋಗ ಮಾಡುವಾಗ ನನಗೆ ಬರಲಾಗಲಿಲ್ಲ." ಎಂದಳು.

"ಅಹುದು, ಆ ವಿಷಯವನ್ನು, ಯಜಮಾನರು ಹೇಳಿದರು. ನಿಮ್ಮ ಕವಿತೆ ಚೆನ್ನಾಗಿತ್ತು...."

"ನನ್ನದೇನು ಕವಿತೆ – ಮಹಾ........"

"ಹಾಗಲ್ಲ, Born gift (ಪ್ರತಿಭೆ) ಎಲ್ಲಿ ಹೋಗುತ್ತೆ."

"ಸಾಹಿತ್ಯದ ಬಗ್ಗೆ ಬರುವ ನಿಮ್ಮ ಲೇಖನಗಳನ್ನೆಲ್ಲಾ ಓದುತ್ತಿರುತ್ತೇನೆ ....ನಿಮ್ಮ ಪುಸ್ತಕಗಳೆಲ್ಲಾ ನನ್ನಲ್ಲಿವೆ. ಈ ದಿನ ಬೆಳಗ್ಗೆ ಅವುಗಳನ್ನೆಲ್ಲಾ ನಮ್ಮ ತಂದೆಯವರಿಗೆ ತೋರಿಸಿದೆ. ತುಂಬಾ ಸಂತೋಷಪಟ್ಟರು."

"ಅದಿರಲಿ, ನಿಮ್ಮ ಲೇಖನ, ಕಥೆಗಳನ್ನು ಅಲ್ಲಲ್ಲಿ ನೋಡಿದ್ದೇನೆ, ತುಂಬಾ ಚೆನ್ನಾಗಿವೆ........"

"ನನಗೆ ಸರಿಯಾಗಿ ಸಲಹೆ ಕೊಡುವವರಿಲ್ಲ."

"ಸಲಹೆಯೇನು ಬಂತು. ಪ್ರತಿಭೆಯಿದ್ದರೆ ತಾನಾಗಿಯೇ ಬರುತ್ತೆ. ನೀವು ರಾಜಕೀಯ ಸನ್ನಿವೇಶಗಳನ್ನು ಹೆಚ್ಚಾಗಿ ಬಳಸಿಕೊಳ್ಳುತ್ತೀರಿ. ಸಾಹಿತ್ಯಮಯ ಶೈಲಿಯಲ್ಲಿ ಎಣೆಯುವುದರಿಂದ ಅವು ಚೆನ್ನಾಗಿಯೇ ಇರುತ್ತವೆ....."

"ನೀವು ಮೊದಲು ಕಥೆಗಳಲ್ಲಿ ರಾಜಕೀಯವನ್ನು ಎಣೆಯುತ್ತಿದ್ದಿರಿ. ಇತ್ತೀಚೆಗೆ ಕೇವಲ ಸಾಮಾಜಿಕ ಸಮಸ್ಯೆಗಳನ್ನೇ ಕಥಾವಸ್ತುವನ್ನಾಗಿ ತೆಗೆದು ಕೊಳ್ಳುತಿದ್ದೀರಿ, ಏಕೆ ?"

"ರಾಜಕೀಯ ವಸ್ತುಗಳು ಇತಿಹಾಸವಾಗಿಬಿಡುತ್ತವೆ. ಅವುಗಳಿಗೆ, ಅಷ್ಟಾಗಿ, ಶಾಶ್ವತಸ್ಥಾನ ದೊರೆಯುವುದಿಲ್ಲ. ಆದ್ದರಿಂದ, ನಿತ್ಯವಾಗಿರುವ ಸಾಮಾಜಿಕ ಸಮಸ್ಯೆಗಳನ್ನೇ ಚಿತ್ರಿಸುವುದರಲ್ಲಿ ಸಾರ್ಥಕತೆ ಇದೆ ಎಂದು ಕೊಂಡಿದ್ದೇನೆ. ನೀವು ಒಮ್ಮೆ ನೌಖಾಲಿ ತಿಪ್ಪೇರಗಳ ಕೋಮುವಾರು ಗಲಭೆಯ ಬಗ್ಗೆ ಬರೆದ ಕತೆಯನ್ನು ನಾನು ಓದಿದ ಹಾಗೆ ಜ್ಞಾಪಕವಿದೆ. ಅದಕ್ಕೆ ಅಂದಿಗಿದ್ದ ಸ್ಥಾನಮಾನ ಇಂದಿಗಿಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ, ಅದು ಇತಿಹಾಸವಾಗಿ ಪರಿಣಮಿಸುತ್ತೆ. ಹೈದರಾಬಾದ್ ಹೋರಾಟದ ಸಮಯವನ್ನು ಚಿತ್ರಿಸಲು ಬರೆದಿರುವ ನಿಮ್ಮ ದಿನಚರಿಯು

ರೂಪದ ಲೇಖನಗಳನ್ನೂ ನೋಡಿದ್ದೇನೆ. ಅದರ ಶೈಲಿ ಬಹು ಸುಂದರ; ವಿಷಯ ಮನೋಜ್ಞ! ಆದರೆ, ಇಂದಿಗೆ, ಆ ಘಟನೆ ಹಳೆಯದಾಯ್ತು. ಆದ್ದರಿಂದ, ಜನತೆಯ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿರುವ ಸಮಸ್ಯೆ, ಸನ್ನಿವೇಶಗಳನ್ನು ಸಜೀವವಾಗಿ ಚಿತ್ರಿಸುವುದರಲ್ಲಿ ಸಾರ್ಥಕತೆ ಇದೆ..... ಶಾಂತಿಸಾಧನೆಯ ಬಗ್ಗೆ, ದಿನಪತ್ರಿಕೆಯೊಂದರಲ್ಲಿ ಬರೆದಿದ್ದ ನಿಮ್ಮ ಲೇಖನ ತುಂಬಾ ವಿಚಾರವತ್ತಾಗಿದೆ.....ಹಾಗೆ ಬರೆಯಬೇಕು...."

"ಹೋಗಲಿ ಬಿಡಿ, ನನ್ನದೇನು ಮಹಾ,...."

ಅಷ್ಟರಲ್ಲಿ ಆನಂದಕುಮಾರನ ಸ್ನೇಹಿತರು ಕೆಲವರು ಬಂದಿದ್ದರಿಂದ, ಬರುತ್ತೇನೆಂದು ಹೇಳಿ ರೂಮಿಗೆ ಹೋದ.

*

ಆನಂದಕುಮಾರನು ಬೆಳಗ್ಗೆ ಅರ್ಧ ಮಾಡಿದ್ದ ಪದ್ಯವನ್ನು ಪೂರೈಸ ಬೇಕೆಂದು ಬರೆಯತೊಡಗಿದ.

ಆಗಸದಿ ಮೋಡ ಓಡುವುದು ನೋಡ
ಅದಕೆಂಬರಾರು ಬೇಡ !

ಮೆಲುನಡೆಯ ಪವನ, ಈ ಕಡೆಗೆ ಗಮನ
ಅದಕೆಂತ ಮನದಿ ತನನಾ !

ಹೂವಿಂದ ಕಂಪ, ಸೀರಿಂದ ತಂಪ
ಹಕ್ಕಿಗಳ ದನಿಯು ಇಂಪ,
ತರುತಿಹುದು ಪವನ, ಕಟ್ಟುವುದು ಕವನ
ಮೈಮರೆಯುತಿಹುದು ಭುವನ! !
ಇದಕೆಲ್ಲ ದೇವ ಇಹನೊಬ್ಬ ಕಾವ
ಬೆರೆತಿರಲಿ ಜೀವ ಜೀವ! !
ಬೆರೆತಿರಲಿ ಜೀವ ಜೀವ! !

ಪದ್ಯ ಬರೆದಾದ ಮೇಲೆ, ತನ್ನ ತರಗತಿಯ ಪುಸ್ತಕಗಳನ್ನು ಸ್ವಲ್ಪ ಹೊತ್ತು ತಿರುವಿ ಹಾಕಿ, ಐದು ಗಂಟೆ ಸಮಯವಾದ್ದರಿಂದ ಹೊರಗಡೆ ತಿರು

ಗಾಡಿಕೊಂಡುಬರಲು ಹೋದ. ಮನೆಯ ಯಜಮಾನ ಯಜಮಾ
ಇಬ್ಬರೂ ಮೂರುಗಂಟೆಯ ಸಿನಿಮಾಕ್ಕೆ ಹೋದರು. ಏನೋ ಬರೆಯುವುದಿ
ಯೆಂದು ಹೇಳಿ, ಸರಸ್ವತಿ ಸಿನಿಮಾಕ್ಕೆ ಹೋಗಲಿಲ್ಲ.

೬

ಯಜಮಾನರು ಅಂದು ತಡವಾಗಿಯೇ ಬಂದರು. ವ್ಯಾಟ್ನಿಯನ್ನು ಮುಗಿಸಿಕೊಂಡು, ಅವರ ಬಂಧುಗಳ ಮನೆಗೆ ಯಾವುದೋ ವಿಚಾರವಾಗಿ ಮಾತನಾಡಿಕೊಂಡು ಬರಲು ಹೋಗಿದ್ದರು. ಅವರು ಬಂದಾಗ ಸುಮಾರು ರಾತ್ರಿ ಒಂಭತ್ತು ಘಂಟೆ. ಬರುವುದರೊಳಗೆ ಸರಸ್ವತಿ ಅನ್ನ ಸಾರು ಮಾಡಿಟ್ಟಿದ್ದಳು. ಕಾಲೇಜು ವಿದ್ಯಾರ್ಥಿನಿಯಾದರೂ ಅಡಿಗೆ ಮಾಡುವುದನ್ನು ಕಲಿತಿದ್ದಾಳೆ. ಎಲ್ಲರದು ಊಟವಾಯ್ತು. ಅಷ್ಟರಲ್ಲಿ ನೆರೆಮನೆಯ ಸೋಮಣ್ಣನವರು ಬಂದರು. ಸಾಮಾನ್ಯವಾಗಿ ಆಗಾಗ ಯಜಮಾನರೂ ಸೋಮಣ್ಣನವರೂ ಊಟವಾದ ಮೇಲೆ ಕೊಂಚ ಹರಟೆ ಹೊಡೆಯುವ ಪದ್ಧತಿ.

" ಈ ಹೊತ್ತು ಊಟ ತಡವಾದಹಾಗಿದೆಯಲ್ಲಾ "

" ಅಹುದು, ಸಿನಿಮಾ ನೋಡಿಯಾದ ಮೇಲೆ ನಮ್ಮ ರಾಜಶೇಖರಪ್ಪ ನವರ ಮನೆಗೆ ಹೋಗಿದ್ದೆವು. ಅದೇ, ನಮ್ಮ ಸರಸ್ವತಿಯ ಲಗ್ನದ ವಿಚಾರ ಅದಕ್ಕಾಗಿ ಸ್ವಲ್ಪ ಮಾತನಾಡಿ ಬರೋಣಾಂತ ಹೋಗಿದ್ದೆವು."

ಅಷ್ಟರಲ್ಲಿ ಆನಂದಕುಮಾರ್ ಬಂದು, "ಯಜಮಾನರೆ, ನಾ ಊರಿಗೆ ಹೋಗುತ್ತೇನೆ; ೧೫ ದಿನಗಳೊಳಗೆ ಬಂದುಬಿಡುತ್ತೇನೆ. ಈ ಹೇಗೂ ರಜಾ ದಿನಗಳಿವೆ....' ಎಂದು ಹೇಳಿ ಹೊರಟುಹೋದ. ಸೋಮಣ್ಣ ನವರು ಮಾತು ಪ್ರಾರಂಭಿಸಿದರು.

"ಯಾರಿಗೆ! ರಾಜಶೇಖರಪ್ಪನವರ ಮಗ ಶಂಭುವಿಗೋ ?"

"ಅಹುದು, ನಮ್ಮ ಯಜಮಾನಿಯ ಅಣ್ಣ ತಾನೆ, ರಾಜಶೇಖರಪ್ಪ ! ಅಣ್ಣನ ಮಗನಿಗೆ ಕೊಡಬೇಕೆಂಬ ಆಸೆ ಸಹಜವಾದುದು ತಾನೆ! "

" ಹುಡುಗ ಏನು ಓದಿದ್ದಾನೆ ? "

" ಮೆಟ್ರಿಕ್ ಆಗಿದೆ. ಅವರದು ಒಂದು ಸ್ಟೇಷನರಿ ಅಂಗಡಿ ಇದೆ ಅದರ ವ್ಯಾಪಾರವನ್ನು ಅವನೇ ನೋಡಿಕೊಳ್ಳುತ್ತಾನೆ. ಪರವಾಯಿಲ್ಲ ಜಾಣ.

“ಅದೆಂಥ ಮಾತು ಶಾಂತಣ್ಣನವರೆ? ಬಿ. ಎ. ಓದಿದ ಹುಡಿಗೀನ ಮ್ಯಾಟ್ರಿಕ್ ಆದವನಿಗೆ ಮಾಡೋದೆ?”

“ಏನೋ ಚಿಕ್ಕಂದಿನಿಂದ ಹಾಗೇ ಅಂದುಕೊಂಡು ಬಂದಿದ್ದಾರೆ. ಮತ್ತೇನು ಮಾಡೋದು; ಹಳೇ ಬಂಧುತ್ವ!”

“ಸರಿಬಿಡಿ, ಋಣಾನುಬಂಧವಿದ್ದಲ್ಲಿ ಆಗುತ್ತೆ.”

“ಋಣಾನುಬಂಧವೇನು ಸೋಮಣ್ಣ; ನಾಳೆ ಕಾರ್ತೀಕಮಾಸದಲ್ಲಿ ಲಗ್ನ ಏರ್ಪಾಟು ಮಾಡಬೇಕೆಂದಾಗಿದೆ! ಬೀಗರೂ ಒಪ್ಪಿದ್ದಾರೆ. ಇವತ್ತು ಸೋಮವಾರ ತಾನೆ! ಗುರುವಾರ ನಿಶ್ಚಯಕಾರ್ಯ ಮಾಡಬೇಕೆಂದಿದ್ದೇವೆ.”

“ಮಗಳನ್ನು ಕೇಳಿದ್ದೀರಾ?”

“ಕೇಳೋದಿನ್ನೇನು, ಆಕೆಗೆ ಗೊತ್ತೇ ಇದೆ.”

“ಇದು ನಮ್ಮ ಕಾಲವಲ್ಲ ಶಾಂತಣ್ಣ! ಈಗಿನ ಹುಡುಗರನ್ನೇ ಆಗಲಿ ಹುಡುಗಿಯರನ್ನೇ ಆಗಲಿ ಕೊಂಚ ವಿಚಾರ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ–ಅಷ್ಟೆ! ಸರಿ, ವೇಳೆಯಾಗಿದೆ, ಬರ್ತೇನೆ. ಎಲ್ಲಿ, ಕೊಂಚ ನಶ್ಯ ಕೊಡಿ.”

“ತಗೊಳ್ಳಿ.”

“ಬರ್ತೇನೆ, ನಮಸ್ಕಾರ.”

“ನಮಸ್ಕಾರ.” ಎಂದು ಸೋಮಣ್ಣನವರು ಹೊರಟುಹೋದರು.

೭

ಈ ಮಾತುಗಳನ್ನು ಸರಸ್ವತಿ ಆಲಿಸದೆ ಇರಲಿಲ್ಲ. ಬಹಳ ಚುರುಕು ಬುದ್ಧಿಯ ಹುಡುಗಿ. ಸಿಡಿಲು ಬಡಿದಂತಾಯ್ತು. ಬುದ್ಧಿಗೆ ಕತ್ತಲು ಕವಿದಂತಾಯ್ತು! ಪ್ರಪಂಚವೇ ಶೂನ್ಯವಾದಂತಾಯ್ತು.

ಅಂದು ಸರಸ್ವತಿಗೆ ನಿದ್ರೆಯೇ ಇಲ್ಲ! ಕಾಗದದ ಮೇಲೆ ಕಾಗದ ಏನನ್ನೋ ಸುಮ್ಮನೆ ಗೀಚುತಿದ್ದಾಳೆ. ಆಕೆಯ ರೂಮು ಪ್ರತ್ಯೇಕವಾಗಿತ್ತು, ಬೇಕಾದ ಅನುಕೂಲಗಳೆಲ್ಲಾ ಇದ್ದುವು. ಒಬ್ಬಳೇ ಮಗಳಾದ್ದರಿಂದ ಬಹಳ ಪ್ರೀತಿಯಿಂದ ಸಾಕಿದ್ದರು. ಗಂಟೆ ಒಂದಾಯ್ತು! ಎರಡಾಯ್ತು! ಮೂರಾಯ್ತು!! ಸರಸ್ವತಿಗೆ ನಿದ್ರೆಯೇ ಇಲ್ಲ. ಯೋಚನೆಯ ಮೇಲೆ ಯೋಚನೆ ಮಾಡತೊಡಗಿದ್ದಾಳೆ.

'ಈ ಎರಡು ವರ್ಷಗಳಿಂದ ಯಾರ ತೋಳ್ ಸೆರೆಯ ಆಶ್ರಯ ವನ್ನು ಬಯಸಿದ್ದೆನೋ, ಅವರೇ ನಮ್ಮ ಮನೆಯ ಮುಂದೆ ಬಂದಿರುವಾಗ ಅವರನ್ನು ಪಡೆಯುವಷ್ಟು ಅದೃಷ್ಟವಿಲ್ಲದಂತಾಯ್ತು! ಯಾರ ಕೃತಿಗಳು ನನ್ನ ಹೃದಯವನ್ನು ಸೂರೆಗೊಂಡವೋ, ಅಂಥವುಗಳನ್ನು ಸೃಷ್ಟಿಸಿದ ಕೈಹಿಡಿದು ನನ್ನ ಜೀವನವನ್ನು ಅನ್ಮೃತಮಯವನ್ನಾಗಿ ಮಾಡಿಕೊಳ್ಳದೆ ಹೋಗ ಬೇಕಾಯ್ತು! ಏನು ಮಾಡಲಿ! ನಮ್ಮ ತಂದೆಯವರಿಗೆ ಖಂಡಿತವಾಗಿ ತಿಳಿಸಿ ಬಿಡಲೆ! ಅಹುದು, ಅವರು ಒಪ್ಪುತ್ತಾರೋ ಇಲ್ಲವೋ!' ಎಂದು ಯೋಚಿಸ ತೊಡಗಿದಳು. ಆನಂದಕುಮಾರ್ ಅಂದು ಬರೆದ ಕವನವನ್ನು ನೋಡಲು ಸರಸ್ವತಿಯ ಕಡೆಗೆ ಕೊಟ್ಟಿದ್ದ. ಪದ್ಯದ ಕೊನೆಯ ನುಡಿ ಸರಸ್ವತಿಯ ಒಳಗಣ್ಣಿಗೆ ಯಾವುದೋ ಒಂದು ಬಗೆಯ ಬೆಳಕನ್ನು ಕಾಣಿಸುತ್ತಿತ್ತು. ಅದನ್ನು ಮತ್ತೆ ಮತ್ತೆ ಓದತೊಡಗಿದಳು.

ಇದಕೆಲ್ಲ ದೇವ ಇಹನೊಬ್ಬ ಕಾವ
ಬೆರೆತಿರಲಿ ಜೀವ ಜೀವ!!

ಈ ನುಡಿಯಲ್ಲಿ ಸರಸ್ವತಿಯ ಒಳಗಣ್ಣಿಗೆ ಯಾವುದೋ ಒಂದು ಆಶಾ ಕಿರಣ ಕಾಣುತ್ತಲಿತ್ತು. ಹಾಗೇ ಅದನ್ನು ಕಣ್ಣಿಗೆ ಒತ್ತಿಕೊಂಡಳು,.......!

ಆನಂದಕುಮಾರ್ ೫ ಗಂಟೆಗೆ ಸರಿಯಾಗಿ ಎದ್ದು ಲೈಟು ಹಾಕಿದ. ಆಶ್ಚರ್ಯವೇ ಆಶ್ಚರ್ಯ! ಬಾಗಿಲು ಹಾಗೇ ತೆರೆದಿದೆ! ಹಾಸಿಗೆಯ ಮೇಲೆ ಒಂದು ಚೀಟಿ, ಒಂದು ಗುಲಾಬಿ ಹೂ ಬಿದ್ದಿವೆ! ಫಕ್ಕನೆ ಚೀಟಿಯನ್ನು ಕೈಗೆತ್ತಿ ಕೊಂಡು, ಓದುತ್ತಾನೆ; ಮತ್ತೆ ಮತ್ತೆ ಓದುತ್ತಾನೆ; ಪುನಃ ಓದುತ್ತಾನೆ— "ಒಲಿದು ಬಂದ ಸರಸ್ವತಿ."

ಗಲ್ಲಕ್ಕೆ ಕೈಕೊಟ್ಟು ಕುಳಿತುಬಿಟ್ಟ. ಕಣ್ಣು ಚೀಟಿಯನ್ನು ಓದುತ್ತಲೇ ಇವೆ! ಅವನ ಮಗ್ಗುಲಿಗೆ ಬಿದ್ದು ಮೆತ್ತಗಾಗಿದ್ದ ಚೆಂಗುಲಾಬಿಯ ಹೂವನ್ನು ಕೈಗೆತ್ತಿಕೊಳ್ಳುತ್ತಾನೆ. ಒಮ್ಮೆ ಆ ಹೂವನ್ನು ದಿಟ್ಟಿಸಿ ನೋಡಿದ! ದೃಷ್ಟಿಯು ಮತ್ತೆ ಚೀಟಿಯ ಮೇಲೆ ಹೊರಳಿತು—"ಒಲಿದು ಬಂದ ಸರಸ್ವತಿ."

ಬೆಂಗಳೂರು ನಗರ ಅರಳೇಪೇಟೆಯಲ್ಲಿರುವ ಓಂಕಾರ್ ಪವರ್ ಪ್ರೆಸ್ಸಿನಲ್ಲಿ
ಬಿ. ಎಸ್. ನಾರಾಯಣರಾಯರಿಂದ ಮುದ್ರಿಸಲ್ಪಟ್ಟಿತು.

AKSHARA GRANTHALAYA
ACC.NO. S021884